ಸೋಮವಾರ, ಜುಲೈ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 208 | ಪುಟ 12


prajavani.net prajavani • www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಬಿಎಸ್‌ಎನ್‌ಎಲ್
ಛತ್ತೀಸಗಢದ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ 4 ಸಾವಿರ ಮೊಬೈಲ್ ಟವರ್‌ಗಳ ನಿರ್ಮಾಣಕ್ಕೆ ಬಿಎಸ್‌ಎನ್‌ಎಲ್ ಮುಂದಾಗಿದೆ ಎಂದು ದೂರಸಂಪರ್ಕ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ರಾಜ್ಯ ಸಚಿವ ಪೆಮ್ಮಸಾನಿ ಚಂದ್ರಶೇಖರ್ ತಿಳಿಸಿದ್ದಾರೆ



ಮೋದಿ ದೇಗುಲ ಭೇಟಿ
ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿನ ಗಂಗೈಕೊಂಡ ಚೋಳಪುರಂನಲ್ಲಿರುವ ಬೃಹದೀಶ್ವರ ದೇಗುಲಕ್ಕೆ ಭಾನುವಾರ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದರು

ಉಕ್ಕಿದ ನದಿಗಳು; ಪ್ರವಾಹದ ಭೀತಿ 4 | ಕುಂಟುತ್ತಿದೆ 'ಸೂರು' ಕಾರ್ಯ 4A

'ಗ್ಯಾರಂಟಿ'ಗೆ ಪರಿಶಿಷ್ಟರ ಹಣ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾರ್ಯಕ್ರಮಗಳ 2025–26 ನೇ ಸಾಲಿನ ₹11,896.84 ಕೋಟಿ ವರ್ಗಾವಣೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಟಿಎಸ್‌ಪಿ (ಬುಡಕಟ್ಟು ಉಪಯೋಜನೆ) ಅಡಿ ಪರಿಶಿಷ್ಟರ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ (2025–26) ಒದಗಿಸಿದ ಒಟ್ಟು ₹42,017.51 ಕೋಟಿ ಅನುದಾನದಲ್ಲಿ ₹11,896.84 ಕೋಟಿಯನ್ನು ಪಂಚ 'ಗ್ಯಾರಂಟಿ' ಯೋಜನೆಗಳ ಅನುಷ್ಠಾನಕ್ಕೆ ಹಂಚಿಕೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾರ್ಯಕ್ರಮಗಳ 2025–26ನೇ ಸಾಲಿನ ಕ್ರಿಯಾ ಯೋಜನೆಯ ಬಗ್ಗೆ ನೋಡಲ್ ಏಜೆನ್ಸಿಗಳ ಸಭೆ ಇತ್ತೀಚೆಗೆ ನಡೆದಿದೆ. ಕ್ರಿಯಾ ಯೋಜನೆಯಲ್ಲಿ 'ಗ್ಯಾರಂಟಿ' ಯೋಜನೆಗಳಿಗೆ ಅನುದಾನ ಒದಗಿಸಿದ ಮಾಹಿತಿಯಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಆಗಸ್ಟ್ 5ರಂದು ನಡೆಯಲಿರುವ ಎಸ್‌ಸಿ, ಎಸ್‌ಟಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಈ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಕುರಿತು ಚರ್ಚೆ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ 'ಗ್ಯಾರಂಟಿ' ಯೋಜನೆಗಳಿಗೆ 2023–24ನೇ ಸಾಲಿನಲ್ಲಿ ₹11,114 ಕೋಟಿ, 2024–25ನೇ ಸಾಲಿನಲ್ಲಿ ₹14,282.38 ಕೋಟಿಯನ್ನು ಸರ್ಕಾರ ಒದಗಿಸಿತ್ತು. ಪರಿಶಿಷ್ಟರ ಕಾರ್ಯಕ್ರಮಗಳಿಗೆ ಒದಗಿಸಿದ ಅನುದಾನವನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ವಿಚಾರವು ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಜಟಾಪಟಿಗೆ ವಸ್ತುವಾಗಿತ್ತು.

ಈ ಬಾರಿ ರಾಜ್ಯದ ಒಟ್ಟು ಅಭಿವೃದ್ಧಿ ಬಜೆಟ್ ಮೊತ್ತ ₹1.69 ಲಕ್ಷ ಕೋಟಿ. ಅದರಲ್ಲಿ ಶೇ 24.10 ಅನುದಾನ ಮತ್ತು ಹಿಂದಿನ ವರ್ಷಗಳಲ್ಲಿ ಬಳಕೆಯಾಗದ ₹72.38 ಕೋಟಿಯನ್ನು ಸೇರಿಸಿ ಒಟ್ಟು ₹42,017.51 ಕೋಟಿಯನ್ನು ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಈ ವರ್ಷ ಹಂಚಿಕೆ ಮಾಡಲಾಗಿದೆ.

ಸರ್ಕಾರದ ಮಹತ್ವಾಕಾಂಕ್ಷಿ 'ಶಕ್ತಿ' (ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ) ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಎಸ್‌ಸಿಎಸ್‌ಪಿ ಅಡಿ ₹1,060 ಕೋಟಿ (ಶೇ 20) ಮತ್ತು ಟಿಎಸ್‌ಪಿ ಅಡಿ ₹477 ಕೋಟಿ (ಶೇ 9) ಒದಗಿಸಲಾಗಿದೆ. ಶಕ್ತಿ ಯೋಜನೆಯಲ್ಲಿ ಪರಿಶಿಷ್ಟ ಫಲಾನುಭವಿಗಳ ನಿಖರ ಸಂಖ್ಯೆ ಲಭ್ಯ ಇಲ್ಲದಿರುವ ಕಾರಣ ಈ ಮೊತ್ತವನ್ನು ಶೇ 24.10ಕ್ಕೆ ಸೀಮಿತಗೊಳಿಸಲು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೆ, ಎಸ್‌ಸಿಎಸ್‌ಪಿ ಅಡಿ ₹151.05 ಕೋಟಿ ಮತ್ತು ಟಿಎಸ್‌ಪಿ ಅಡಿ ₹108.65 ಕೋಟಿ ಸೇರಿ ಒಟ್ಟು ₹259.70 ಕೋಟಿ ಹಿಂಪಡೆದು ಬೇಡಿಕೆ ಇರುವ ಕಾರ್ಯಕ್ರಮಗಳಿಗೆ ಮರು ಹಂಚಿಕೆ ಮಾಡಬಹುದು ಎಂದೂ ವಿವರಿಸಲಾಗಿದೆ.

ಇಂಧನ ಇಲಾಖೆಯ 'ಗೃಹ ಜ್ಯೋತಿ' ಯೋಜನೆಗೆ ವಿದ್ಯುತ್ ಪೂರೈಕೆ ವೆಚ್ಚ ಸೇರಿ ಬಜೆಟ್‌ನಲ್ಲಿ ಒಟ್ಟು ₹10,100 ಕೋಟಿ ಒದಗಿಸಲಾಗಿದ್ದು, ಮಾಸಿಕ 200 ಯೂನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್ಲ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. ಈ ಯೋಜನೆಗೆ ಎಸ್‌ಸಿಎಸ್‌ಪಿ ಅಡಿ ₹1,818 ಕೋಟಿ ಮತ್ತು ಟಿಎಸ್‌ಪಿ ಅಡಿ ₹808 ಕೋಟಿ ಹಂಚಿಕೆ ಮಾಡಲಾಗಿದೆ.


2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 21.78 ಲಕ್ಷ ಎಸ್‌ಸಿ, 8.76 ಲಕ್ಷ ಎಸ್‌ಟಿ ಕುಟುಂಬಗಳಿವೆ.

'ಅನ್ನ ಭಾಗ್ಯ'ಕ್ಕೆ ಬಜೆಟ್‌ನಲ್ಲಿ ₹6,426 ಕೋಟಿ ಒದಗಿಸಲಾಗಿದೆ. ಅದರಲ್ಲಿ ಎಸ್‌ಸಿಎಸ್‌ಪಿಯಿಂದ ₹1,156.68 ಕೋಟಿ, ಟಿಎಸ್‌ಪಿಯಿಂದ ₹514.08 ಕೋಟಿ ಹಂಚಿಕೆ ಮಾಡಲು ಪ್ರಸ್ತಾಪಿಸಲಾಗಿದೆ. ಆಹಾರ ಇಲಾಖೆಯ ಮಾಹಿತಿ ಪ್ರಕಾರ 60,44,090 ಎಸ್‌ಸಿ ಮತ್ತು 26,97,261 ಎಸ್‌ಟಿ ಫಲಾನುಭವಿಗಳಿದ್ದಾರೆ. ಪ್ರತಿ ಫಲಾನುಭವಿಗೆ ಪ್ರತಿ ತಿಂಗಳಿಗೆ ₹130ರಂತೆ (ಒಂದು ಕಿಲೋ ಅಕ್ಕಿಗೆ ₹26ರಂತೆ 5 ಕಿಲೋದ ಮೊತ್ತ) ಖಾತೆಗೆ ಜಮೆ ಮಾಡಲು ಒಂದು ವರ್ಷಕ್ಕೆ ₹1,560 ಅಗತ್ಯವಿದೆ' ಎಂದು ಅಂದಾಜಿಸಲಾಗಿದೆ.

▶9



2025–26ರಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ



ಅಂಕಿ ಅಂಶಗಳು

2025–26ನೇ ಸಾಲಿನಲ್ಲಿ ಹಂಚಿಕೆ (ಕೋಟಿಗಳಲ್ಲಿ)

₹29,991.69 ಎಸ್‌ಸಿಎಸ್‌ಪಿ

₹12,025.82 ಟಿಎಸ್‌ಪಿ

₹42,017.51 ಒಟ್ಟು ಹಂಚಿಕೆ



ಅತಿ ಹೆಚ್ಚು ಅನುದಾನ: 5 ಯೋಜನೆಗಳಲ್ಲಿ 4 'ಗ್ಯಾರಂಟಿ'

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ಪ್ರಸಕ್ತ ಸಾಲಿನಲ್ಲಿ ಅತಿ ಹೆಚ್ಚು ಅನುದಾನ ನೀಡಿರುವ ಐದು ಯೋಜನೆಗಳ ಪೈಕಿ ನಾಲ್ಕು 'ಗ್ಯಾರಂಟಿ' ಯೋಜನೆಗಳು. ಅದರಲ್ಲೂ ಗೃಹಲಕ್ಷ್ಮಿ ಮೊದಲ ಸ್ಥಾನದಲ್ಲಿದ್ದು, ನಂತರ ಸ್ಥಾನದಲ್ಲಿ ಗೃಹ ಜ್ಯೋತಿ, ಅನ್ನಭಾಗ್ಯ, ಶಕ್ತಿ ಇವೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ಮೀಸಲಿಟ್ಟ ಒಟ್ಟು ಅನುದಾನದಲ್ಲಿ ಅತೀ ಹೆಚ್ಚು ₹8,101.17 ಕೋಟಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಹಂಚಿಕೆ ಮಾಡಲಾಗಿದೆ. ಅದರಲ್ಲಿ ₹7,438.08 ಕೋಟಿಯನ್ನು 'ಗೃಹ ಲಕ್ಷ್ಮಿ'ಗೆ ನೀಡಲಾಗಿದೆ. ಗೃಹ ಲಕ್ಷ್ಮಿಗೆ ಬಜೆಟ್‌ನಲ್ಲಿ ₹28,608.40 ಕೋಟಿ ಒದಗಿಸಲಾಗಿದ್ದು, ಅದರಲ್ಲಿ ಎಸ್‌ಸಿಎಸ್‌ಪಿಯಿಂದ ₹5,364 ಕೋಟಿ, ಟಿಎಸ್‌ಪಿಯಿಂದ ₹2,074.08 ಕೋಟಿ ನೀಡಲು ಪ್ರಸ್ತಾಪಿಸಲಾಗಿದೆ.

ಎಸ್‌ಸಿಎಸ್‌ಪಿ ಅಡಿ ₹507.49 ಕೋಟಿ ಮತ್ತು ಟಿಎಸ್‌ಪಿ ಅಡಿ ₹400.05 ಕೋಟಿ ಸೇರಿ ಒಟ್ಟು ₹907.54 ಕೋಟಿ ಹಳೆ ಬಾಕಿ ಉಳಿದಿದೆ. ಅದನ್ನೂ ಒಳಗೊಂಡು ಪ್ರಸಕ್ತ ಸಾಲಿನಲ್ಲಿ ₹8,345.62 ಕೋಟಿ ಲಭ್ಯವಿದೆ. 23,05,619 ಎಸ್‌ಸಿ, 9,01,122 ಎಸ್‌ಟಿ ಫಲಾನುಭವಿಗಳು ಇದ್ದಾರೆಂದು ಇಲಾಖೆ ಅಂದಾಜಿಸಿದ್ದು, ಈ ಅಂಕಿಅಂಶದ ಆಧಾರದಲ್ಲಿ ₹1,290.79 ಕೋಟಿ ಉಳಿಕೆ ಆಗಬಹುದು ಎಂದೂ ಅಂದಾಜಿಸಲಾಗಿದೆ.

ಕಾವೇರಿಯ ಸೊಬಗು...

ಪ್ರಜಾವಾಣಿ ಚಿತ್ರ: ಗಂಗೇಶ್ ಬಿ.ಪಿ.



ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕೊಣನೂರು ಬಳಿಯ ಕಟ್ಟೇಪುರದ ಕೃಷ್ಣರಾಜ ಅಣೆಕಟ್ಟೆಯಿಂದ ಕಾವೇರಿ ನದಿಯು ಭಾನುವಾರ ಉಕ್ಕಿ ಹರಿಯುತ್ತಿರುವ ನೋಟ

ಕಾಲ್ತುಳಿತ: 8 ಮಂದಿ ಸಾವು

ಹರಿದ್ವಾರದ ದೇಗುಲದಲ್ಲಿ ದುರಂತ: 30 ಜನರಿಗೆ ಗಾಯ

ಹರಿದ್ವಾರ (ಪಿಟಿಐ): ಹರಿದ್ವಾರದ ಮಾನಸಾದೇವಿ ದೇಗುಲದಲ್ಲಿ ಭಾನುವಾರ ಸಂಭವಿಸಿದ ಕಾಲ್ತುಳಿತದಲ್ಲಿ ಕನಿಷ್ಠ 8 ಮಂದಿ ಮೃತಪಟ್ಟಿದ್ದಾರೆ ಮತ್ತು 30 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

'ಬೆಳಿಗ್ಗೆ 9 ಗಂಟೆ ಸುಮಾರಿಗೆ ಅವಘಡ ಸಂಭವಿಸಿದೆ. ದೇಗುಲದ ಮೆಟ್ಟಿಲುಗಳ ಸಮೀಪ ಹರಿದು ಬಿದ್ದ ತಂತಿಗಳಲ್ಲಿ ವಿದ್ಯುತ್ ಪ್ರವಹಿಸುತ್ತಿದೆ ಎಂಬ ವದಂತಿ ಹರಡಿತು. ಹೀಗಾಗಿ ಜನರು ಗಾಬರಿಗೊಂಡರು. ಇದರಿಂದ ಕಾಲ್ತುಳಿತ ಸಂಭವಿಸಿದೆ. ಭಾನುವಾರವಾದ ಕಾರಣ ಭಕ್ತರ ಸಂಖ್ಯೆಯೂ ಹೆಚ್ಚಿತ್ತು' ಎಂದು ಹರಿದ್ವಾರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಪ್ರಮೇಂದ್ರ ಸಿಂಗ್ ದೋಬಲ್ ಅವರು ತಿಳಿಸಿದರು.

ಸುಮಾರು 35 ಮಂದಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅವರಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಿದರು.

ಅಸಂಖ್ಯಾತ ಜನರು ದೇಗುಲ ಪ್ರವೇಶಕ್ಕಾಗಿ ಕಿರಿದಾದ ದ್ವಾರದಲ್ಲಿ ನುಗ್ಗುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

▶8



ಹರಿದ್ವಾರದ ಮಾನಸದೇವಿ ದೇಗುಲ ಸಮೀಪ ಕಾಲ್ತುಳಿತ ಸಂಭವಿಸಿದ ಸ್ಥಳದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಪಾದರಕ್ಷೆಗಳು –ಪಿಟಿಐ ಚಿತ್ರ

12 ಸಾವಿರ ಸಿಬ್ಬಂದಿ ವಜಾಕ್ಕೆ ಟಿಸಿಎಸ್ ನಿರ್ಧಾರ

ಬೆಂಗಳೂರು/ನವದೆಹಲಿ (ರಾಯಿಟರ್ಸ್/ಪಿಟಿಐ): ದೇಶದ ಅತಿದೊಡ್ಡ ಐ.ಟಿ ಸೇವಾ ಪೂರೈಕೆದಾರ ಕಂಪನಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಪ್ರಸಕ್ತ ಆರ್ಥಿಕ ವರ್ಷದಲ್ಲಿ 12 ಸಾವಿರಕ್ಕೂ (ಶೇ 2ರಷ್ಟು) ಹೆಚ್ಚು ಸಿಬ್ಬಂದಿಯನ್ನು ಕೆಲಸದಿಂದ ತೆಗೆಯಲು ನಿರ್ಧರಿಸಿದೆ.

ಪ್ರಸಕ್ತ ವರ್ಷದ ಜೂನ್ 30ರಂದು ಕಂಪನಿಯು ಜಾಗತಿಕವಾಗಿ 6,13,069 ಉದ್ಯೋಗಿಗಳನ್ನು ಹೊಂದಿದೆ. ಈ ಪೈಕಿ ಅಂದಾಜು 12,261 ಉದ್ಯೋಗಿಗಳನ್ನು ಕಡಿತಗೊಳಿಸಲಿದೆ. ಹಿರಿಯ ಮತ್ತು ಮಧ್ಯಮ ಶ್ರೇಣಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ಮೇಲೆ ಇದು ಹೆಚ್ಚು ಪರಿಣಾಮ ಬೀರಲಿದೆ ಎಂದು ಟಿಸಿಎಸ್ ಭಾನುವಾರ ತಿಳಿಸಿದೆ. ಜೂನ್ ತ್ರೈಮಾಸಿಕದಲ್ಲಿ ಕಂಪನಿಯು 5 ಸಾವಿರ ಉದ್ಯೋಗಿಗಳನ್ನು ನೇಮಿಸಿಕೊಂಡಿತ್ತು.

ಹೊಸ ತಂತ್ರಜ್ಞಾನದಲ್ಲಿನ ಹೂಡಿಕೆಗಳು, ಕೃತಕ ಬುದ್ಧಿಮತ್ತೆ ನಿಯೋಜನೆ, ಮಾರುಕಟ್ಟೆ ವಿಸ್ತರಣೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಕಂಪನಿಯು ಹೊಸ ಮಾರುಕಟ್ಟೆಗಳನ್ನು ಪ್ರವೇಶಿಸಲು ಉದ್ದೇಶಿಸಿದೆ. ಅಲ್ಲದೆ, ತಂತ್ರಜ್ಞಾನಗಳ ಬಳಕೆಯನ್ನು ಹೆಚ್ಚಿಸುತ್ತಿದ್ದೇವೆ. ಇದರ ಭಾಗವಾಗಿ ಉದ್ಯೋಗ ಕಡಿತದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

▶8

ಚಿನಕುರುಳಿ — ಪ್ರಕಾಶ್ ಶೆಟ್ಟಿ



65 ಲಕ್ಷ ಮತದಾರರಿಗೆ ಕೊಕ್

ಬಿಹಾರ: ಕೇಂದ್ರ ಚುನಾವಣಾ ಆಯೋಗದಿಂದ ಎಸ್‌ಐಆರ್

• ಅಭಯ್ ಕುಮಾರ್



ಪಟ್ನಾ: ಕೇಂದ್ರ ಚುನಾವಣಾ ಆಯೋಗವು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿ ಸುಮಾರು 65 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಿದೆ.

ರಾಜ್ಯದಲ್ಲಿ 7.89 ಕೋಟಿ ಮತದಾರರಿದ್ದರು. ಪರಿಷ್ಕರಣೆ ಬಳಿಕ ಈ ಸಂಖ್ಯೆ ಸುಮಾರು 7.24 ಕೋಟಿಗೆ ಇಳಿಕೆಯಾಗಿದೆ.

ಚುನಾವಣಾ ಆಯೋಗವು ಜೂನ್ 24ರಿಂದ ಜುಲೈ 25ರವರೆಗೆ ಮತದಾರರ ಪಟ್ಟಿಯ ಎಸ್‌ಐಆರ್ ನಡೆಸಿ, ನಕಲಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಿದೆ.

'7.89 ಕೋಟಿ ಮತದಾರರ ಪೈಕಿ ಸುಮಾರು 65 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸಿಹಾಕಲಾಗಿದೆ. ಸಾವು, ಶಾಶ್ವತ ವಲಸೆ, ಹಲವು ಕಡೆಗಳಲ್ಲಿ ನೋಂದಣಿ, ಪತ್ತೆಯಾಗದವರು– ಈ ನಾಲ್ಕು ವಿಭಾಗಗಳ ಅಡಿ ಕೆಲವು ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ' ಎಂದು ಆಯೋಗದ ಮೂಲಗಳು ತಿಳಿಸಿವೆ.

▶4B

ಇಂದು 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಪ್ರಶ್ನಿಸಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ಈ ಕುರಿತ ವಿಚಾರಣೆಯನ್ನು ಕೈಗೆತ್ತಿಗೊಳ್ಳುವ ಸಾಧ್ಯತೆಯಿದೆ. 'ಅನರ್ಹ ವ್ಯಕ್ತಿಗಳನ್ನು ಮತದಾರರ ಪಟ್ಟಿಯಿಂದ ತೆಗೆಯುವ ಮೂಲಕ ಚುನಾವಣೆಯ ಪಾವಿತ್ರ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಎಸ್‌ಐಆರ್ ಕೈಗೆತ್ತಿಕೊಳ್ಳಲಾಗಿದೆ' ಎಂದು ಆಯೋಗ ಈಗಾಗಲೇ ತನ್ನ ಕಾರ್ಯವನ್ನು ಸಮರ್ಥಿಸಿಕೊಂಡಿದೆ. ಈ ಸಂಬಂಧ ಅದು ಪ್ರಮಾಣಪತ್ರವನ್ನೂ ಸಲ್ಲಿಸಿದೆ.

30 ಮೀಟರ್ 'ಬಫರ್ ಝೋನ್' ಕಡಿತ • ರಿಯಲ್ ಎಸ್ಟೇಟ್‌ಗೆ ಅನುಕೂಲ

ಕೆರೆಗಳ 'ಸಂರಕ್ಷಿತ ಪ್ರದೇಶ'ಕ್ಕೆ ಕಂಟಕ

• ಆರ್.ಮಂಜುನಾಥ್

ಬೆಂಗಳೂರು: ರಾಜ್ಯದಲ್ಲಿರುವ ಕೆರೆಗಳಿಗೆ ಏಕರೂಪದಲ್ಲಿದ್ದ 30 ಮೀಟರ್ 'ಸಂರಕ್ಷಿತ ಪ್ರದೇಶ'ವನ್ನು (ಬಫರ್ ಝೋನ್) ಕಡಿತಗೊಳಿಸುವ ಜೊತೆಗೆ, ಆ ಪ್ರದೇಶದಲ್ಲಿ ನಾಗರಿಕರಿಗೆ ಅನುಕೂಲವಾಗುವ ಮೂಲಸೌಕರ್ಯ ಕಾಮಗಾರಿಗಳನ್ನು ನಡೆಸಲು ಸರ್ಕಾರ ನಿರ್ಧರಿಸಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) 2016ರಲ್ಲಿ ಕೆರೆಗಳ 'ಬಫರ್ ಝೋನ್' ಅನ್ನು 75 ಮೀಟರ್ ಮತ್ತು ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ರಾಜಕಾಲುವೆಗಳ 'ಬಫರ್ ಝೋನ್' ಅನ್ನು ಕ್ರಮವಾಗಿ 50 ಮೀ., 35 ಮೀ. ಹಾಗೂ 25 ಮೀ.ಗೆ ನಿಗದಿಪಡಿಸಿ ಆದೇಶಿಸಿತ್ತು. ಈ ಆದೇಶವನ್ನು ತಡೆಹಿಡಿದ ಸುಪ್ರೀಂ ಕೋರ್ಟ್ 2019ರಲ್ಲಿ ಆದೇಶ ಹೊರಡಿಸಿ, ಕರ್ನಾಟಕ ಮುನಿಸಿಪಲ್ ಕಾಯ್ದೆ–1976, ಮಾಸ್ಟರ್ ಪ್ಲಾನ್ ಬೆಂಗಳೂರು–2015, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ (ಕೆಟಿಸಿಡಿಎ)–2014ರಂತೆ ಕೆರೆಗಳ ಬಫರ್ ಝೋನ್ ನಿಗದಿ ಮಾಡಬೇಕು ಎಂದು ತಿಳಿಸಿತ್ತು.

ಕೆಟಿಸಿಡಿಎ ಕಾಯ್ದೆಯಲ್ಲಿ ಕೆರೆಗಳ 'ಬಫರ್ ಝೋನ್' 30 ಮೀಟರ್ ಎಂದು ನಮೂದಿಸಲಾಗಿದೆ. ಇದರಂತೆ ಈವರೆಗೂ ಪಾಲನೆ ಮಾಡಿಕೊಂಡು ಬರಲಾಗುತ್ತಿತ್ತು. ಆದರೆ, ಹಲವು ಪ್ರದೇಶಗಳಲ್ಲಿ ಇದು ತಕರಾರಿನಲ್ಲಿದ್ದು, ಸಂಪೂರ್ಣ ಅನುಷ್ಠಾನವಾಗಿರಲಿಲ್ಲ. ಅದನ್ನು ಸರಿಪಡಿಸಲು, ಕಾಯ್ದೆಗೆ ತಿದ್ದುಪಡಿ ತರಲು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ತಮಿಳುನಾಡು, ಆಂಧ್ರ ಪ್ರದೇಶ ಸೇರಿದಂತೆ ಹತ್ತಕ್ಕೂ ಹೆಚ್ಚು ರಾಜ್ಯಗಳಲ್ಲಿ ಪಾಲಿಸಲಾಗುತ್ತಿರುವ 'ಬಫರ್ ಝೋನ್' ನಿಯಮಗಳನ್ನು ಸಮಿತಿ ಅಧ್ಯಯನ ಮಾಡಿತು.

▶4

ಯಾವ ಕೆರೆಗೆ ಎಷ್ಟು 'ಬಫರ್ ಝೋನ್'?

ಕೆರೆ ವಿಸ್ತೀರ್ಣ	ಬಫರ್ ಝೋನ್
0 – 5 ಗುಂಟೆ	0
5 ಗುಂಟೆಯಿಂದ 1 ಎಕರೆ	3 ಮೀಟರ್
1 ಎಕರೆಯಿಂದ 10 ಎಕರೆ	6 ಮೀಟರ್
10 ಎಕರೆಯಿಂದ 25 ಎಕರೆ	12 ಮೀಟರ್
25 ಎಕರೆಯಿಂದ 100 ಎಕರೆ	24ಮೀಟರ್
100 ಎಕರೆಗೂ ಹೆಚ್ಚು	30 ಮೀಟರ್

ಅಂಕಿ ಅಂಶಗಳು

13,192; ರಾಜ್ಯದಲ್ಲಿರುವ ಒಟ್ಟು ಕಲ್ಯಾಣಿ, ಕುಂಟೆ, ಗೋಕಟ್ಟೆ, ಕಟ್ಟೆ

3,123 ಕಲ್ಯಾಣಿ | **3,053** ಕುಂಟೆ

2,839 ಗೋಕಟ್ಟೆ | **3,177** ಕಟ್ಟೆ

ಸುಪ್ರೀಂ ಕೋರ್ಟ್‌ಗೆ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿದ ನಗರಾಭಿವೃದ್ಧಿ ಇಲಾಖೆ

ಡಿಸೆಂಬರ್‌ನಲ್ಲಿ ಬಿಬಿಎಂಪಿ ಚುನಾವಣೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರದ ಶಾಸಕರ ಒತ್ತಡಕ್ಕೆ ಮಣಿದು ಆರು ವರ್ಷಗಳಿಂದ ಬಿಬಿಎಂಪಿ ಚುನಾವಣೆಯನ್ನೇ ನಡೆಸದ ರಾಜ್ಯ ಸರ್ಕಾರವು ಕೊನೆಗೂ ಐದು ಪಾಲಿಕೆಗಳಿಗೆ ಚುನಾವಣೆ ನಡೆಸಲು ಮುಂದಾಗಿದೆ. 'ಡಿಸೆಂಬರ್‌ನಲ್ಲಿ ಚುನಾವಣೆ ನಡೆಸಲು ಸಿದ್ಧ' ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಪರವಾಗಿ ವಕೀಲ ಡಿ.ಎಲ್. ಚಿದಾನಂದ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಬಿಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದ ಅರ್ಜಿ ವಿಚಾರಣೆ ಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜೋಯ್‌ಮಾಲ್ಯ ಬಾಗ್ಚಿ ಅವರಿರುವ ಪೀಠವು ಸೋಮವಾರ ನಡೆಸಲಿದೆ.


'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024' (ಜಿಬಿಜಿಎ) ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ' (ಜಿಬಿಎ) ಎಂದು ಗುರುತಿಸಿ 2025ರ ಮೇ 15ರಂದು ಸರ್ಕಾರ ಅಧಿಸೂಚಿಸಿತ್ತು. 'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳನ್ನು ಮರುರಚಿಸಿ 2023ರ ಸೆಪ್ಟೆಂಬರ್ 25ರಂದು ಸರ್ಕಾರ ಅಧಿಸೂಚಿಸಿತ್ತು. ಆದರೆ, ಇದೀಗ ಹೊಸದಾಗಿ ಐದು ನಗರ ಪಾಲಿಕೆಗಳನ್ನು ಹಿಂದೆ ಚುನಾವಣೆ ನಡೆದಿದ್ದ 198 ವಾರ್ಡ್‌ಗಳಂತೆ ವಿಂಗಡಿಸಲಾಗಿದೆ.

ಐದು ಪಾಲಿಕೆಗಳನ್ನಾಗಿ ವಿಭಜಿಸಿ ಜುಲೈ 19ರಂದು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿದೆ. ಇದಕ್ಕೆ ಆಗಸ್ಟ್ 18ರವರೆಗೆ ಅವಕಾಶ ಇದೆ. ಆಕ್ಷೇಪಣೆಗಳನ್ನು ಪರಿಶೀಲಿಸಿ, ವಿಲೇವಾರಿ ಮಾಡಲು ರಾಜ್ಯ ಸರ್ಕಾರಕ್ಕೆ 15 ದಿನಗಳ ಕಾಲಾವಕಾಶ ಬೇಕು.

ಐದು ಪಾಲಿಕೆಗಳಿಗೆ ಹೊಸ ವಾರ್ಡ್‌ಗಳ ರಚನೆ ಮಾಡಬೇಕಿದೆ. ವಾರ್ಡ್‌ಗಳ ಗಡಿಯ ಕರಡು ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಸ್ವೀಕರಿಸಬೇಕಿದೆ. ಆ ನಂತರ ಅಂತಿಮ ಅಧಿಸೂಚನೆ ಹೊರಡಿಸಬೇಕು. ನವೆಂಬರ್ 1ರ ಹೊತ್ತಿಗೆ ಅಂತಿಮ ಅಧಿಸೂಚನೆ ಹೊರಡಿಸಬಹುದು. ಆ ಬಳಿಕ ವಾರ್ಡ್‌ಗಳಿಗೆ ಮೀಸಲಾತಿ ನಿಗದಿ ಪ್ರಕ್ರಿಯೆ ನಡೆಸಬೇಕು. ಇದಕ್ಕೆ ಮತ್ತೆ ಒಂದು ತಿಂಗಳು ಬೇಕು. ಈ ಪ್ರಕ್ರಿಯೆ ನವೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಬಹುದು. ಆ ಬಳಿಕ ರಾಜ್ಯ ಚುನಾವಣಾ ಆಯೋಗವು ಐದು ಪಾಲಿಕೆಗಳಿಗೆ ಚುನಾವಣೆ ನಡೆಸಬಹುದು ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಬಿಬಿಎಂಪಿ ಸದಸ್ಯರ ಅಧಿಕಾರ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿತ್ತು. ಆರು ವಾರಗಳಲ್ಲಿ ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ– 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.



ಎಸ್‌ಐಟಿ: 7 ಗಂಟೆ ವಿಚಾರಣೆ

ಮೊಹಾಂತಿ ಸಮ್ಮುಖದಲ್ಲಿ ಹೇಳಿಕೆ ನೀಡಿದ ಸಾಕ್ಷಿ ದೂರುದಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತುಹಾಕಲಾಗಿದೆ ಎಂಬ ಕುರಿತು ದಾಖಲಾದ ಪ್ರಕರಣದ (ಸಂಖ್ಯೆ 39/2025) ಸಾಕ್ಷಿ ದೂರುದಾರ ಇಲ್ಲಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳ ಮುಂದೆ ಭಾನುವಾರವೂ ಹಾಜರಾಗಿ ಹೇಳಿಕೆ ನೀಡಿದರು.

ಮೂವರು ವಕೀಲರೊಂದಿಗೆ ಇಲ್ಲಿನ ಮಲ್ಲಿಕಟ್ಟೆಯ ಪ್ರವಾಸಿ ಬಂಗಲೆಗೆ ಬೆಳಿಗ್ಗೆ 10.15ಕ್ಕೆ ಮುಖಗವಸು ಧರಿಸಿಕೊಂಡೇ ಬಂದ ಸಾಕ್ಷಿ ದೂರುದಾರ ಸಂಜೆ 6.22ರವರೆಗೂ ಅಲ್ಲೇ ಇದ್ದು ಎಸ್‌ಐಟಿ ಅಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಪೊಲೀಸ್ ಅಧಿಕಾರಿಗಳು ಆತನಿಂದ ಹೇಳಿಕೆ ದಾಖಲಿಸಿಕೊಳ್ಳುವಾಗ ಎಸ್‌ಐಟಿ ಮುಖ್ಯಸ್ಥರಾಗಿರುವ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ಖುದ್ದು ಹಾಜರಿದ್ದರು.

▶9



ಸಾಕ್ಷಿ ದೂರುದಾರ (ಎಡ ತುದಿ) ಮುಖಗವಸು ಧರಿಸಿ ಮಂಗಳೂರಿನಲ್ಲಿ ಎಸ್‌ಐಟಿ ಎದುರು ಭಾನುವಾರ ವಕೀಲರ ಜೊತೆಗೆ ಹಾಜರಾದರು – ಪ್ರಜಾವಾಣಿ ಚಿತ್ರ

ಬೆಳ್ತಂಗಡಿಗೆ ಪ್ರಣವ್ ಮೊಹಾಂತಿ ಭೇಟಿ

ಬೆಳ್ತಂಗಡಿ ಪೊಲೀಸ್ ಠಾಣೆಯ ಪಕ್ಕದಲ್ಲಿರುವ ಹೊಸ ಕಟ್ಟಡದಲ್ಲಿ ಸಜ್ಜುಗೊಳಿಸಿರುವ ಎಸ್‌ಐಟಿ ಕಚೇರಿಗೆ ಪ್ರಣವ್ ಮೊಹಾಂತಿ ಅವರು ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು. ಕಚೇರಿಯ ಕಾರ್ಯನಿರ್ವಹಣೆ ಸಲುವಾಗಿ ಕಲ್ಪಿಸಬೇಕಾದ ಅಗತ್ಯ ಮೂಲಸೌಕರ್ಯಗಳ ಬಗ್ಗೆ ಎಸ್‌ಐಟಿಯ ಅಧಿಕಾರಿಗಳಾದ ಅನುಚೇತ್ ಹಾಗೂ ಸಿ.ಎ. ಸೈಮನ್ ಅವರಿಂದ ಮಾಹಿತಿ ಪಡೆದರು. ಸಾಕ್ಷಿ ದೂರುದಾರ ಮಾಹಿತಿ ನೀಡಿದ ಪ್ರಕಾರ, ಹೂತು ಹಾಕಿದ್ದಾನೆ ಎನ್ನಲಾದ ಮೃತದೇಹಗಳನ್ನು ಮತ್ತೆ ವಶಕ್ಕೆ ಪಡೆಯುವ ಸಂದರ್ಭದಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆ ಹಾಗೂ ಬಂದೋಬಸ್ತ್ ಬಗ್ಗೆಯೂ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ



ಗೀತಾ ಪರಿವಾರವು ಗೀತಾ ಕಲಿಕೆ ಆನ್‌ಲೈನ್ ತರಗತಿ ಆರಂಭಿಸಿ ಐದು ವರ್ಷಗಳನ್ನು ಪೂರೈಸಿದ ಪ್ರಯುಕ್ತ ಬನಶಂಕರಿ ಮೂರನೇ ಹಂತದಲ್ಲಿ ಶನಿವಾರ 'ಸಂಭ್ರಮಾಚರಣೆ' ಕಾರ್ಯಕ್ರಮ ನಡೆಯಿತು

ಗೀತಾ ಕಲಿಕೆಗೆ 5 ವರ್ಷ: ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೀತಾ ಪರಿವಾರವು ಗೀತಾ ಕಲಿಕೆ ಆನ್‌ಲೈನ್ ತರಗತಿ ಆರಂಭಿಸಿ ಐದು ವರ್ಷಗಳನ್ನು ಪೂರೈಸಿದ ಪ್ರಯುಕ್ತ ಜೂನ್ 22ರಿಂದ ಆಗಸ್ಟ್ 3ರವರೆಗೆ ಆರು ದೇಶಗಳಲ್ಲಿ ಸಂಭ್ರಮಾಚರಣೆ ಹಮ್ಮಿಕೊಂಡಿದ್ದು, ನಗರದ ಬನಶಂಕರಿ 3ನೇ ಹಂತದಲ್ಲಿ ಶನಿವಾರ 'ಸಂಭ್ರಮಾಚರಣೆ' ಕಾರ್ಯಕ್ರಮ ನಡೆಯಿತು.

ಸುರೇಶ್ ಕುಂಬಾರ್ ಮತ್ತು ರೂಪಾ ಐತಾಳ್ ಕಾರ್ಯಕ್ರಮ ಉದ್ಘಾಟಿಸಿದರು. ಪುಟಾಣಿಗಳು ಗೀತೆಯ 12 ಮತ್ತು 15ನೇ ಅಧ್ಯಾಯವನ್ನು ಪಠಿಸಿದರು. ಬೆಂಗಳೂರು ಗೀತಾ ಪರಿವಾರದ ಚಟುವಟಿಕೆಗಳನ್ನು ತಿಳಿಸುವ 'ಸಂವಹನ' ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಶ್ಲೋಕಾಂಕ ಮತ್ತು ಶೃಂಗೇರಿ ಪರೀಕ್ಷೆಗಳನ್ನು ಪೂರ್ಣಗೊಳಿಸಿದವರನ್ನು ಅಭಿನಂದಿಸಲಾಯಿತು. ರಾಧಾ ರಮೇಶ್, ರಘುನಾಥ್, ಮೀನಲ್ ದಾನಿ, ಲಕ್ಷ್ಮೀ ಮಧುಸೂದನ, ಅನಸೂಯಾ ನಾಯಕ್, ರೂಪಶ್ರೀ, ಮಾನವಿ, ಸಪ್ನಾ ಜೀರೆ ವಿವಿಧ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. 'ಸಂವಹನ' ಪತ್ರಿಕೆಯ ಸಂಪಾದಕರಾದ ಅರುಣ, ಮಂಜುನಾಥ್ ಉಪಸ್ಥಿತರಿದ್ದರು.

ಮಾತೃ ಇಲಾಖೆಗೆ 28 ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸುರಕ್ಷತಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 28 ಆರೋಗ್ಯ ನಿರೀಕ್ಷಣಾಧಿಕಾರಿಗಳಿಗೆ, ಮಾತೃ ಇಲಾಖೆಯಾದ ಆರೋಗ್ಯ ಇಲಾಖೆಗೆ ಹಿಂದಿರುಗುವಂತೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆದೇಶ ಹೊರಡಿಸಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ. ಈ ಅಧಿಕಾರಿಗಳು ಬಿಬಿಎಂಪಿ ಹಾಗೂ ವಿವಿಧ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ನಿಯೋಜನೆ ಅವಧಿ ಮುಕ್ತಾಯಗೊಂಡ ಕಾರಣ ಅವರಿಗೆ ಮಾತೃ ಇಲಾಖೆಗೆ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ 2025-26ನೇ ಸಾಲಿನ ಪೋಸ್ಟ್ ಡಿಪ್ಲೊಮಾ ಇನ್ ಟೂಲ್ ಡಿಸೈನ್ ಕೋರ್ಸಿಗೆ ಅರ್ಜಿ ಆಹ್ವಾನಿಸಲಾಗಿದೆ. https://gttc.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದು. ಸಂಪರ್ಕ ಸಂಖ್ಯೆ: 91416 29584, 9880217473

ಮಕ್ಕಳ ಸಹಾಯಕರಿಗೆ 'ಡಾರ್ಮೆಟರಿ'

ದೂರದ ಊರುಗಳಿಂದ ಮಕ್ಕಳನ್ನು ಚಿಕಿತ್ಸೆಗೆ ಕರೆತರುವ ಪಾಲಕರಿಗೆ ಆಸರೆ

• ವರುಣ ಹೆಗಡೆ

ಬೆಂಗಳೂರು: ಇಲ್ಲಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು (ಐಜಿಐಸಿಎಚ್) ಚಿಕಿತ್ಸೆಗೆ ದಾಖಲಾಗುವ ಮಕ್ಕಳ ಪಾಲಕರು ಹಾಗೂ ಸಹಾಯಕರಿಗೆ 'ಡಾರ್ಮೆಟರಿ' ನಿರ್ಮಿಸಲು ಮುಂದಾಗಿದ್ದು, ಇದು ಮಕ್ಕಳ ಚಿಕಿತ್ಸಾ ಅವಧಿಯಲ್ಲಿ ಆಶ್ರಯ ಒದಗಿಸಲಿದೆ.

ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಸೇವೆ ಒದಗಿಸುತ್ತಿರುವ ಸಂಸ್ಥೆಯು ಮಕ್ಕಳ ಚಿಕಿತ್ಸೆಗೆ ಹೆಸರಾಗಿದೆ. ಆದ್ದರಿಂದ ರಾಜ್ಯದ ವಿವಿಧೆಡೆಯಿಂದ ಚಿಕಿತ್ಸೆಗಾಗಿ ಮಕ್ಕಳನ್ನು ಪಾಲಕರು ಇಲ್ಲಿಗೆ ಕರೆತರುತ್ತಾರೆ. ಇದರಿಂದಾಗಿ ಇಲ್ಲಿಗೆ ಚಿಕಿತ್ಸೆಗೆ ಬರುವ ಮಕ್ಕಳ ಜತೆಗೆ ಅವರ ಸಹಾಯಕರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಮಕ್ಕಳ ಚಿಕಿತ್ಸಾ ಅವಧಿಯಲ್ಲಿ ಸಹಾಯಕರಿಗೆ ಹಾಲಿ ವ್ಯವಸ್ಥೆಯಡಿ ಆಶ್ರಯ ಒದಗಿಸುವುದು ಸವಾಲಾಗಿದೆ. ಆದ್ದರಿಂದ ಸಂಸ್ಥೆಯ ಆವರಣದಲ್ಲಿಯೇ ಪ್ರತ್ಯೇಕ ವಿಶ್ರಾಂತಿ ಧಾಮ ನಿರ್ಮಿಸಲಾಗುತ್ತಿದೆ.

ಸಂಸ್ಥೆಯ ಆವರಣದಲ್ಲಿ ಈಗಾಗಲೇ ಸೂಪರ್ ಸ್ಪೆಷಾಲಿಟಿ ಚಿಕಿತ್ಸಾ ಘಟಕ ತಲೆಯೆತ್ತಿದ್ದು, ಕಾರ್ಯಾರಂಭದ ಬಳಿಕ ಅಲ್ಲಿ 450 ಹಾಸಿಗೆಗಳು ಲಭ್ಯವಾಗಲಿವೆ. ಒಟ್ಟು ಹಾಸಿಗೆಗಳ ಸಂಖ್ಯೆ 900ಕ್ಕೆ ಏರಿಕೆಯಾಗಲಿದೆ. ಇದರಿಂದಾಗಿ ಚಿಕಿತ್ಸೆಗೆ ದಾಖಲಾಗುವ ಮಕ್ಕಳ ಜತೆಗೆ ಅವರ ಸಹಾಯಕರ ಸಂಖ್ಯೆಯೂ ಹೆಚ್ಚಳವಾಗುತ್ತದೆ. ಇಲ್ಲಿಗೆ ಚಿಕಿತ್ಸೆಗೆ ಬರುವವರಲ್ಲಿ ಬಹುತೇಕರು ಬಡ ಮತ್ತು ಮಧ್ಯಮ ವರ್ಗದವರಾಗಿದ್ದು, ಚಿಕಿತ್ಸಾ ಅವಧಿಯಲ್ಲಿ ಹೆಚ್ಚುವರಿ ಸಹಾಯಕರಿಗೆ ಆಶ್ರಯ ಒದಗಿಸುವುದು ಸಮಸ್ಯೆಯಾಗಲಿದೆ. ಈಗಾಗಲೇ ಕೆಲವರು ಆಸ್ಪತ್ರೆಯ ಆವರಣದಲ್ಲಿ, ಖಾಲಿ ಸ್ಥಳಾವಕಾಶದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಹೀಗಾಗಿ, ಸಂಸ್ಥೆಯು ಆಂತರಿಕ ಸಂಪನ್ಮೂಲದಿಂದ ಸಹಾಯಕರಿಗೆ ಪ್ರತ್ಯೇಕ ಕಟ್ಟಡ ನಿರ್ಮಿಸುತ್ತಿದೆ.



ಮಕ್ಕಳ ಸಹಾಯಕರ ಸಮಸ್ಯೆ ಮನಗಂಡು ಅವರಿಗಾಗಿ ಪ್ರತ್ಯೇಕ ಕಟ್ಟಡ ನಿರ್ಮಿಸಲು ಮುಂದಾಗಿದ್ದೇವೆ. ಸಂಪನ್ಮೂಲದ ಲಭ್ಯತೆ ಅನುಸಾರ ಕಟ್ಟಡದ ಸಾಮರ್ಥ್ಯ ಹೆಚ್ಚಿಸುತ್ತೇವೆ

ಡಾ. ಸಂಜಯ್ ಕೆ.ಎಸ್., ಐಜಿಐಸಿಎಚ್ ನಿರ್ದೇಶಕ



ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ

2 ಮಹಡಿ ಕಟ್ಟಡ: ಸದ್ಯ ಎರಡು ಮಹಡಿಗಳನ್ನು ಒಳಗೊಂಡ ಕಟ್ಟಡವನ್ನು ನಿರ್ಮಿಸಲು ಸಂಸ್ಥೆ ಕಾರ್ಯಯೋಜನೆ ರೂಪಿಸಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಆರು ತಿಂಗಳಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ. ಈ ಕಟ್ಟಡವನ್ನು ₹3.6 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಒಂದು ಮಹಡಿಯನ್ನು ಮಹಿಳೆಯರಿಗೆ, ಇನ್ನೊಂದು ಮಹಡಿಯನ್ನು ಪುರುಷರಿಗೆ ಮೀಸಲಿಡಲಾಗುತ್ತದೆ. ಪ್ರತಿ ಮಹಡಿಯಲ್ಲಿ 50 ಹಾಗೂ ಅದಕ್ಕಿಂತ ಹೆಚ್ಚಿನ ಸಹಾಯಕರು ಆಶ್ರಯ ಪಡೆಯಬಹುದಾಗಿದೆ. ಅಡುಗೆ ಮನೆ, ಶುದ್ಧ ಕುಡಿಯುವ ನೀರು, ಬಟ್ಟೆ ತೊಳೆಯುವ ಯಂತ್ರ, ಲಾಕರ್, ಶೌಚಾಲಯ, ಟಿ.ವಿ. ಸೇರಿ ಅಗತ್ಯ ಸೌಕರ್ಯವನ್ನು ಎರಡೂ ಮಹಡಿಯಲ್ಲಿ ಒದಗಿಸಲಾಗುತ್ತದೆ.

'ವಿಶ್ರಾಂತಿ ಧಾಮ ನಿರ್ಮಾಣ ಯೋಜನೆಯು ಆರು ಮಹಡಿಗಳನ್ನು ಒಳಗೊಂಡಿದೆ. ಸದ್ಯ ಎರಡು ಮಹಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತೆ ನಾಲ್ಕು ಮಹಡಿಗಳನ್ನು ಸೇರ್ಪಡೆ ಮಾಡಲಾಗುತ್ತದೆ. ಅಲ್ಲಿ ಪ್ರತಿ ಮಹಡಿಯಲ್ಲಿ 14 ಕೊಠಡಿಗಳು ಬರಲಿವೆ. ಸಂಸ್ಥೆಯು ಆಂತರಿಕ ಸಂಪನ್ಮೂಲದಿಂದ ನಿರ್ಮಿಸುತ್ತಿರುವುದರಿಂದ ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲಿದೆ' ಎಂದು ಸಂಸ್ಥೆಯ ಎಂಜಿನಿಯರ್ ತಿಳಿಸಿದರು.

ಅಂಕಿ ಅಂಶಗಳು

450 ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿರುವ ಹಾಸಿಗೆಗಳು

500 ರಿಂದ 600 ಸಂಸ್ಥೆಗೆ ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು

ಹಾಲಿ ಕಟ್ಟಡ ಡೇ ಕೇರ್ ಸೆಂಟರ್

ಸದ್ಯ ಸಂಸ್ಥೆಯ ಪಕ್ಕದಲ್ಲಿರುವ ಕಟ್ಟಡವೊಂದರಲ್ಲಿ ಪುರುಷ ಸಹಾಯಕರು ಹಾಗೂ ವೈದ್ಯಕೀಯ ವಿದ್ಯಾರ್ಥಿನಿಯರ ವಸತಿನಿಲಯದಲ್ಲಿ ಮಹಿಳಾ ಸಹಾಯಕರಿಗೆ ವಿಶ್ರಾಂತಿಗೆ ವ್ಯವಸ್ಥೆ ಮಾಡಲಾಗಿದೆ. ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಗುವಿನ ಜತೆಗೆ ಒಬ್ಬ ಸಹಾಯಕರಿಗೆ ಇರಲು ಅವಕಾಶವಿದೆ. ಹಾಗಾಗಿ, ಉಳಿದ ಸಹಾಯಕರು, ತೀವ್ರನಿಗಾ ಘಟಕದಲ್ಲಿ ಇರುವ ಮಕ್ಕಳ ಪಾಲಕರು ಈ ಕಟ್ಟಡಗಳಲ್ಲಿ ಚಿಕಿತ್ಸಾ ಅವಧಿಯಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ನೂತನ ವಿಶ್ರಾಂತಿ ಧಾಮ ನಿರ್ಮಾಣವಾದ ಬಳಿಕ, ಸಂಸ್ಥೆಯ ಪಕ್ಕದಲ್ಲಿರುವ ವಿಶ್ರಾಂತಿ ಕಟ್ಟಡವು 'ಡೇ ಕೇರ್ ಸೆಂಟರ್' ಆಗಿ ಪರಿವರ್ತನೆಯಾಗಲಿದೆ.

ಸದ್ಯ ಇರುವ ಕಟ್ಟಡದಲ್ಲಿ 70ರಿಂದ 80 ಮಂದಿ ಆಶ್ರಯ ಪಡೆದರೆ, ವೈದ್ಯಕೀಯ ವಿದ್ಯಾರ್ಥಿನಿಯರ ವಸತಿ ನಿಲಯದ ನೆಲಮಹಡಿಯಲ್ಲಿ ರಾತ್ರಿ ವೇಳೆ ತಂಗಲು 60 ಮಹಿಳಾ ಸಹಾಯಕರಿಗೆ ಅವಕಾಶ ನೀಡಲಾಗುತ್ತಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ

'ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ಮಾಡಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಪಕ್ಷಕ್ಕೆ ಸೇರಿದರೂ, ತಾರತಮ್ಯ ಮಾಡದೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು ನಮ್ಮ ಕರ್ತವ್ಯ. ಪಕ್ಷಾತೀತವಾಗಿ ಸಮಸ್ಯೆಗಳನ್ನು ಯಾರೇ ಗಮನಕ್ಕೆ ತಂದರೂ ಬಗೆಹರಿಸಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ಸೊರಬ ಬೆಂಗಳೂರು ನಿವಾಸಿಗಳ 'ಟೀಮ್ ಸಮ್ಮಿಲನ' ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

'ಸೊರಬ ಕ್ಷೇತ್ರದ ಅಭಿವೃದ್ಧಿಗಾಗಿ ಅನೇಕ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ನಮ್ಮ ಕ್ಷೇತ್ರದ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸುವ ಉದ್ದೇಶದಿಂದ ಎಲ್ಲ ಕೆಲಸವನ್ನು ಬದಿಗೊತ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ. ಇದೊಂದು ಸ್ಮರಣೀಯ ಕಾರ್ಯಕ್ರಮ. ಇದನ್ನು ಹೀಗೆಯೇ ಮುಂದುವರಿಸಲಾಗುವುದು' ಎಂದರು.

'ನಾನು ಎಷ್ಟೇ ಒಳ್ಳೆಯದನ್ನು ಮಾಡಿದರೂ, ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಬಿಂಬಿಸುತ್ತಾರೆ. ಇತ್ತೀಚೆಗೆ ಸಿಗಂದೂರು ವಿಚಾರದಲ್ಲೂ ಹಾಗೇ ಆಯಿತು. ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡುವವರಿಗೆ ಮುಂದೆ ಸಿಗಂದೂರು ಚೌಡೇಶ್ವರಿಯೇ ಬುದ್ಧಿ ಕಲಿಸುತ್ತಾಳೆ' ಎಂದರು.

ಕಾರ್ಯಕ್ರಮದಲ್ಲಿ 25 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಲಾ ₹15 ಸಾವಿರ ನಗದು, ಫಲಕ ನೀಡಿ ಗೌರವಿಸಲಾಯಿತು.

ಸೊರಬ ನಿವಾಸಿಗಳ ಟೀಮ್ ಸಮ್ಮಿಲನದ ಮುಖ್ಯಸ್ಥ ಏಕಾಂತಪ್ಪ ಕುಮ್ಮೂರು, ವಕೀಲ ಕೇಶವಮೂರ್ತಿ ಹಾಲಗಳಲೆ, ದತ್ತಾತ್ರೇಯ ಬಿದರಗೆರೆ, ಕಲ್ಯಾಣ ಕುಮಾರ್ ತವನಂದಿ, ಶೇಖರಪ್ಪ ಹರೂರು, ಮುಕುಂದ ಹಿರೇಇಡಗೋಡು, ಗಣೇಶ್ ಹುಲ್ತಿಕೊಪ್ಪ, ಗಣಪತಿ ಹಳೇ ಸೊರಬ, ಪೀತಾಂಬರ ಕೆರೆಕೊಪ್ಪ ಮತ್ತಿತರರು ಭಾಗವಹಿಸಿದ್ದರು.



ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಐದು ಕಥೆಗಳಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜಮುಖಿ ಪ್ರಕಾಶನವು ಹಮ್ಮಿಕೊಂಡಿದ್ದ 2024ನೇ ಸಾಲಿನ ಕಥಾ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದ್ದು, ಐದು ಕಥೆಗಳು ಬಹುಮಾನಕ್ಕೆ ಆಯ್ಕೆಯಾಗಿವೆ.

ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಫಲಿತಾಂಶ ಘೋಷಿಸಲಾಯಿತು. ವೀರೇಶ ಶಿವಲಿಂಗಪ್ಪ ಸಜ್ಜನ ಅವರ 'ಕ್ಯಾನವಾಸ್', ಹಳೆಮನೆ ರಾಜಶೇಖರ ಅವರ 'ದೇವರ ತುಪ್ಪ', ಟಿ.ಆರ್.ಉಷಾರಾಣಿ ಅವರ 'ಕಾಲವೆಂಬ ಕಬಂಧ ಬಾಹು', ನಾಗರಾಜ ಕೋರಿ ಅವರ 'ಶಕುನದ ಚುಕ್ಕಿ' ಹಾಗೂ ಫೌಝಿಯಾ ಸಲೀಂ ಅವರ 'ಬಯಾಲಾಜಿಕಲ್ ಫಾದರ್' ಬಹುಮಾನಿತ ಕಥೆಗಳಾಗಿವೆ. ಈ ಬಹುಮಾನವು ತಲಾ ₹ 5 ಸಾವಿರ ನಗದು ಒಳಗೊಂಡಿದೆ.

ಸಂಪತ್ ಸಿರಿಮನೆ ಅವರ 'ಗುಂಗಿ', ಪ್ರವೀಣ್ ಕುಮಾರ್ ಜಿ. ಅವರ 'ಅಲವಾಟು', ನಾಗರೇಖಾ ಗಾಂವಕರ ಅವರ 'ದಣಪೆ ದಾಟಿ', ಚಿನ್ನು ಪ್ರಕಾಶ್ ಶ್ರೀರಾಮನಹಳ್ಳಿ ಅವರ 'ಅಮ್ರಾವತಿಯ ಗಂಡ', ಅಂದಯ್ಯ ಅರವಟಗಿಮಠ ಅವರ 'ಹುಚ್ಚೀರನ ಪ್ರೇಮ ಪ್ರಸಂಗ', ಹೇಮಂತ್ ಲಿಂಗಪ್ಪ ಅವರ 'ಜಮೀನು', ಜಹಾನ್ ಆರಾ ಕೋಳೂರು ಅವರ 'ಜುಲುಸ್', ಮೈತ್ರೇಯಿಣಿ ಗದಿಗೆಪ್ಪ-ಗೌಡರ ಅವರ 'ಶಿವದಾರ', ಅಕ್ಷತಾ ಕೃಷ್ಣಮೂರ್ತಿ ಅವರ 'ಕುಶಾಲಿ ಮಿರಾಶಿ ಕೇರಾಫ್ ಅಣಶಿ' ಹಾಗೂ ಅಮರೇಶ ಗಿಣಿವಾರ ಅವರ 'ಹೆಣ್ಣಕ್ಕಿ' ಕಥೆಗಳು ಸಮಾಜಮುಖಿ ವಾರ್ಷಿಕ ಕಥಾ ಸಂಕಲನಕ್ಕೆ ಆಯ್ಕೆಯಾಗಿವೆ.

'ಸ್ಪರ್ಧೆಯಲ್ಲಿ ಒಟ್ಟು 241 ಕಥೆಗಾರರು ಭಾಗವಹಿಸಿದ್ದರು. ಲೇಖಕ, ವಿಮರ್ಶಕ ರಂಗನಾಥ ಕಂಟನಕುಂಟೆ ಸ್ಪರ್ಧೆಯ ಅಂತಿಮ ಹಂತದ ತೀರ್ಪುಗಾರರಾಗಿದ್ದರು' ಎಂದು ಪ್ರಕಾಶನದ ಚಂದ್ರಕಾಂತ ವಡ್ಡು ತಿಳಿಸಿದರು.



ದಲಿತಗುರು ತಲಕಾಡು ರಂಗೇಗೌಡ ಸ್ಮಾರಕ ದತ್ತಿ 'ಸಾಮಾಜಿಕ ಪರಿವರ್ತನೆ–ಕುದ್ಮುಲ್ ರಂಗರಾಯರ ದಿಟ್ಟ ಹೆಜ್ಜೆಗಳು' ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಭಿಕರು ಪ್ರಜಾವಾಣಿ ಚಿತ್ರ

'ಕುದ್ಮುಲರ ಕ್ರಾಂತಿ ಜನರತ್ತ ಸಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುದ್ಮುಲ್ ರಂಗರಾಯ ಅವರನ್ನು ಕಲ್ಲಿನಲ್ಲಿ, ಮೂರ್ತಿಯಲ್ಲಿ ಇರಿಸಿ ನೋಡುವ ಬದಲು ಅವರು ಮಾಡಿದ ವೈಚಾರಿಕ ಕ್ರಾಂತಿ ಕಡೆಗೆ ಜನರನ್ನು ಒಯ್ಯಬೇಕಿದೆ ಎಂದು ವಿಶ್ರಾಂತ ಕುಲಪತಿ ಜೋಗನ್ ಶಂಕರ್ ತಿಳಿಸಿದರು.

ದಲಿತಗುರು ತಲಕಾಡು ರಂಗೇಗೌಡ ಸ್ಮಾರಕ ದತ್ತಿ ಉಪನ್ಯಾಸ 'ಸಾಮಾಜಿಕ ಪರಿವರ್ತನೆ: ಕುದ್ಮುಲ್ ರಂಗರಾಯರ ದಿಟ್ಟ ಹೆಜ್ಜೆಗಳು' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಕುದ್ಮುಲ್ ಅವರು ಸ್ಥಾಪಿಸಿದ ಶಾಲೆಗಳಿಗೆ ಹೋಗಿದ್ದೆ. ಅವು ಭಜನೆ ಕೇಂದ್ರಗಳಾಗಿದ್ದವು. ಅವರ ಮೌಲ್ಯಗಳನ್ನು ಪಾಲಿಸಿಕೊಂಡು ಅವರು ನಡೆದ ಹೆಜ್ಜೆಗಳ ಮೇಲೆ ನಾವು ಹೆಜ್ಜೆ ಇಡಬೇಕು' ಎಂದು ಸಲಹೆ ನೀಡಿದರು.

'ಮುಂದಿನ ಜನ್ಮ ಇದ್ದರೆ ದಲಿತನಾಗಿ ಹುಟ್ಟಬೇಕು ಎಂದು ಮಹಾತ್ಮರು ಹೇಳಿದ್ದನ್ನು ಕೇಳಿದ್ದೇವೆ. ಆದರೆ, ಕುದ್ಮುಲ್ ರಂಗರಾಯರು ಮುಂದಿನ ಜನ್ಮಕ್ಕಾಗಿ ಕಾಯದೇ ಇರೋ ಈ ಜನ್ಮದಲ್ಲಿಯೇ ದಲಿತರ ಉದ್ಧಾರಕ್ಕಾಗಿ ಕೆಲಸ ಮಾಡಿದರು. ಎಲ್ಲ ಬಿರುದು ಬಾವಲಿಗಳನ್ನು ಬೆಂಕಿಗೆ ಹಾಕಿ 'ನಾನಿಲ್ಲ.. ಇದ್ದರೆ ನನ್ನ ಕೆಲಸಗಳು ಮಾತ್ರ' ಎಂದು ಸಾರಿದ್ದರು. ಕೊನೆಗೆ 1924ರಲ್ಲಿ ಸನ್ಯಾಸ ಸ್ವೀಕರಿಸುವ ಮೊದಲು ಅವರು ಸ್ಥಾಪಿಸಿದ್ದ ಶಾಲೆ, ವಸತಿನಿಲಯಗಳನ್ನು ಸರ್ವೆಂಟ್ಸ್ ಆಫ್ ಇಂಡಿಯಾಕ್ಕೆ ವರ್ಗಾವಣೆ ಮಾಡಿ ಮಾದರಿಯಾಗಿದ್ದರು' ಎಂದರು.

ಆರ್‌ಎಸ್‌ಎಸ್ ಮುಖಂಡ ವಾದಿರಾಜ್ ಉಪನ್ಯಾಸ ನೀಡಿದರು. ಕುದ್ಮುಲ್ ರಂಗರಾಯರ ಮರಿಮಗಳು ಪ್ರೇಮಿ ಎಂ.ರಾವ್, ರಂಗರಾಯರ ಬಗ್ಗೆ ಪುಸ್ತಕ ಬರೆದಿರುವ ಡಿ. ಅಣ್ಣು, ಚಿತ್ರಲೇಖಾ ಕಮಲಾಕ್ಷ ಅವರನ್ನು ಗೌರವಿಸಲಾಯಿತು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ.
ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256



'ರಸ್ತೆಯಲ್ಲಿಯೇ ಶೇಖರಣೆ ಆಗುವ ಮಳೆ ನೀರು'

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೆಟ್ಟಹಲಸೂರು ಗ್ರಾಮದ ಎರಡನೇ ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಪ್ರತಿ ಬಾರಿ ಮಳೆ ಸುರಿದಾಗ ರಸ್ತೆಯ ಮೇಲೆ ನೀರು ಶೇಖರಣೆ ಆಗುತ್ತದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ. ಸಂಚಾರ ದಟ್ಟಣೆಯೂ ಆಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಬಿ.ಸಿ.ಶ್ರೀನಿವಾಸ್, ಬೆಟ್ಟಹಲಸೂರು

'ಪಾದಚಾರಿ ಮಾರ್ಗ ಸರಿಪಡಿಸಿ'



ಬಿಬಿಎಂಪಿ ವೃತ್ತದಿಂದ ಪುರಭವನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಪೇವರ್ಸ್‌ಗಳನ್ನು ಕಿತ್ತು ಹಾಕಲಾಗಿದ್ದು, ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿದೆ. ಪಾದಚಾರಿ ಮಾರ್ಗ ಅಗೆದಿರುವ ಪರಿಣಾಮ ಸಾರ್ವಜನಿಕರು ಮುಖ್ಯ ರಸ್ತೆಯ ಮೂಲಕವೇ ಹಾದು ಹೋಗಬೇಕಾಗಿದೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಜೊತೆಗೆ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ಇಲ್ಲಿನ ಪಾದಚಾರಿ ಮಾರ್ಗದ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ವಾ.ಮುರಳೀಧರ, ಪಾದಚಾರಿ

'ಕೆಸರು ಗದ್ದೆಯಾದ ರಸ್ತೆ'

ದೊಡ್ಡಬಿದರಕಲ್ಲು ವಾರ್ಡ್ ಸಂಖ್ಯೆ 40ರ ದೊಡ್ಡಣ್ಣ ಬಡಾವಣೆಯ ಏಳನೇ ಅಡ್ಡ ರಸ್ತೆಯು ಸಂಪೂರ್ಣ ಹಾಳಾಗಿದ್ದು, ಮಳೆ ಬಂದರೆ ರಸ್ತೆಯು ಕೆಸರ ಗದ್ದೆಯಾಗಿ ಮಾರ್ಪಡುತ್ತದೆ. ಇಲ್ಲಿ ವಾಹನಗಳಲ್ಲಿ ಸಂಚರಿಸುವುದೇ ದುಸ್ತರವಾಗಿದೆ. ಸಾರ್ವಜನಿಕರ ಓಡಾಟಕ್ಕೂ ತೊಂದರೆಯಾಗಿದೆ. ಮೂರು– ನಾಲ್ಕು ವರ್ಷಗಳಿಂದ ಈ ರಸ್ತೆಯ ಡಾಂಬರೀಕರಣ ಮಾಡಿಲ್ಲ. ರಸ್ತೆ ಹಾಳಾಗಿರುವ ಪರಿಣಾಮ ಈ ಭಾಗಕ್ಕೆ ಬರಲು ಆಟೊ, ಟ್ಯಾಕ್ಸಿಗಳವರು ಹಿಂದೇಟು ಹಾಕುತ್ತಾರೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕು.

ಎಂ.ಇ.ಪ್ರಕಾಶ್
ದೊಡ್ಡಣ್ಣ ಬಡಾವಣೆ





'ರಸ್ತೆ ಗುಂಡಿ ಮುಚ್ಚಿ'

ಹೆಬ್ಬಾಳದ ಚೋಳ ನಗರದ ಎರಡನೇ ಕ್ರಾಸ್‌ನ ಶಾಲೆಯ ಮುಂಭಾಗದ ರಸ್ತೆಯಲ್ಲಿ ಬೃಹತ್ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಮೂರು–ನಾಲ್ಕು ತಿಂಗಳಿಂದ ಈ ಗುಂಡಿ ಹಾಗೆಯೇ ಇದೆ. ಗುಂಡಿ ಮುಚ್ಚುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕು.

ಜಿ.ಎಸ್. ಮಂಜುನಾಥ್, ಚೋಳನಗರ

ಯುಜಿ ಕೇಬಲ್: ತಗ್ಗಿದ ವಿದ್ಯುತ್ ನಷ್ಟ

ಐದು ವರ್ಷಗಳಲ್ಲಿ ವಿದ್ಯುತ್ ವಿತರಣೆ ನಷ್ಟದ ಪ್ರಮಾಣ ಶೇ 30ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಎತ್ತರಿಸಿದ ಕೇಬಲ್‌ಗಳನ್ನು ಭೂಗತ ಕೇಬಲ್‌ಗಳಾಗಿ(ಯುಜಿ) ಪರಿವರ್ತಿಸಲು ಆರಂಭಿಸಿದ ಬಳಿಕ ವಿದ್ಯುತ್ ವಿತರಣೆಯಲ್ಲಿನ ನಷ್ಟದ ಪ್ರಮಾಣ ತಗ್ಗಿದೆ.

ಕಳೆದ ಐದು ವರ್ಷಗಳಲ್ಲಿ ವಿದ್ಯುತ್ ವಿತರಣೆಯಲ್ಲಿನ ನಷ್ಟದ ಪ್ರಮಾಣ ಶೇಕಡ 30ರಷ್ಟು ಕಡಿಮೆಯಾಗಿದೆ. 2024–25ನೇ ಸಾಲಿನಲ್ಲಿ ವಿದ್ಯುತ್ ವಿತರಣೆಯಲ್ಲಿನ ನಷ್ಟದ ಪ್ರಮಾಣ ಶೇ 8.44ಕ್ಕೆ ಇಳಿದಿದೆ. ಇದು ಬೆಸ್ಕಾಂನ ದಕ್ಷತೆಯನ್ನು ಸುಧಾರಿಸುವ ಜೊತೆಗೆ, ವಿದ್ಯುತ್ ಖರೀದಿ ವೆಚ್ಚವನ್ನೂ ಕಡಿಮೆ ಮಾಡಲು ನೆರವಾಗುತ್ತಿದೆ.

ಬೆಂಗಳೂರು ನಗರದಲ್ಲಿ 2019-20ರಲ್ಲಿ ಓವರ್‌ಹೆಡ್ ಕೇಬಲ್‌ಗಳನ್ನು ಯುಜಿ ಕೇಬಲ್‌ಗಳನ್ನಾಗಿ ಪರಿವರ್ತಿಸುವ ಯೋಜನೆ ಆರಂಭವಾಯಿತು.

‘ನಗರದಲ್ಲಿ ದೊಡ್ಡ ಪ್ರಮಾಣದಲ್ಲಿ ಯುಜಿ ಕೇಬಲ್‌ಗಳನ್ನಾಗಿ ಪರಿವರ್ತಿಸುವ ಕಾರ್ಯ ಪೂರ್ಣಗೊಂಡಿದೆ. ಪರಿಣಾಮವಾಗಿ ವಿದ್ಯುತ್ ನಷ್ಟ ಗಣನೀಯವಾಗಿ ಕಡಿಮೆಯಾಗುತ್ತಿದೆ’ ಎಂದು ಬೆಸ್ಕಾಂ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವರ್ಷ	ವಿತರಣೆ ನಷ್ಟ(%)
2019-20	12.27
2020-21	11.06
2021-22	11.23
2022-23	9.21
2023-24	9.13
2024-25	8.4

ಈವರೆಗೆ 7,030.33 ಕಿ.ಮೀ. ಉದ್ದದ 11 ಕೆ.ವಿ. ಸಾಮರ್ಥ್ಯದ ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸಲಾಗಿದೆ. 5,818.55 ಕಿ.ಮೀ. ಎಲ್‌ಟಿ(ಕಡಿಮೆ ಒತ್ತಡ) ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸಲಾಗಿದೆ. ಇದಕ್ಕೆ ತಗುಲಿರುವ ಒಟ್ಟು ವೆಚ್ಚ ₹5,031.65 ಕೋಟಿ.

‘ಭೂಗತ ಕೇಬಲ್‌ಗಳಾಗಿ ಪರಿವರ್ತಿಸಲು ಆರಂಭಿಸಿದ ನಂತರ, ವಿದ್ಯುತ್ ಸೋರಿಕೆ ಪ್ರಮಾಣ ಕಡಿಮೆಯಾಗಿದೆ’ ಎಂದು ಬೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಭೂಗತ ಕೇಬಲ್ ಅಳವಡಿಕೆ ಜೊತೆಗೆ, ಜಾಗೃತ ದಳವು ವಿದ್ಯುತ್ ಕಳ್ಳತನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಇದರಿಂದಾಗಿ ವಿದ್ಯುತ್ ಕಳ್ಳತನ ಕಡಿಮೆಯಾಗಿದೆ. ಡಿಜಿಟಲ್ ಮೀಟರ್‌ಗಳನ್ನು ಅಳವಡಿಸುವುದರಿಂದ ವಿದ್ಯುತ್ ನಷ್ಟವನ್ನು ಕಡಿಮೆ ಮಾಡಲು ಸಾಧ್ಯವಾಗಿದೆ’ ಎಂದು ಮತ್ತೊಬ್ಬ ಅಧಿಕಾರಿ ಹೇಳಿದರು.

‘ನಷ್ಟ ತಡೆಯುವುದು ಸವಾಲು’

ಇಷ್ಟಾದರೂ ವಿದ್ಯುತ್ ನಷ್ಟ ತಡೆಯುವುದು ಸವಾಲಾಗಿದೆ. ಬೆಂಗಳೂರು ನಗರದ ಜೊತೆಗೆ ಗ್ರಾಮೀಣ ಪ್ರದೇಶದಲ್ಲೂ ಭೂಗತ ಕೇಬಲ್‌ಗಳನ್ನಾಗಿ ಪರಿವರ್ತಿಸುವ ಕಾರ್ಯ ನಡೆದರೆ, ವಿದ್ಯುತ್ ಸೋರಿಕೆ ಮತ್ತು ನಷ್ಟದ ಪ್ರಮಾಣವನ್ನು ಇನ್ನಷ್ಟು ತಡೆಯಬಹುದು ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.



ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿಮಿಟೆಡ್(ಟಿಪಿಎಂಎಲ್) ನೌಕರರ ಪತ್ತಿನ ಸಹಕಾರ ಸಂಘ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿಯಲ್ಲಿ ಉತ್ತಮ ಅಂಕ ಪಡೆದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು. ಟಿಪಿಎಂಎಲ್ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ರಾಜೀವ್ ವೇಲೂರ್, ಸಂಘದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ನಗರದಲ್ಲಿ ಇಂದು

ವಿಶ್ವ ಕಾಮಾಲೆ ದಿನದ ಅಂಗವಾಗಿ ಹೆಪಟೈಟಿಸ್ ಬಿ ಆ್ಯಂಡ್ ಸಿ ಜಾಗೃತಿ ಕಾಲ್ನಡಿಗೆ: ಅತಿಥಿಗಳು: ದಿನೇಶ್ ಗುಂಡೂರಾವ್, ಕೆ. ಗೋಪಾಲಯ್ಯ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮೋಹನ್ ಕುಮಾರ್ ಎನ್., ಜಿ. ಮೋಹನ್, ಕೆ. ಈಶ್ವರನ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಗ್ಯಾಸ್ಟ್ರೋ ಸೆಂಟರ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರ, ಬೆಳಿಗ್ಗೆ 7ರಿಂದ

ಎರಡು ದಿನಗಳ ಯುವ ರಂಗೋತ್ಸವ: ಉದ್ಘಾಟನೆ: ಎಸ್.ಎಂ. ಜಯಕರ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಬಿ.ಎಂ. ಪಟೇಲ್ ಪಾಂಡು, ‘ಹೃದಯ ತೀರ್ಪು’ ನಾಟಕ ಪ್ರದರ್ಶನ: ರಚನೆ: ಬಾನು ಮುಷ್ತಾಕ್, ನಿರ್ದೇಶನ: ಕೆ.ಎಂ. ರಾಹುಲ್, ‘ಸಿರಿ ಪುರಂದರ’ ನಾಟಕ ಪ್ರದರ್ಶನ: ರಚನೆ: ಶ್ರೀರಂಗ, ನಿರ್ದೇಶನ: ವಾಣಿಶ್ರೀ ಬಿ. ಮಾಳಗಿ, ‘ಮಳ್ಳ ಗಿಂಪೆಲ್’ ನಾಟಕ ಪ್ರದರ್ಶನ: ಅನುವಾದ: ಜಯಂತ್ ಕಾಯ್ಕಿಣಿ, ವಿವೇಕ್ ಶಾನಭಾಗ್, ನಿರ್ದೇಶನ: ರಾಜೇಸಾಬ್, ‘ಸೋರುತಿಹುದು ಸಂಬಂಧ’ ನಾಟಕ ಪ್ರದರ್ಶನ: ರಚನೆ: ಮಹಾಂತೇಶ ರಾಮದುರ್ಗ, ನಿರ್ದೇಶನ: ಎಚ್.ವಿ. ಮೇಘ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11ರಿಂದ

ನವೋದಯ–2025 ಉದ್ಘಾಟನೆ: ಅತಿಥಿಗಳು: ಎಂ.ಆರ್. ಜಯರಾಮ್, ಎ.ವಿ.ಎಸ್. ಮೂರ್ತಿ, ಆಯೋಜನೆ: ಆರ್.ವಿ ವಿಶ್ವವಿದ್ಯಾಲಯ, ಸ್ಥಳ: ಪೂರ್ಣಿಮಾ ಪ್ಯಾಲೇಸ್, ಪಟ್ಟಣಗೆರೆ ಮುಖ್ಯರಸ್ತೆ, ಬೆಳಿಗ್ಗೆ 10ರಿಂದ

‘ಸ್ತ್ರೀ ಪತಿ ಸತ್ತೋದ’ ನಾಟಕ ಪ್ರದರ್ಶನ: ರಚನೆ: ಉಮೇಶ ಬಾದರದಿನ್ನಿ, ನಿರ್ದೇಶನ: ಮಾಲೂರು ವಿಜಿ, ಆಯೋಜನೆ: ರಂಗ ವಿಜಯಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3ರಿಂದ

‘ಮಹಾಭಾರತ- ಅನುಶಾಸನ ಪರ್ವ’ ಧಾರ್ಮಿಕ ಪ್ರವಚನ: ಕಲ್ಲಾಪುರ ಪವಮಾನಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಬೆಮೆಲ್ ಲೇಔಟ್, ರಾಜರಾಜೇಶ್ವರಿನಗರ, ಸಂಜೆ 6.30

ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ಕರಾವಳಿಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರಾವಳಿಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ರೂಪಿಸುವುದು, ಕರಾವಳಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು ನಮ್ಮ ಆದ್ಯತೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಭಾನುವಾರ ಇಲ್ಲಿ ನಡೆದ ಕುಂದಾಪ್ರ ಕನ್ನಡ ಹಬ್ಬದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘340 ಕಿ.ಮೀ. ಉದ್ದದ ಕರಾವಳಿಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ರೂಪಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ’ ಎಂದರು.

ನಟಿ ರಕ್ಷಿತಾ ಮಾತನಾಡಿ, ‘ನನ್ನ ತಂದೆಯ ಊರು ದಾವಣಗೆರೆ, ತಾಯಿಯ ಊರು ಕುಂದಾಪುರ. ಭಾಷೆಯನ್ನು ಹಬ್ಬದ ರೀತಿಯಲ್ಲಿ ಆಚರಿಸುವುದು ಹೆಮ್ಮೆಯ ಸಂಗತಿ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಊರ ಗೌರವ’ ವಿಶೇಷ ಪುರಸ್ಕಾರ ಸ್ವೀಕರಿಸಿದ ಚಿತ್ರನಿರ್ದೇಶಕ ಯೋಗರಾಜ್ ಭಟ್ ಮಾತನಾಡಿ, ‘ಊರು ಅಂದ್ರೆ ವ್ಯಕ್ತಿಗಿಂತ ದೊಡ್ಡದು. ಜನ್ಮಕೊಟ್ಟ ಊರು ಎಲ್ಲರಿಗಿಂತ ದೊಡ್ಡದು, ಊರು-ಭಾಷೆ ಹೆಸರೇ ನನ್ನನ್ನು ಇಲ್ಲಿ ತಂದು ನಿಲ್ಲಿಸಿದೆ. ಕುಂದಾಪುರದ ತಂತ್ರಾಡಿ ನಾನು ಹುಟ್ಟಿದ ಊರು. ತಾಯಿ ತುಳು ಭಾಷೆಯವರು, ತಂದೆಯದ್ದು ಕುಂದಾಪ್ರ ಕನ್ನಡ’ ಎಂದು ಹೇಳಿದರು.

ಪತ್ರಕರ್ತ ಗಿರೀಶ್ ರಾವ್ (ಜೋಗಿ), ಯುನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಉಪೇಂದ್ರ ಶೆಟ್ಟಿ, ನಟರಾದ ಶೈನ್ ಶೆಟ್ಟಿ, ಪ್ರವೀರ್ ಶೆಟ್ಟಿ, ಲೈಫ್‌ಲೈನ್ ಟೆಂಡರ್ ಚಿಕನ್‌ನ ವ್ಯವಸ್ಥಾಪಕ ನಿರ್ದೇಶಕ ಕಿಶೋರ್ ಹೆಗ್ಡೆ, ವಿಎಲ್ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಅಂಜಲಿ ವಿಜಯ್, ಎಎಸ್ ಗ್ರೂಪ್ಸ್ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಶೆಟ್ಟಿ, ಕುಂದಾಪ್ರ ಕನ್ನಡ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಅಧ್ಯಕ್ಷ ದೀಪಕ್ ಶೆಟ್ಟಿ ಬಾರ್ಕೂರು, ಉಪಾಧ್ಯಕ್ಷ ನರಸಿಂಹ ಬೀಜಾಡಿ, ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಜಂಟಿ ಕಾರ್ಯದರ್ಶಿ ಅಜಿತ್ ಶೆಟ್ಟಿ ಉಳ್ತೂರು, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ ಉಪಸ್ಥಿತರಿದ್ದರು.



ಕುಂದಾಪ್ರ ಕನ್ನಡ ಹಬ್ಬದಲ್ಲಿ ಚಿತ್ರನಿರ್ದೇಶಕ ಯೋಗರಾಜ್ ಭಟ್ ಅವರಿಗೆ ಭಾನುವಾರ ‘ಊರ ಗೌರವ’ ವಿಶೇಷ ಪುರಸ್ಕಾರ ನೀಡಿ ಗೌರವಿಸಲಾಯಿತು

ಮೈಸೂರಿನಲ್ಲಿ ಕಂಬಳ

‘ಮೈಸೂರು ದಸರಾದಲ್ಲಿ ಕಂಬಳ ಆಯೋಜನೆ ಮಾಡುವ ಆಲೋಚನೆಯಿತ್ತು. ಆ ಗಡಿಬಿಡಿಯಲ್ಲಿ ಮಾಡುವುದು ಬೇಡ ಮಧ್ಯದಲ್ಲಿ ಯಾವಾಗಲಾದರೂ ಮಾಡೋಣ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಕರಾವಳಿಯ ಕಲೆಯಾದ ಯಕ್ಷಗಾನ ಸೇರಿದಂತೆ ನಾಟಕ, ಸಾಹಿತ್ಯ ಯಾವುದೂ ಅಳಿಸಿ ಹೋಗಬಾರದು ಎಂಬುದು ನಮ್ಮ ಕಾಳಜಿ. ನಿಮ್ಮ ಬೇಡಿಕೆಗಳನ್ನು ಈಡೇರಿಸುವ ಕೆಲಸವನ್ನು ಆದಷ್ಟು ಬೇಗ ಮಾಡಲಾಗುವುದು’ ಎಂದರು.

ಘಟನಾ ಸ್ಥಳ ಪರಿಶೀಲಿಸಿದ ಸಿಐಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದಲ್ಲಿ ಎಸ್.ಪಿ. ವೆಂಕಟೇಶ್, ಡಿವೈಎಸ್ಪಿ ಉಮೇಶ್ ಘಟನಾ ಸ್ಥಳಕ್ಕೆ ಭೇಟಿ ನೀಡಿದರು. ಹಿಂದಿನ ತನಿಖಾಧಿಕಾರಿ ಎಸಿಪಿ ಪ್ರಕಾಶ್ ರಾಥೋಡ್ ಸ್ಥಳದಲ್ಲಿ ಹಾಜರಿದ್ದು, ಘಟನೆ ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಭಾರತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜುಲೈ 15ರಂದು ರೌಡಿ ಶೀಟರ್ ಶಿವಪ್ರಕಾಶ್‌ನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಗೈದಿದ್ದರು. ಪೊಲೀಸರು 16 ಮಂದಿ ಆರೋಪಿಗಳನ್ನು ಬಂಧಿಸಿದ್ದರು. ಬಿಜೆಪಿ ಶಾಸಕ ಬೈರತಿ ಬಸವರಾಜ 5ನೇ ಆರೋಪಿಯಾಗಿದ್ದು, ಎರಡು ಬಾರಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಪ್ರಕರಣದ ಪ್ರಮುಖ ಆರೋಪಿ ಜಗ್ಗ ತಲೆಮರೆಸಿಕೊಂಡಿದ್ದು, ಲುಕ್‌ಔಟ್ ನೋಟಿಸ್ ಜಾರಿಗೊಳಿಸಲಾಗಿದೆ.

ಸಂಚಾರ ದಟ್ಟಣೆ: ಕೆಲ ಮಾರ್ಪಾಡು

ಬೆಂಗಳೂರು: ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಾರ್ತಿಕ್ ನಗರ ಜಂಕ್ಷನ್‌ನಿಂದ ಕಲಾಮಂದಿರದವರೆಗೆ ಹೊರ ವರ್ತುಲ ರಸ್ತೆಯಲ್ಲಿನ ಸಂಚಾರ ದಟ್ಟಣೆ ನಿಯಂತ್ರಿಸಲು ಕೆಲ ಮಾರ್ಪಾಡು ಮಾಡಲಾಗಿದೆ.

ಜೀವಿಕಾ ಆಸ್ಪತ್ರೆ ಸಮೀಪ ಮಾರತ್ತಹಳ್ಳಿ ಕಡೆಯ ಸರ್ವೀಸ್ ರಸ್ತೆಯಲ್ಲಿ ಕಲಾಮಂದಿರದ ಕಡೆಯಿಂದ ಹೊರ ವರ್ತುಲ ರಸ್ತೆಗೆ ಪ್ರವೇಶಿಸುವ ಹಾಗೂ ಯಮಹಾ ಶೋ ರೂಂ ಬಳಿ ಹೊರ ವರ್ತುಲ ರಸ್ತೆಯಿಂದ ಸರ್ವೀಸ್ ರಸ್ತೆ ಪ್ರವೇಶಿಸುವ ಮಾರ್ಗ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಚಿನ್ನಪ್ಪನಹಳ್ಳಿ ರೈಲ್ವೆ ಗೇಟ್ ಕಡೆಯಿಂದ ಕಾಡುಬೀಸನಹಳ್ಳಿ ಮತ್ತು ದೇವರಬೀಸನಹಳ್ಳಿ ಕಡೆಗೆ ಸಂಚರಿಸುವ ವಾಹನಗಳು ಜೀವಿಕಾ ಆಸ್ಪತ್ರೆಯ ಸರ್ವೀಸ್ ರಸ್ತೆ ಮೂಲಕ ಸಂಚರಿಸಿ, ಕಡ್ಡಾಯವಾಗಿ ಯಮಹಾ ಶೋ ರೂಂ ಬಳಿ ಹೊರ ವರ್ತುಲ ರಸ್ತೆ ಪ್ರವೇಶಿಸಬೇಕು.

ಮಹದೇವಪುರ ಮತ್ತು ಕಾರ್ತಿಕ್ ನಗರ ಹೊರ ವರ್ತುಲ ರಸ್ತೆ ಕಡೆಯಿಂದ ವೈಟ್‌ಫೀಲ್ಡ್, ವರ್ತೂರು ಕಡೆಗೆ ಸಂಚರಿಸುವ ವಾಹನಗಳು ಕಲಾಮಂದಿರ ಜಂಕ್ಷನ್‌ನಲ್ಲಿ ಸರ್ವೀಸ್ ರಸ್ತೆಯನ್ನು ಪ್ರವೇಶಿಸಿ, ಕುಂದಲಹಳ್ಳಿ, ವರ್ತೂರು ಕಡೆಗೆ ಸಂಚರಿಸಬಹುದು ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.

ಡ್ರಗ್ಸ್: 11 ಮಂದಿ ವಿರುದ್ಧ ಪ್ರಕರಣ

ಉತ್ತರ ವಿಭಾಗದ ಪೊಲೀಸರಿಂದ ತಡರಾತ್ರಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆ ಪ್ರಕರಣಗಳ ಆರೋಪಿಗಳ ಮನೆಗಳಿಗೆ ಬೆಂಗಳೂರು ಉತ್ತರ ವಿಭಾಗದ ಪೊಲೀಸರು ತಡರಾತ್ರಿ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಅವರ ನೇತೃತ್ವದಲ್ಲಿ ಮೂರು ಉಪ ವಿಭಾಗಗಳ ಎಸಿಪಿಗಳು, 13 ಠಾಣೆಗಳ ಪೊಲೀಸ್ ಇನ್‌ಸ್ಪೆಕ್ಟರ್, ಪಿಎಸ್‌ಐಗಳು ಮತ್ತು ಸಿಬ್ಬಂದಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಒಟ್ಟು 106 ಜನರನ್ನು ತಪಾಸಣೆಗೆ ಒಳಪಡಿಸಲಾಯಿತು.

ಇದೇ ವೇಳೆ ಮಾದಕ ವಸ್ತುಗಳ ಮಾರಾಟದಲ್ಲಿ ತೊಡಗಿದ್ದವರ ವಿರುದ್ಧ ಎರಡು ಪ್ರಕರಣ ದಾಖಲಿಸಿ, ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಅವರಿಂದ ಸುಮಾರು 1 ಕೆ.ಜಿ 650 ಗ್ರಾಂ ಗಾಂಜಾ ಮತ್ತು 150 ಗ್ರಾಂ ಹ್ಯಾಶಿಶ್ ಆಯಿಲ್ ವಶಪಡಿಸಿಕೊಳ್ಳಲಾಗಿದೆ. 11 ಆರೋಪಿಗಳ ವಿರುದ್ಧ ಮಾದಕ ಪದಾರ್ಥ ಸೇವನೆಯ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಹಿಂದೆ ಮಾದಕ ಪದಾರ್ಥ ಮಾರಾಟ, ಸೇವನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಗಳು ಹಾಗೂ ಅನುಮಾನಾಸ್ಪದ ವ್ಯಕ್ತಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುತ್ತಿದೆ. ಅವರ ಪ್ರಸ್ತುತ ಕೆಲಸ, ಈ ಹಿಂದೆ ದಾಖಲಾಗಿರುವ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿರುವ ಬಗ್ಗೆ ಹಾಗೂ ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗದೇ ವಾರಂಟ್, ಘೋಷಿತ ಆರೋಪಿಗಳೆಂದು ಪ್ರಕಟಣೆ ಹೊರಡಿಸಿರುವ ಬಗ್ಗೆ ಪರಿಶೀಲನೆ ಮಾಡಲಾಯಿತು.

ಅಲ್ಲದೇ ನ್ಯಾಯಾಲಯದ ವಿಚಾರಣೆ ವೇಳೆ ತಪ್ಪದೇ ಹಾಜರಾಗುವಂತೆ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಮಾದಕ ವಸ್ತು ಜಪ್ತಿ: ರಾಜಾನುಕುಂಟೆ ಪೊಲೀಸರು ಜುಲೈ 7 ರಂದು ದಾಳಿ ಮಾಡಿ, ಮೂವರು ವಿದೇಶಿ ಪ್ರಜೆಗಳನ್ನು ಬಂಧಿಸಿ, ಅವರಿಂದ ₹4.5 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದರು.

ಹೆಡ್ ಕಾನ್‌ಸ್ಟೆಬಲ್‌ಗೆ ಡ್ಯಾಗರ್‌ನಿಂದ ಹಲ್ಲೆ

ಅಪರಾಧ ಸುದ್ದಿ

ಬೆಂಗಳೂರು: ಜಗಳ ಬಿಡಿಸಲು ಹೋದ ಹೆಡ್ ಕಾನ್‌ಸ್ಟೆಬಲ್ ಮೇಲೆ ಡ್ಯಾಗರ್‌ನಿಂದ ಹಲ್ಲೆ ನಡೆಸಿರುವ ಘಟನೆ ಚಾಮರಾಜಪೇಟೆಯ ವಾಲ್ಮೀಕಿ ನಗರದಲ್ಲಿ ನಡೆದಿದ್ದು, ಘಟನೆ ಸಂಬಂಧ ಬಾಲಕ ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಜುಲೈ 26ರ ರಾತ್ರಿ ಈ ಘಟನೆ ನಡೆದಿದ್ದು, ಚಾಮರಾಜಪೇಟೆ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕೆಂಗೇರಿ ಅಂಚೆಪಾಳ್ಯ ನಿವಾಸಿ ಮೊಹಮ್ಮದ್ ಶಫೀವುಲ್ಲಾ ಗಾಯಗೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಸಂಬಂಧ ವಾಲ್ಮೀಕಿನಗರ ನಿವಾಸಿ ತಬರೇಜ್ ಅಲಿಯಾಸ್ ಚೋರ್ ತಬರೇಜ್, ಆತನ ಸಹಚರರಾದ ಅಬ್ರೇಜ್, ಸಲ್ಮಾನ್ ಪಾಷಾ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಲಾಗಿದೆ.

ಗಾಯಾಳುಗಳ ಪೈಕಿ ಮೊಹಮ್ಮದ್ ಶಫೀವುಲ್ಲಾ ಸಹೋದರಿಯ ಪುತ್ರಿಯನ್ನು ತಬರೇಜ್ ಮದುವೆಯಾಗಿದ್ದ. ಕೌಟುಂಬಿಕ ಕಾರಣಕ್ಕೆ ವಿಚ್ಛೇದನ ನೀಡಿದ್ದಾನೆ. ಹೀಗಾಗಿ ಆಕೆಗೆ ಬೇರೆ ಯುವಕನ ಜತೆ ಮದುವೆ ಮಾಡಿಸಿದ್ದರು. ಈ ವಿಚಾರಕ್ಕೆ ಕೋಪಗೊಂಡಿದ್ದ ಆರೋಪಿ, ತನ್ನ ಸಹಚರರ ಜತೆ ಶನಿವಾರ ರಾತ್ರಿ ವಾಲ್ಮೀಕಿ ನಗರಕ್ಕೆ ಬಂದಿದ್ದ ಮೊಹಮ್ಮದ್ ಶಫೀವುಲ್ಲಾನನ್ನು ಅಡ್ಡಗಟ್ಟಿ ಜಗಳ ಮಾಡಿ, ಡ್ಯಾಗರ್‌ನಿಂದ ಹಲ್ಲೆ ನಡೆಸಿದ್ದ. ಅದೇ ವೇಳೆ ಕರ್ತವ್ಯದಲ್ಲಿದ್ದ ಸಂತೋಷ್, ಜಗಳ ಬಿಡಿಸಲು ಸ್ಥಳಕ್ಕೆ ಹೋಗಿದ್ದಾರೆ. ಆಗ ಆರೋಪಿಗಳು ಡ್ರ್ಯಾಗರ್‌ನಿಂದ ಸಂತೋಷ್ ಮೇಲೆ ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಘಟನೆಯಲ್ಲಿ ಸಂತೋಷ್ ಅವರ ಎಡಗೈಗೆ ಗಂಭೀರ ಗಾಯವಾಗಿದೆ. ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ನಂತರ ಸ್ಥಳೀಯರು ಗಾಯಗೊಂಡಿದ್ದ ಸಂತೋಷ್ ಮತ್ತು ಮೊಹಮ್ಮದ್ ಶಫೀವುಲ್ಲಾ ಅವರನ್ನು ಆಸ್ಪತ್ರೆಗೆ ದಾಖಲಿಸಿ, ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು, ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

746 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಕೆ.ಆರ್.ಪುರ: ಇಲ್ಲಿನ ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್ ಪದವಿ ಪೂರೈಸಿದ ವಿವಿಧ ವಿಭಾಗಗಳ 742 ವಿದ್ಯಾರ್ಥಿಗಳು ಮತ್ತು ಪಿಎಚ್.ಡಿ ಪಡೆದ ನಾಲ್ವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಪಿ.ಬಲರಾಮ್, ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದ ಅಧ್ಯಕ್ಷ ಡಿ.ಕೆ.ಮೋಹನ್ ಬಾಬು, ಸ್ವಾಮಿ ಮನೋಹರ್, ಎ.ಆರ್.ಎಂ. ಎಂಬೆಡೆಡ್ ಟೆಕ್ನಾಲಜೀಸ್‌ನ ಪ್ರಾದೇಶಿಕ ಮುಖ್ಯಸ್ಥ ಸುಮೀತ್ ವರ್ಮಾ, ಕಾಲೇಜು ಸಿಇಒ ನಿತಿನ್ ಮೋಹನ್, ಸಲಹೆಗಾರ ಕೆ.ಎನ್. ಬಾಲಸುಬ್ರಹ್ಮಣ್ಯ ಮೂರ್ತಿ, ಪ್ರಾಂಶುಪಾಲೆ ಜಿ.ಇಂದುಮತಿ ಹಾಜರಿದ್ದರು.

ಬೀಗ ಮುರಿದು ಚಿನ್ನಾಭರಣ ಕಳವು

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರ ಮನೆಯ ಬಾಗಿಲಿನ ಬೀಗ ಒಡೆದು ನಗದು, ಚಿನ್ನಾಭರಣ ಸೇರಿದಂತೆ ₹ 30 ಲಕ್ಷ ಮೌಲ್ಯದ ಸ್ವತ್ತುಗಳನ್ನು ದೋಚಿ ಪರಾರಿಯಾಗಿರುವ ಘಟನೆ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಹಾಸನ ಜಿಲ್ಲೆಯ ಮೂಲದ ನಟೇಶ್ ಅವರು ಮಲ್ಲತಹಳ್ಳಿಯ ಎನ್‌ಜಿಇಎಫ್ ಬಡಾವಣೆಯಲ್ಲಿ ವಾಸವಾಗಿದ್ದರು. ಮೈಸೂರಿಗೆ ಹೋಗಿದ್ದ ಅವರು ವಾಪಸ್ ಮನೆಗೆ ಬಂದು ನೋಡಿದಾಗ, ಕಳ್ಳರು ಬೀರುವಿನ ಬೀಗ ಒಡೆದು ಅದರಲ್ಲಿದ್ದ ₹3 ಲಕ್ಷ ನಗದು ಹಾಗೂ 300 ಗ್ರಾಂ ಚಿನ್ನಾಭರಣವನ್ನು ದೋಚಿ ಪರಾಯಾಗಿರುವುದು ಕಂಡು ಬಂದಿದೆ.

ಬಾರದ ಸಹಾಯಧನ: ವಿವಿಧ ಯೋಜನೆಗಳ ಮಕ್ಕಳು, ಕುಟುಂಬಕ್ಕೆ ತೊಂದರೆ

ವೈದ್ಯಕೀಯ ವೆಚ್ಚಕ್ಕೂ ಪರದಾಟ

• ಬಸವರಾಜ ಹವಾಲ್ದಾರ

ಮುಖ್ಯಾಂಶಗಳು
- ಬಿಡುಗಡೆ ಆಗದ ಸಹಾಯಧನ
- ವಿದ್ಯಾಭ್ಯಾಸಕ್ಕೂ ತೊಂದರೆ
- ಔಷಧಗಳ ಖರೀದಿಗೂ ಸಂಕಷ್ಟ

ಬಾಗಲಕೋಟೆ: ಎಚ್‌ಐವಿ ಸೋಂಕಿತ ಮಕ್ಕಳಿಗೆ ನೆರವು ನೀಡುವ ವಿಶೇಷ ಪಾಲನಾ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ವ್ಯಾಪ್ತಿಯಲ್ಲಿರುವ ರಾಜ್ಯದ 13 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಮೂರು ತಿಂಗಳಿನಿಂದ ಸಹಾಯಧನ ಬಿಡುಗಡೆ ಆಗಿಲ್ಲ. ಅಷ್ಟೂ ಮಕ್ಕಳು ಮತ್ತು ಪೋಷಕರು ವೈದ್ಯಕೀಯ ವೆಚ್ಚ ಪಾವತಿ ಮತ್ತು ಮಕ್ಕಳ ಶಿಕ್ಷಣ ಶುಲ್ಕ ಭರಿಸಲು ಕಷ್ಟಪಡುವಂತಾಗಿದೆ.

ಮಕ್ಕಳ ಪೌಷ್ಟಿಕ ಆಹಾರ ಸೇವನೆ, ವೈದ್ಯಕೀಯ ಮತ್ತು ಇತರೆ ವೆಚ್ಚಗಳಿಗೆ ರಾಜ್ಯದ 12,335 ಮಕ್ಕಳಿಗೆ ಪ್ರತಿ ತಿಂಗಳು ₹2 ಸಾವಿರ ಸಹಾಯಧನವನ್ನು ವಿಶೇಷ ಪಾಲನಾ ಯೋಜನೆಯಡಿ ನೀಡಲಾಗುತ್ತದೆ. ಆದರೆ ಮೂರು ತಿಂಗಳಿಂದ ₹7.40 ಕೋಟಿ ಸಹಾಯಧನ ಬಾಕಿ ಉಳಿದಿದೆ.

ಎಚ್‌ಐವಿ ಸೋಂಕಿತ ಮಕ್ಕಳ ಹಲವು ಪೋಷಕರೂ ಸೋಂಕಿತರಾಗಿದ್ದು, ಅವರಿಗೆ ದುಡಿಯುವ ಶಕ್ತಿ ಇರುವುದಿಲ್ಲ. ಕೆಲವರ ಪೋಷಕರು ತೀರಿಕೊಂಡಿದ್ದು, ಮಕ್ಕಳು ಸಂಬಂಧಿಕರ ಮನೆಯಲ್ಲಿದ್ದಾರೆ. ಎಚ್‌ಐವಿ ವಿರುದ್ಧ ಹೋರಾಡಲು ಪೌಷ್ಟಿಕ ಆಹಾರ ಸೇವನೆ ಅತ್ಯಗತ್ಯ. ಆದರೆ, ನಿಯಮಿತವಾಗಿ ಸಹಾಯಧನ ಸಿಗದ ಕಾರಣ ಸಮಸ್ಯೆಯಾಗಿದೆ.

> ಪ್ರಾಯೋಜಕತ್ವ ಯೋಜನೆಯಡಿ ಸಹಾಯ ಧನ ಬಿಡುಗಡೆಯಾಗಿದೆ. ಉಳಿದ ಯೋಜನೆಗಳಡಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ
> **ವೀಣಾ ಎಂ.,** ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಬಾಗಲಕೋಟೆ

ಮಕ್ಕಳ ಉನ್ನತ ವ್ಯಾಸಂಗ ಮತ್ತು ವೃತ್ತಿ ತರಬೇತಿಗಾಗಿ ಪ್ರತಿ ತಿಂಗಳು ಮಕ್ಕಳ ಪಾಲನಾ ಸಂಸ್ಥೆಯಿಂದ ನೀಡಲಾಗುತ್ತಿದ್ದ ₹5 ಸಾವಿರ ಸಹಾಯಧನ, ಕೋವಿಡ್ ಸಂದರ್ಭದಲ್ಲಿ ತಂದೆ–ತಾಯಿಯನ್ನು ಕಳೆದುಕೊಂಡ 18 ವರ್ಷದೊಳಗಿನ ಮಕ್ಕಳ ಆರೈಕೆಗೆ ಪ್ರತಿ ತಿಂಗಳು ₹3,500 ಬಿಡುಗಡೆ ಆಗಬೇಕಿತ್ತು. ಅವರಿಗೂ ಹಣ ಸಿಕ್ಕಿಲ್ಲ.

ಮಕ್ಕಳ ಪಾಲನಾ ಸಂಸ್ಥೆಯಿಂದ ಬಿಡುಗಡೆಯಾದ ಮಕ್ಕಳು, ಅನಾಥ, ಏಕಪೋಷಕ, ಜೈಲಿನಲ್ಲಿರುವ ಪಾಲಕರ ಮಕ್ಕಳಿಗೆ ಉತ್ತಮ ವಾತಾವರಣದಲ್ಲಿ ಬೆಳೆಯಲು ಹಾಗೂ ವಿದ್ಯಾಭ್ಯಾಸಕ್ಕಾಗಿ ಪ್ರಾಯೋಜಕತ್ವ ಯೋಜನೆಯಡಿ ಪ್ರತಿ ತಿಂಗಳು ₹4 ಸಾವಿರ ಸಹಾಯಧನ ನೀಡಲಾಗುತ್ತದೆ. ರಾಜ್ಯದಲ್ಲಿ 8,900 ಮಕ್ಕಳಿದ್ದು, ಅವರಿಗೆ ಅನುದಾನ ಬಿಡುಗಡೆಯಾಗಿದ್ದು, ಖಾತೆಗಳಿಗೆ ಜಮಾ ಆಗಬೇಕಿದೆ.

‘ನಿತ್ಯ ಪೌಷ್ಟಿಕ ಆಹಾರ ಸೇವಿಸಬೇಕು. ಆಗಾಗ ಕಾಡುವ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಉಚಿತವಾಗಿ ದೊರೆತರೂ, ಕೆಲವೊಂದು ಔಷಧಗಳನ್ನು ಹೊರಗಡೆ ತೆಗೆದುಕೊಳ್ಳಬೇಕಾಗುತ್ತದೆ. ಪ್ರತಿ ತಿಂಗಳು ಸಹಾಯಧನ ನೀಡದಿದ್ದರೆ ತೀವ್ರ ತೊಂದರೆಯಾಗುತ್ತದೆ’ ಎಂದು ಬಾಲಕನೊಬ್ಬ ಅಳಲು ತೋಡಿಕೊಂಡನು.

ಉಕ್ಕಿ ಹರಿದ ನದಿಗಳು; ಪ್ರವಾಹದ ಭೀತಿ

ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆ ಹೊರ ಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಹಾರಾಷ್ಟ್ರದಲ್ಲಿ ಭಾರಿ ಮಳೆ
- ಭೀಮಾ ಮತ್ತು ಕೃಷ್ಣಾ ನದಿಯಲ್ಲಿ ನೀರಿನ ಹರಿವು ಹೆಚ್ಚಳ
- ನದಿ ಸುತ್ತಲಿನ ಗ್ರಾಮಸ್ಥರಿಗೆ ಕಟ್ಟೆಚ್ಚರ ವಹಿಸಲು ಸೂಚನೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂಗಾರು ಮಳೆ ಉತ್ತಮವಾಗಿದ್ದು, ಬಹುತೇಕ ಜಲಾಶಯಗಳಿಗೆ ಒಳ ಹರಿವು ಹೆಚ್ಚಾಗಿ ನೀರಿನ ಮಟ್ಟದಲ್ಲಿ ಗಣನೀಯ ಏರಿಕೆಯಾಗಿದೆ. ಇದರ ಪರಿಣಾಮ ಜಲಾಶಯಗಳಿಂದ ಹೊರ ಹರಿವಿನ ಪ್ರಮಾಣವೂ ಹೆಚ್ಚಾಗಿದ್ದು, ನದಿ ಪಾತ್ರದ ಪ್ರದೇಶಗಳಲ್ಲಿ ಪ್ರವಾಹದ ಸ್ಥಿತಿ ಆವರಿಸಿದೆ.

ಮಹಾರಾಷ್ಟ್ರದಲ್ಲಿ ಭಾರಿ ಮಳೆ-ಆಗುತ್ತಿದ್ದು, ಭೀಮಾ ಮತ್ತು ಕೃಷ್ಣಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಉಜನಿ ಜಲಾಶಯದಿಂದ ಭೀಮಾನದಿಗೆ 42 ಸಾವಿರ ಕ್ಯೂಸೆಕ್ ನೀರನ್ನು ಹರಿಬಿಡಲಾಗುತ್ತಿದೆ. ಹೀಗಾಗಿ, ನದಿ ಸುತ್ತಲಿನ ಗ್ರಾಮಸ್ಥರಿಗೆ ಕಟ್ಟೆಚ್ಚರ ವಹಿಸುವಂತೆ ಕಲಬುರಗಿಯ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ. ಚಿಂಚೋಳಿ ತಾಲ್ಲೂಕಿನ ನಾಗರಾಳ ಜಲಾಶಯದಿಂದಲೂ ನೀರು ಹರಿಬಿಡಲಾಗುತ್ತಿದೆ.

ಆಲಮಟ್ಟಿ ಜಲಾಶಯದಲ್ಲಿ ಒಳಹರಿವು 60,160 ಕ್ಯೂಸೆಕ್ ಇದ್ದು, ಹೊರ ಹರಿವನ್ನು 1,20,000 ಕ್ಯೂಸೆಕ್‌ಗೆ ಏರಿಸಲಾಗಿದೆ. ನಾರಾಯಣಪುರ ಜಲಾಶಯಕ್ಕೆ ಒಳಹರಿವು 1,20,000 ಕ್ಯೂಸೆಕ್ ಇದ್ದು, ಹೊರ ಹರಿವು 1,23,400 ಕ್ಯೂಸೆಕ್‌ನಷ್ಟಿದೆ.

ಹಿಡಕಲ್ ಡ್ಯಾಂ ಭರ್ತಿ (ಹುಕ್ಕೇರಿ ವರದಿ): ಬೆಳಗಾವಿ ಜಿಲ್ಲೆಯ ರಾಜಾ ಲಖಮಗೌಡ ಜಲಾಶಯ (ಹಿಡಕಲ್ ಡ್ಯಾಂ) ಬಹುತೇಕ ಭರ್ತಿಯಾಗಿದೆ. ಭಾನುವಾರ ಶೇ 93ರಷ್ಟು ನೀರು ಸಂಗ್ರಹವಾದ ಹಿನ್ನೆಲೆಯಲ್ಲಿ 10 ಕ್ರಸ್ಟ್‌ಗೇಟ್‌ಗಳ ಮೂಲಕ 10 ಸಾವಿರ ಕ್ಯೂಸೆಕ್ ನೀರು ನದಿಗೆ ಹರಿಬಿಡಲಾಯಿತು.

ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುವ ಸಂಭವವಿದ್ದು, ನೀರಿನ ಒಳ ಹರಿವು ಹೆಚ್ಚಾದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಲಾಗುವುದು ಎಂದು ಜಲಾಶಯದ ಕಾರ್ಯಪಾಲಕ ಎಂಜಿನಿಯರ್ ಅರವಿಂದ ಜಮಖಂಡಿ ತಿಳಿಸಿದ್ದಾರೆ. ಘಟಪ್ರಭಾ ಮತ್ತು ಹಿರಣ್ಯಕೇಶಿ ನದಿ ತಟದ ಜನರು ನೀರಿನ ಹರಿವು ಹೆಚ್ಚಾಗುವ ಮೊದಲೇ ತಮ್ಮ ದನಕರು ಜತೆ ಸುರಕ್ಷಿತ ಸ್ಥಳಕ್ಕೆ ಹೋಗುವಂತೆ ಎಂಜನಿಯರ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಿ.ಕೆ. ಜಗದೀಶ್ ಎಚ್ಚರಿಕೆ ನೀಡಿದ್ದಾರೆ.

ತುಂಗಭದ್ರಾ ಹೆಚ್ಚಿದ ಹರಿವು (ಹೊಸಪೇಟೆ ವರದಿ): ತುಂಗಭದ್ರಾ ಜಲಾಶಯಕ್ಕೆ ಲಕ್ಷಕ್ಕೂ ಹೆಚ್ಚು ಕ್ಯೂಸೆಕ್ ಒಳ ಹರಿವು ದಾಖಲಾಗುತ್ತಿದ್ದು, ಭಾನುವಾರ ಸಂಜೆ 1.10 ಲಕ್ಷ ಕ್ಯೂಸೆಕ್ ನೀರು ತುಂಗಭದ್ರಾ ನದಿಗೆ ಹರಿಸಲಾಗುತ್ತಿದೆ.

ನದಿಗೆ ನೀರು ಹರಿಯ ಬಿಟ್ಟ ಪರಿಣಾಮ ಹಂಪಿಯ ನದಿ ಪಾತ್ರದ ವಿವಿಧ ಮಂಟಪಗಳು ಮುಳುಗಡೆಯ ಭೀತಿ ಎದುರಾಗಿದೆ. ತುಂಗಾ ಜಲಾಶಯದಿಂದ 80 ಸಾವಿರ ಕ್ಯೂಸೆಕ್, ಭದ್ರಾ ಅಣೆಕಟ್ಟಿನಿಂದ 40 ಸಾವಿರ ಕ್ಯೂಸೆಕ್ ನೀರು ಹರಿಸಲಾಗಿದೆ. ವರದಾ ನದಿಯಿಂದ 20 ಸಾವಿರ ಕ್ಯೂಸೆಕ್ ನೀರು ತುಂಗಭದ್ರಾನದಿಗೆ ಸೇರುತ್ತಿದೆ.

ಕಂಪ್ಲಿ ಸೇತುವೆ ಸಂಚಾರ ಬಂದ್ (ಗಂಗಾವತಿ ವರದಿ): ತುಂಗಭದ್ರಾ ಜಲಾಶಯದಿಂದ ಅಪಾರ ಪ್ರಮಾಣದಲ್ಲಿ ನದಿಗೆ ನೀರು ಬಿಟ್ಟಿದ್ದರಿಂದ ಭಾನುವಾರ ಕೊಪ್ಪಳ ಜಿಲ್ಲೆಯ ಗಂಗಾವತಿ-ಕಂಪ್ಲಿ ನಡುವೆ ಸಂಪರ್ಕ ಕಲ್ಪಿಸುವ ಸೇತುವೆ ಜಲಾವೃತವಾಗಿದ್ದು, ಈ ಮಾರ್ಗದಲ್ಲಿ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಹೊಸಪೇಟೆಯಿಂದ ಕಂಪ್ಲಿ ಮಾರ್ಗವಾಗಿ ಗಂಗಾವತಿಗೆ ಬಂದು ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ತೆರಳುತ್ತಿದ್ದ ಬಸ್‌ಗಳು ಈಗ 10 ಕಿ.ಮೀ ಸುತ್ತಿಕೊಂಡು ಆನೆಗೊಂದಿ ಸಮೀಪದ ಕಡೇಬಾಗಿಲು ಮೂಲಕ ಗಂಗಾವತಿಗೆ ಬರಬೇಕಾಗಿವೆ.

ಆನೆಗೊಂದಿ ಸಮೀಪದಲ್ಲಿ-ರುವ ವಿಜಯನಗರ ಸಾಮ್ರಾಜ್ಯ ಕಾಲದ ಸೇತುವೆ, ಚಕ್ರತೀರ್ಥ, ನವವೃಂದಾವನ, ವಿರೂಪಾಪುರಗಡ್ಡೆಯಿಂದ ಹಂಪಿಗೆ ತೆರಳುವ ಮಾರ್ಗದ ಸಂಪರ್ಕ ಕಡಿತವಾಗಿದೆ. ಆನೆಗೊಂದಿಯಲ್ಲಿ-ರುವ ಕೃಷ್ಣದೇವರಾಯ ಸಮಾಧಿ (64 ಸಾಲಿನ ಕಂಬಗಳ ದೇವಸ್ಥಾನ) ನೀರಿನಲ್ಲಿ ಮುಳುಗಿದೆ. ಚಿಂತಾಮಣಿ ಬಳಿಯ ಮಂಟಪ, ಬಸವಣ್ಣನ ದೇವಸ್ಥಾನ ಜಲಾವೃತವಾಗಿದೆ.

ನದಿಗೆ ಸಂಪರ್ಕಿಸುವ ಮಾರ್ಗಗಳು ಬಂದ್ (ಶ್ರೀರಂಗಪಟ್ಟಣ ವರದಿ:) ಕೆಆರ್‌ಎಸ್ ಜಲಾಶಯದಿಂದ ಕಾವೇರಿ ನದಿಗೆ ಭಾನುವಾರ 56,447 ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗಿರುವುದರಿಂದ ಪಟ್ಟಣದಲ್ಲಿ ನದಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳನ್ನು ಬಂದ್ ಮಾಡಲಾಗಿದೆ. ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ನದಿಯಲ್ಲಿ ಪ್ರವಾಹ ಪರಿಸ್ಥಿತಿ ತಗ್ಗುವವರೆಗೆ ದೋಣಿ ವಿಹಾರ ಇರುವುದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹೇಮಾವತಿಗೆ ಹೆಚ್ಚಿದ ಹರಿವು (ಹಾಸನ ವರದಿ): ಪಶ್ಚಿಮ ಘಟ್ಟದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಹೇಮಾವತಿ ನದಿಗೆ ಒಳಹರಿವು ಹೆಚ್ಚಾಗಿದೆ. ಶನಿವಾರ ರಾತ್ರಿಯಿಂದ 46ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ. ಇನ್ನೊಂದೆಡೆ ಹಾರಂಗಿ ಜಲಾಶಯದಿಂದ ಕಾವೇರಿ ನದಿಗೆ ನೀರು ಬಿಡಲಾಗುತ್ತಿದ್ದು, ಅರಕಲಗೂಡು ತಾಲ್ಲೂಕಿನ ರಾಮನಾಥಪುರ, ಕೊಣನೂರು ಹೋಬಳಿಗಳಲ್ಲಿ ನದಿ ಉಕ್ಕಿ ಹರಿಯುತ್ತಿದೆ. ರಾಮನಾಥಪುರದ ಸ್ನಾನಘಟ್ಟ ಸಂಪೂರ್ಣ ಮುಳುಗಡೆಯಾಗಿದ್ದು, ತೋಟಕ್ಕೆ ಕಾವೇರಿ ನದಿ ನೀರು ನುಗ್ಗಿದೆ.

ಮೈಸೂರು ಜಿಲ್ಲೆಯ ಎಚ್‌.ಡಿ.ಕೋಟೆ ತಾಲ್ಲೂಕಿನ ತಾರಕ ಜಲಾಶಯದಿಂದ ನದಿಗೆ ಹೆಚ್ಚು ನೀರು ಬಿಟ್ಟಿರುವುದರಿಂದ ಕಟ್ಟೇಮನುಗನಹಳ್ಳಿ ಗ್ರಾಮದ ಬಳಿಯ ಸೇತುವೆ ಮುಳುಗಡೆಯಾಗಿದೆ. ಕಪಿಲಾ ನದಿ ಮೈದುಂಬಿ ಹರಿಯುತ್ತಿದ್ದು, ನದಿ ಪಾತ್ರದ ಜನರಿಗೆ ಪ್ರವಾಹದ ಭೀತಿ ಎದುರಾಗಿದೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟ ಸಂಪೂರ್ಣವಾಗಿ ಮುಳುಗಡೆಯಾಗಿದ್ದು, ಹದಿನಾರು ಕಾಲು ಮಂಟಪ ಭಾಗಶಃ ಮುಳುಗಿದೆ. ಮುಡಿಕಟ್ಟೆಯವರೆಗೂ ನೀರು ಬಂದಿದೆ. ಸ್ನಾನಘಟ್ಟಕ್ಕೆ ಪ್ರವೇಶ ನಿಷೇಧಿಸಲಾಗಿದೆ.

ನಂಜನಗೂಡಿನ ಹಳ್ಳದಕೇರಿಯ ಐದು ಮನೆಗಳು ಸಂಪೂರ್ಣವಾಗಿ ಜಲಾವೃತಗೊಂಡಿವೆ. ತೋಪಿನ ಬೀದಿ, ಕುರುಬಗೇರಿ, ಒಕ್ಕಲಗೇರಿ, ಸರಸ್ವತಿ ಕಾಲೊನಿ, ರಾಜಾಜಿನಗರ, ತಮ್ಮಡಗೇರಿ ನಿವಾಸಿಗಳಿಗೆ ಪ್ರವಾಹದ ಭೀತಿ ಆವರಿಸಿದೆ.



ಹಾಸನ ತಾಲ್ಲೂಕಿನ ಗೊರೂರಿನ ಹೇಮಾವತಿ ಜಲಾಶಯದಿಂದ ಭಾನುವಾರ ಅಪಾರ ಪ್ರಮಾಣದ ನೀರನ್ನು ನದಿಗೆ ಹರಿಸಲಾಯಿತು



ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ 10 ಕ್ರಸ್ಟ್ ಗೇಟ್‌ಗಳ ಮೂಲಕ 10 ಸಾವಿರ ಕ್ಯೂಸೆಕ್ ನೀರನ್ನು ಭಾನುವಾರ ನದಿಗೆ ಬಿಡಲಾಯಿತು

ಮರ ಬಿದ್ದು ಮಹಿಳೆ ಸಾವು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಭಾನುವಾರ ಬೀಸಿದ ಭಾರಿ ಗಾಳಿ, ಮಳೆಗೆ ಇಲ್ಲಿನ ನಾಲ್ಕೂರು ಗ್ರಾಮದ ಚತ್ರಪ್ಪಾಡಿ ಎಂಬಲ್ಲಿ ಮರ ಬಿದ್ದು ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಚತ್ರಪ್ಪಾಡಿಯ ದಿ.ಗೋಪಾಲ ಭಂಡಾರಿ ಅವರ ಪತ್ನಿ ರುಕ್ಮಿಣಿ ಮೃತಪಟ್ಟವರು.

ಅವರು ಮನೆಯ ಅಂಗಳದಲ್ಲಿದ್ದಾಗ ಮರ ಬಿದ್ದು ಅವಘಡ ನಡೆದಿದೆ. ರುಕ್ಮಿಣಿ ಅವರು ಮನೆಯಲ್ಲಿ ಒಬ್ಬರೇ ಇದ್ದು, ಇಬ್ಬರು ಪುತ್ರಿಯರು, ಪುತ್ರ ಕೆಲಸದ ನಿಮಿತ್ತ ಬೇರೆ ಕಡೆ ಇದ್ದರು.

ಕೊಡಗಿನಲ್ಲಿ ನಿಲ್ಲದ ಗಾಳಿ, ಅಪಾರ ಹಾನಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಭಾನುವಾರ ಮಳೆ ತಗ್ಗಿದ್ದು, ಬಿರುಗಾಳಿ ಬೀಸುತ್ತಲೇ ಇದೆ. ಇದರಿಂದಾಗಿ, ಗ್ರಾಮ ಪಂಚಾಯಿತಿ ಕಟ್ಟಡಗಳು, ಅಂಗನವಾಡಿಗಳು, ಶಾಲೆಗಳು, ಮನೆಗಳು ಹಾಗೂ ವಾಹನಗಳ ಮೇಲೆ ಮರಗಳು ಉರುಳುತ್ತಿವೆ. ರಸ್ತೆಗಳಲ್ಲಿ ಸಂಚರಿಸುವುದೂ ಅಪಾಯಕಾರಿಯಾಗಿ ಪರಿಣಮಿಸಿದೆ.

ವಿದ್ಯುತ್ ಪೂರೈಕೆ ಕಡಿತಗೊಂಡಿದ್ದು, ಹಲವು ಗ್ರಾಮಗಳು ಕತ್ತಲೆಯಲ್ಲಿ ಮುಳುಗಿವೆ. ಹವಾಮಾನ ಇಲಾಖೆಯು ಸೋಮವಾರ (ಜುಲೈ 28) ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಿದೆ.

ಹಾರಂಗಿ ಜಲಾಶಯದಿಂದ ಹೆಚ್ಚಿನ ಪ್ರಮಾಣದ ನೀರು ನದಿಗೆ ಹರಿಯು-ತ್ತಿರುವುದರಿಂದ ಯಡವನಾಡು– ಹಾರಂಗಿ ಸೇತುವೆ ಮುಳುಗಡೆಯಾಗಿದೆ. ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ. ಕಾವೇರಿ ನದಿ ಉಕ್ಕಿ ಹರಿ-ಯುತ್ತಿರುವುದರಿಂದ ಕಣಿವೆ ಗ್ರಾಮದ ತೂಗು ಸೇತುವೆಗೆ ಪ್ರವಾಸಿಗರ ಪ್ರವೇಶ ನಿಷೇಧಿಸಿ, ಗ್ರಾಮಸ್ಥರ ಸಂಚಾರಕ್ಕೆ ಮಾತ್ರ ಅವಕಾಶ ಕೊಡಲಾಗಿದೆ.

ಶಾಂತಳ್ಳಿಯಲ್ಲಿ 23, ಹುದಿಕೇರಿ 19, ಶ್ರೀಮಂಗಲ 16, ಭಾಗಮಂಡಲ, ಸೋಮವಾರಪೇಟೆ ತಲಾ 11, ಮಡಿಕೇರಿ, ಸಂಪಾಜೆ ತಲಾ 10 ಸೆಂ.ಮೀ. ಮಳೆಯಾಗಿದೆ.

ಸುದ್ದಿ 2 ನಿಮಿಷ

'ವಿಶ್ವಕರ್ಮ ಎಂದು ನಮೂದಿಸಿ'

ಹುಬ್ಬಳ್ಳಿ: 'ವಿಶ್ವಕರ್ಮ ಸಮಾಜದಲ್ಲಿ 39 ಉಪಜಾತಿಗಳಿವೆ. ಜಾತಿ ಗಣತಿ ಸಂದರ್ಭದಲ್ಲಿ ಜಾತಿ ಕಾಲಂನಲ್ಲಿ ಉಪಜಾತಿಗಳ ಹೆಸರು ನಮೂದಿಸದೆ, ವಿಶ್ವಕರ್ಮ ಎಂದು ಬರೆಸಬೇಕು' ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ಕೆ.ಪಿ.ನಂಜುಂಡಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಂಚ ಕುಲಕಸುಬುಗಳನ್ನು ಮಾಡುವರೆಲ್ಲರೂ ವಿಶ್ವಕರ್ಮರು. ವಿಶ್ವ ಬ್ರಾಹ್ಮಣ ಎಂಬುದು ವಿಶ್ವಕರ್ಮ ಜಾತಿಯ ಉಪಜಾತಿಯಾಗಿದೆ. ಇದಕ್ಕೂ, ಬ್ರಾಹ್ಮಣ ಜಾತಿಗೂ ಸಂಬಂಧವಿಲ್ಲ' ಎಂದರು.

'ರಾಜ್ಯದಲ್ಲಿ ಮುಂದಿನ ವರ್ಷದಿಂದ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದಿಂದ ಐದು ಸಾವಿರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

'ರಾಜ್ಯ ಸರ್ಕಾರ ಮರು ಜಾತಿ ಸಮೀಕ್ಷೆ ನಡೆಸಲು ಮುಂದಾಗಿದೆ. ಎಲ್ಲ ಸಮಾಜಗಳು ಜಾಗೃತರಾಗಬೇಕು. ಇಲ್ಲದಿದ್ದರೆ, ಧ್ವನಿ ಇಲ್ಲದ ಸಮಾಜಗಳಿಗೆ ಅನ್ಯಾಯವಾಗುತ್ತದೆ. ರಾಜಕೀಯ ಜ್ಞಾನ ಇರುವ ಸಮಾಜದವರು ಪ್ರಬಲ-ರಾಗುತ್ತಾರೆ' ಎಂದರು.

'ನಾನು ವಿಧಾನ ಪರಿಷತ್ ಸ್ಥಾನದ ಆಕಾಂಕ್ಷಿಯಲ್ಲ. ಯಾವುದೇ ಸ್ಥಾನ-ಮಾನಕ್ಕಿಂತ ನಮ್ಮ ಸಮಾಜಕ್ಕೆ ನ್ಯಾಯ ಸಿಗಬೇಕು ಎಂಬುದು ನನ್ನ ಉದ್ದೇಶ. ಕಾಂಗ್ರೆಸ್ ಸೇರುವ ಸಂದರ್ಭದಲ್ಲಿ ಯಾವುದೇ ಸ್ಥಾನಮಾನಕ್ಕಾಗಿ ಷರತ್ತು ಹಾಕಿಲ್ಲ' ಎಂದು ಹೇಳಿದರು.



'ವಿಶ್ವಕರ್ಮ ಸಮಾಜಕ್ಕೆ ಸದ್ಯ 2ಎ ಮೀಸಲಾತಿ ಕಲ್ಪಿಸಲಾಗಿದೆ. ಪ್ರಬಲ ಜಾತಿಗಳ ನಡುವೆ ನಮ್ಮ ಸಮಾಜಕ್ಕೆ ಮೀಸಲಾತಿಯ ಲಾಭ ಸಿಗುತ್ತಿಲ್ಲ. ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು' ಎಂದು ಒತ್ತಾಯಿಸಿದರು.

ರಂಭಾಪುರಿಶ್ರೀ ಆತ್ಮಾವಲೋಕನ ಮಾಡಿಕೊಳ್ಳಲಿ: ವಚನಾನಂದ ಶ್ರೀ

ಚಿತ್ರದುರ್ಗ: 'ಜಾತಿ ಪೀಠಗಳು ಜ್ಯೋತಿಯಾಗಿ ಜಾತ್ಯತೀತ ತತ್ವ ಅಳವ-ಡಿಸಿಕೊಂಡಿವೆ. ಕಲುಷಿತ ಮನಃಸ್ಥಿತಿ ಇದ್ದವರು ಮಾತ್ರ ಮಠಗಳ ಬಗ್ಗೆ ಕೀಳಾಗಿ ಮಾತನಾಡಲು ಸಾಧ್ಯ' ಎಂದು ಹರಿಹರ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಹೇಳಿದರು.


'ಜಾತಿವಾರು ಮಠಗಳಿಂದ ಸಮಾಜ ಕಲುಷಿತವಾಗಿರುವುದಾಗಿ ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿರುವುದು ಗಮನಕ್ಕೆ ಬಂದಿದೆ. ಹೀಗೆ ಮಾತನಾಡುವ ನೈತಿಕ ಹಕ್ಕು ಅವರಿಗಿಲ್ಲ. ಪಂಚಮಸಾಲಿ ಪೀಠಗಳ ಉಗಮಕ್ಕೆ ಕಾರಣವೇನು ಎಂಬ ಬಗ್ಗೆ ಅವರು ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ನಾವು ಬೇಡ ಜಂಗಮಕ್ಕೆ ಸೇರಿದ್ದು, ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವಂತೆ ಪಂಚಪೀಠದವರು 2003ರಲ್ಲಿ ಅಂದಿನ ಪ್ರಧಾನಿ ವಾಜಪೇಯಿ, ಬಿಜೆಪಿ ಹಿರಿಯ ನಾಯಕ ಎಲ್‌.ಕೆ.ಅಡ್ವಾಣಿ ಅವರನ್ನು ಕೇಳಿದ್ದರೇ ಹೊರತು ವೀರಶೈವ ಲಿಂಗಾಯತರ ಮೀಸಲಾತಿಗೆ ಬೇಡಿಕೆ ಇಟ್ಟಿರಲಿಲ್ಲ' ಎಂದು ಆರೋಪಿಸಿದರು.

'ವೀರಶೈವ ಲಿಂಗಾಯತರಲ್ಲಿ ಪಂಚಪೀಠದವರದ್ದು ಅತಿ ಚಿಕ್ಕ ಸಮಾಜ. ಅವರು ಪೂಜೆ, ಪುನಸ್ಕಾರ ಮಾಡುವ ಜನಾಂಗದ ಶ್ರೀಗಳು. ವೀರಶೈವ ಲಿಂಗಾಯತರಲ್ಲಿ ಶೇ 80ರಷ್ಟು ಪಂಚಮಸಾಲಿ ಜನರಿದ್ದಾರೆ. ರಾಜ್ಯದಲ್ಲಿ ಪಂಚಪೀಠದ ಜನಸಂಖ್ಯೆ ತುಂಬಾ ಕಡಿಮೆಯಿದೆ. ಊರಿಗೆ ಎರಡೋ ಮೂರೋ ಮನೆಗಳಿವೆ' ಎಂದು ದೂರಿದರು.

'ಪೀಠದಲ್ಲಿ ಕುಳಿತವರ ತಪ್ಪು ಹೇಳಿಕೆಗಳಿಂದ ಒಡಕು ಮೂಡಿದೆ. ವೀರಶೈವ ಲಿಂಗಾಯತ ಒಳಪಂಗಡ ಒಟ್ಟಾಗಬೇಕೆಂಬುದು ನಮ್ಮ ಅಭಿಪ್ರಾಯ. ದಾವಣಗೆರೆಯಲ್ಲಿ ಪಂಚಪೀಠಾಧೀಶರ ನೇತೃತ್ವದಲ್ಲಿ ನಡೆದಿದ್ದ ಶೃಂಗಸಭೆಯಲ್ಲಿ ಕೈಗೊಂಡಿರುವ ನಿರ್ಣಯ ಪಂಚಮಸಾಲಿ ಸಮಾಜಕ್ಕೆ ಅನ್ವಯವಾಗುವುದಿಲ್ಲ. ಆಗಸ್ಟ್ 10ರಂದು ಪಂಚಮಸಾಲಿ ಪೀಠದಲ್ಲಿ ಸಮಾಜದ ಸಭೆ ಇದೆ. ಅಲ್ಲಿ ಕೈಗೊಂಡ ನಿರ್ಣಯವನ್ನು ಸಮಾಜಕ್ಕೆ ರವಾನಿಸುತ್ತೇವೆ. ಜಾತಿಗಣತಿಯಲ್ಲಿ ಏನು ಬರೆಸಬೇಕೆಂಬ ಸ್ಪಷ್ಟ ಸಂದೇಶ ನೀಡುತ್ತೇವೆ' ಎಂದರು.

'ಅವಮಾನಿಸುವ ಉದ್ದೇಶದಿಂದ ಮಾತನಾಡಿಲ್ಲ'



ಯತೀಂದ್ರ ಸಿದ್ದರಾಮಯ್ಯ

ಮೈಸೂರು: 'ನಾನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಅವಮಾನ ಮಾಡುವ ಉದ್ದೇಶದಿಂದ ಮಾತನಾಡಿಲ್ಲ. ನನ್ನ ಹೇಳಿಕೆಯನ್ನು ತಪ್ಪಾಗಿ ಗ್ರಹಿಸಲಾಗಿದೆ' ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.

ಇಲ್ಲಿ ಭಾನುವಾರ ಪತ್ರಕರ್ತರಿಗೆ ಪ್ರತಿಕ್ರಿಯಿಸಿದ ಅವರು, 'ಮೈಸೂರು ಸೇರಿದಂತೆ ಇಡೀ ರಾಜ್ಯಕ್ಕೆ ನಾಲ್ವಡಿ ಒಡೆಯರ್ ಕೊಟ್ಟ ಕೊಡುಗೆಗಳು ಬಹಳಷ್ಟಿವೆ. ಅವರನ್ನು ಕಮ್ಮಿ ಮಾಡಿ ನಮ್ಮ ಸರ್ಕಾರ ಜಾಸ್ತಿ ಮಾಡಿದೆ ಎಂದು ಹೇಳಿಲ್ಲ. ಆದರೆ, ಸ್ವಾತಂತ್ರ್ಯ ನಂತರದಲ್ಲಿ ಮೈಸೂರಿಗೆ ಅತಿ ಹೆಚ್ಚು ಅನುದಾನ ಕೊಟ್ಟಿರುವುದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ. ನಮ್ಮ ತಂದೆ ಕೊಟ್ಟಷ್ಟು ಅನುದಾನವನ್ನು ಇನ್ನಾವ ಮುಖ್ಯಮಂತ್ರಿಗಳೂ ಕೊಟ್ಟಿಲ್ಲ. ಈ ಬಗ್ಗೆ ಕ್ಷಮೆಯಾಚಿಸುವ ಪ್ರಮೇಯವೇ ಇಲ್ಲ' ಎಂದು ಹೇಳಿದರು.

ಕಾಂಗ್ರೆಸ್‌ನವರಿಗೆ ನೈತಿಕ ಹಕ್ಕಿಲ್ಲ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಗದಗ: 'ಮಹದಾಯಿ ವಿಚಾರದಲ್ಲಿ ಕಾಂಗ್ರೆಸ್‌ನವರಿಗೆ ಮಾತನಾಡುವ ನೈತಿಕ ಹಕ್ಕಿಲ್ಲ. ಮಹದಾಯಿ ವಿಚಾರದಲ್ಲಿ ಏನಾದರೂ ಪ್ರಗತಿ ಆಗಿದ್ದರೆ ಅದು ಬಿಜೆಪಿ ಸರ್ಕಾರದಿಂದ ಮಾತ್ರ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನವರು ನ್ಯಾಯಮಂಡಳಿ ಮಾಡಿ ಅದಕ್ಕೆ ನಾಲ್ಕು ವರ್ಷ ಕಚೇರಿ ಕೊಡಲಿಲ್ಲ. ನಮ್ಮ ಸರ್ಕಾರ ಬಂದು ಕಚೇರಿ ನೀಡಿತು. ಮಹದಾಯಿ ಯೋಜನೆಗೆ ಡಿಪಿಆರ್ ಮಾಡಿ ಒಪ್ಪಿಗೆ ಪಡೆದಿದ್ದು ಕೇಂದ್ರದ ಎನ್‌ಡಿಎ ಸರ್ಕಾರ. ಪರಿಸರ ಇಲಾಖೆ ಅನುಮತಿಯನ್ನೂ ಬಿಜೆಪಿ ಸರ್ಕಾರವೇ ಕೊಡಿಸಿದೆ. ಬಿಜೆಪಿ ಅವಧಿಯಲ್ಲಿ ಕಾಮಗಾರಿ ಮಾಡಿ ಇಂಟರ್ ಲಿಂಕಿಂಗ್ ಕೆನಾಲ್ ಮಾಡಿದ್ದನ್ನು ತಡೆದು ಮಹದಾಯಿ ನೀರು ಮಲಪ್ರಭಾ ನದಿಗೆ ಹರಿಯದಂತೆ ಅಡ್ಡಗೋಡೆ ಕಟ್ಟಿರುವುದೇ ಕಾಂಗ್ರೆಸ್ ಕೊಡುಗೆ' ಎಂದು ಆರೋಪಿಸಿದರು.

'ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮಹದಾಯಿಯಿಂದ ಕರ್ನಾಟಕಕ್ಕೆ ಒಂದು ಹನಿ ನೀರು ಕೊಡುವುದಿಲ್ಲ ಎಂದು ಹೇಳಿದ್ದರು. ಕಾಂಗ್ರೆಸ್‌ನವರಿಗೆ ಮಹದಾಯಿ ಬಗ್ಗೆ ಮಾತನಾಡಲು ಯಾವ ನೈತಿಕ ಹಕ್ಕಿದೆ' ಎಂದು ಪ್ರಶ್ನಿಸಿದರು.

'ನೀರಾವರಿ ವಿಚಾರದಲ್ಲಿ ರಾಜಕಾರಣ ಮಾಡುವ ಅವಶ್ಯಕತೆ ಇಲ್ಲ. ನಾವೆಲ್ಲಾ ಒಂದಾಗಿದ್ದೇವೆ. ನಾನು ಗೋವಾ ಮುಖ್ಯಮಂತ್ರಿ ಹೇಳಿಕೆಯನ್ನು ಖಂಡಿಸುತ್ತೇನೆ' ಎಂದರು.

'ರಾಜ್ಯದಲ್ಲಿ ಯೂರಿಯಾ ಗೊಬ್ಬರ ಕೊರತೆಯನ್ನು ರಾಜ್ಯ ಸರ್ಕಾರ ತಪ್ಪಿಸಬಹುದಿತ್ತು. ಬಫರ್ ಸ್ಟಾಕ್ ಇಟ್ಟುಕೊ-ಳ್ಳಬೇಕಿತ್ತು. ನಿರ್ವಹಣೆ ಸರಿಯಾಗಿ ಆಗಿಲ್ಲ. ಕೇಂದ್ರ ಸಚಿವರ ಜೊತೆ ಮಾತನಾಡಿ ಹೆಚ್ಚುವರಿ ಗೊಬ್ಬರ ಕೊಡಿಸಲಾಗುವುದು' ಎಂದರು.

'ಯತೀಂದ್ರ ಅವರು ತಮ್ಮ ತಂದೆಯ ಸಾಧನೆ ಹೇಳಲು ಒಡೆಯರ್ ಅವರಿಗೆ ಹೋಲಿಕೆ ಮಾಡಿದ್ದಾರೆ. ಸೂರ್ಯನಿಗೆ ಯಾವುದಾದರೂ ಸಣ್ಣ ಬೆಳಕನ್ನು ಹೋಲಿಕೆ ಮಾಡಲು ಸಾಧ್ಯವೇ' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಶೃಂಗಸಭೆಯಲ್ಲಿ ಸಮಾಜ ಒಡೆಯುವ ಕೆಲಸ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ದಾವಣಗೆರೆಯಲ್ಲಿ ಈಚೆಗೆ ನಡೆದಿದ್ದ ಪಂಚಪೀಠಾಧೀಶ್ವರರ ಶೃಂಗಸಭೆಯಲ್ಲಿ ಲಿಂಗಾಯತ ಸಮಾಜವನ್ನು ಒಡೆಯುವ ಮಾತುಗಳು ವ್ಯಕ್ತವಾಗಿವೆ' ಎಂದು ಸಾಣೇಹಳ್ಳಿಯ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ನಗರದ ಮುರುಘಾ ಮಠದಲ್ಲಿ ಭಾನುವಾರ ಆಯೋಜಿಸಿದ್ದ ಬಸವ ಸಂಸ್ಕೃತಿ ಅಭಿಯಾನ ಸಭೆಯಲ್ಲಿ ಮಾತನಾಡಿದ ಅವರು, 'ಶೃಂಗಸಭೆಯಲ್ಲಿ ಬಸವಣ್ಣನವರ ಭಾವಚಿತ್ರ ಹಾಕಿರಲಿಲ್ಲ. ಮಠಗಳನ್ನು ಒಡೆಯುವ ಕೆಲಸ ಮಾಡದೆ, ಕಟ್ಟುವ ಕಾರ್ಯ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಪಂಚಪೀಠಾಧೀಶರು ಇನ್ನು ಯಾವ ಕಾಲದಲ್ಲಿದ್ದಾರೋ ಗೊತ್ತಿಲ್ಲ. ಬಸವಣ್ಣ ಧರ್ಮಗುರು ಎಂದು ಜಗತ್ತೇ ಒಪ್ಪುವ ವಾತಾವರಣವಿದೆ. ಬಸವಣ್ಣ ವೀರಶೈವ ಧರ್ಮ ಅನುಕರಿಸುವ ಜೊತೆಗೆ ಧರ್ಮ ಪ್ರಚಾರ ಮಾಡಿದ್ದಾಗಿ ಪಂಚಪೀಠಾಧೀಶರು ಸುಳ್ಳು ಹೇಳುತ್ತಿದ್ದಾರೆ. ಬಸವಣ್ಣ ಲಿಂಗಾಯತರ ಧರ್ಮಗುರು ಎಂಬುದನ್ನು ಅವರು ಒಪ್ಪುತ್ತಿಲ್ಲ. ಬಸವಣ್ಣ ಭಕ್ತನಷ್ಟೇ ಎಂದು ಪ್ರತಿಪಾದಿಸುವ ಇಂತಹವರ ಜೊತೆ ಪ್ರೀತಿ ವಿಶ್ವಾಸ ಬೆಳೆಸಲು ಹೇಗೆ ಸಾಧ್ಯ? ಸಮಾಜ ಕಟ್ಟಲು ನಾವೆಲ್ಲ ಒಂದಾಗಬೇಕು. ಇದಕ್ಕಾಗಿ ಸಂಕುಚಿತ ಮನೋಭಾವ ಬಿಟ್ಟು ವಿಶಾಲ ಮನೋಭಾವ ಬೆಳೆಸಿಕೊಳ್ಳಬೇಕು' ಎಂದು ಮನವಿ ಮಾಡಿದರು.

ಭಾರಿ ಪ್ರಮಾಣದ ಮಾದಕ ವಸ್ತು ಪತ್ತೆ: ಇನ್‌ಸ್ಪೆಕ್ಟರ್ ಅಮಾನತು

ಮಹಾರಾಷ್ಟ್ರ ಪೊಲೀಸರಿಂದ ಕಾರ್ಯಾಚರಣೆ; ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಬನ್ನಿಮಂಟಪದ ವರ್ತುಲ ರಸ್ತೆಯ ಕಾರ್ ಗ್ಯಾರೇಜ್‌ನ ಪಕ್ಕದ ಜಾಗದ ಶೆಡ್‌ನಲ್ಲಿ 61 ಕೆ.ಜಿ ಮಾದಕ ವಸ್ತು (ಎಂಡಿಎಂಎ) ಪತ್ತೆಯಾದ ಪ್ರಕರಣದಲ್ಲಿ, ಕರ್ತವ್ಯ ಲೋಪದ ಮೇಲೆ ನರಸಿಂಹರಾಜ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ ಕೆ.ತಳವಾರ ಅವರನ್ನು ಅಮಾನತು ಮಾಡಲಾಗಿದೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ತಳವಾರ್ ಅವರ ಇಲಾಖೆ ವಿಚಾರಣೆ ಬಾಕಿ ಇರುವಂತೆ ಅಮಾನತುಗೊಳಿಸಿ ಭಾನುವಾರ ಆದೇಶ ಹೊರಡಿಸಿದ್ದಾರೆ. ತೆರವಾದ ಹುದ್ದೆಗೆ ನಗರ ಅಪರಾಧ ಪತ್ತೆ ವಿಭಾಗದ (ಸಿಸಿಬಿ) ಶಬ್ಬೀರ್ ಹುಸೇನ್ ಅವರನ್ನು ನಿಯೋಜಿಸಿದ್ದಾರೆ.

ದ್ರವರೂಪದಲ್ಲಿ ಪತ್ತೆ: ಆರೋಪಿಯೊಬ್ಬ ನೀಡಿದ ಮಾಹಿತಿ ಆಧರಿಸಿ ಎಂಡಿಎಂಎ ತಯಾರಿಕಾ ಘಟಕದ ಮೇಲೆ ಸ್ಥಳೀಯ ಪೊಲೀಸರ ನೆರವಿನಿಂದ ಮಹಾರಾಷ್ಟ್ರ ಪೊಲೀಸರು ದಾಳಿ ಮಾಡಿದ್ದರು. ಪುಡಿಯ ರೂಪದಲ್ಲಿದ್ದ 11 ಕೆ.ಜಿ ಎಂಡಿಎಂಎ ಮತ್ತು ದ್ರವರೂಪದಲ್ಲಿ ಸಂಸ್ಕರಣೆಯಾಗುತ್ತಿದ್ದ 50 ಕೆ.ಜಿಯಷ್ಟು ಎಂಡಿಎಂಎ ಮಾದಕ ವಸ್ತುವನ್ನು ವಶಕ್ಕೆ ಪಡೆದಿದ್ದರು. ಈ ಬಗ್ಗೆ ಮಾಹಿತಿಯೇ ಇರದೇ ಕರ್ತವ್ಯ ಲೋಪ ಎಸಗಿದ್ದ ಕಾರಣಕ್ಕೆ ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಲಾಗಿದೆ.



ಎಂಡಿಎಂಎ ಮಾದಕ ವಸ್ತು ತಯಾರಿಸಲಾಗುತ್ತಿದ್ದ ಬನ್ನಿಮಂಟಪದ ಶೆಡ್

4 ಮಂದಿ ಬಂಧನ: 'ಕಾರ್ಯಾಚರಣೆಯಲ್ಲಿ ಮಹಾರಾಷ್ಟ್ರ ಪೊಲೀಸರು, ಕಾರ್ ಮೆಕ್ಯಾನಿಕ್ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ಮುಂಬೈನ ಅಂಧೇರಿಯ ಫಿರೋಜ್ ಮೌಲಾ ಶೇಕ್ (28), ಗುಜರಾತ್‌ನ ಸೂರತ್ ನಿವಾಸಿ ಶೇಕ್ ಆದಿಲ್ ಬಿನ್ ಜುಬೇರ್ (23), ಗುಜರಾತ್‌ನ ಬೈರೋಚ್‌ನ ಸೈಯದ್ ಮೆಹಫೂಜ್ ಅಲಿ (21) ಹಾಗೂ ಮೈಸೂರಿನ ಅಜ್ಮಲ್ ಷರೀಫ್ (45) ಆರೋಪಿಗಳು. ಇವರಲ್ಲಿ ಸೈಯದ್ ಮೆಹಫೂಜ್ ಅಲಿ ಕೆಮಿಕಲ್ ಡಿಪ್ಲೊಮಾ ಓದಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕುಂಬಾರಕೊಪ್ಪಲಿನ ಕೇಬಲ್ ಮಹೇಶ್ ಎಂಬುವರಿಗೆ ಸೇರಿದ ಜಾಗ ಇದಾಗಿದ್ದು, ತಿಂಗಳಿಗೆ ₹ 20 ಸಾವಿರಕ್ಕೆ ಸ್ಥಳೀಯ ಅಜ್ಮಲ್ ಎಂಬುವರಿಗೆ ಬಾಡಿಗೆಗೆ ನೀಡಿದ್ದರು. ಈ ಜಾಗದಲ್ಲಿ ಅಜ್ಮಲ್ ಕಾರಿನ ಶೆಡ್ ನಿರ್ಮಿಸಿ ಅರ್ಧ ಭಾಗದಲ್ಲಿ ಕಾರು ರಿಪೇರಿ ಮಾಡುತ್ತಿದ್ದು, ಉಳಿದ ಅರ್ಧ ಭಾಗವನ್ನು ತಿಂಗಳಿಗೆ ₹ 2 ಲಕ್ಷಕ್ಕೆ ಮುಂಬೈನ ರಿಯಾನ್ ಎಂಬುವವರಿಗೆ ಬಾಡಿಗೆ ನೀಡಿದ್ದರು. ಕೋಟ್ಯಂತರ ರೂಪಾಯಿ ಮೌಲ್ಯದ ಮಾದಕ ವಸ್ತುವನ್ನು ಇಲ್ಲಿಂದಲೇ ನೆರೆ ರಾಜ್ಯಗಳಿಗೆ ಪೂರೈಸಲಾಗುತ್ತಿತ್ತು' ಎಂದು ತಿಳಿದುಬಂದಿದೆ.

'ಮಾದಕ ವಸ್ತು ಪತ್ತೆಯಾಗಿರುವ ಕಾರಣದಿಂದ ವಿಶೇಷ ಕಾರ್ಯಾಚರಣೆ ನಡೆಸಲು ಎಲ್ಲ ಪೊಲೀಸ್ ಠಾಣೆಗಳಿಗೆ ಸೂಚಿಸಲಾಗಿದೆ' ಎಂದು ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.80	52,856	56,447
ಹಾರಂಗಿ	2,859	2,854.95	17,878	21,183
ಕಬಿನಿ	2,284.00	2,282.81	30,277	40,000
ಹೇಮಾವತಿ	2,922	2,921	38,715	38,990
ಲಿಂಗನಮಕ್ಕಿ	1,819	1,809.75	47,155	1,970
ಸೂಪಾ (ಮೀ)	564	549.95	33,396.8	151.72
ಮಾಣಿ	595	589.78	10,142	0
ತುಂಗಭದ್ರಾ	1,633	1624.81	1,00,000	1,10,000
ಮಲಪ್ರಭಾ	2,079.5	2,073.80	6,149	1,294
ಘಟಪ್ರಭಾ	2,175	2,170.75	17,064	12,900
ಭದ್ರಾ *	186	180.6	39,017	39,017
ಆಲಮಟ್ಟಿ (ಮೀ)	519.6	517.99	60,160	1,20,000
ನಾರಾಯಣಪುರ (ಮೀ)	492.25	491.36	1,20,000	1,23,400

* ನೆಲಮಟ್ಟದಿಂದ

ಕೆರೆಗಳ 'ಸಂರಕ್ಷಿತ ಪ್ರದೇಶ'ಕ್ಕೆ ಕಂಟಕ....

41,875	ರಾಜ್ಯದಲ್ಲಿರುವ ಒಟ್ಟು ಕೆರೆಗಳು
32,068	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3,778	ಸಣ್ಣ ನೀರಾವರಿ ಇಲಾಖೆ
2,048	ಬೃಹತ್ ನೀರಾವರಿ ಇಲಾಖೆ
1,079	ನಗರ ಸ್ಥಳೀಯ ಸಂಸ್ಥೆಗಳು
202	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
4	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
2,696	ಅರಣ್ಯ, ಕಂದಾಯ, ಇತರೆ ಇಲಾಖೆ

ಒಂದನೇ ಪುಟದಿಂದ...

'ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಐದು ಗುಂಟೆ ಅಥವಾ ಒಂದು ಎಕರೆಗೂ ಕಡಿಮೆ ವಿಸ್ತೀರ್ಣದಲ್ಲಿ ಕೆರೆ–ಕುಂಟೆಗಳಿವೆ. ಅವುಗಳಿಗೂ 30 ಮೀಟರ್ 'ಬಫರ್ ಝೋನ್' ಬಿಟ್ಟರೆ ಅಭಿವೃದ್ಧಿಗೆ ತೊಡಕಾಗುತ್ತದೆ ಎಂದು ಸಮಿತಿ ನಿರ್ಧರಿಸಿತು. ಕೆರೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ 'ಬಫರ್ ಝೋನ್' ನಿಗದಿಪಡಿಸಿ, ವರದಿಯನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿತು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.


ಸಮಿತಿಯ ವರದಿ ಸಚಿವ ಸಂಪುಟದಲಿ ಚರ್ಚಿಸಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ (ಕೆಟಿಸಿಡಿಎ) –2014ಕ್ಕೆ ತಿದ್ದುಪಡಿ ತರಲು ಸಚಿವ ಸಂಪುಟ ನಿರ್ಧರಿಸಿದೆ. ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಇದನ್ನು ಮಂಡಿಸಲಾಗುತದೆ.

'ಬಫರ್ ಝೋನ್'ನಲ್ಲಿ ಒಳಚರಂಡಿ ಮಾರ್ಗ, ಎಸ್‌ಟಿಪಿ'

'ಕೆರೆಗಳಿಗೆ ಒಳಚರಂಡಿ ನೀರು ಹರಿಯದಂತೆ ಮಾಡಬೇಕಾದರೆ ಅದಕ್ಕೆ ಪ್ರತ್ಯೇಕವಾಗಿ ಹೊರಭಾಗದಲ್ಲೇ ಪೈಪ್‌ಲೈನ್ ಅಳವಡಿಸಬೇಕು. ಆದರೆ, 'ಬಫರ್ ಝೋನ್'ನಲ್ಲಿ ಯಾವುದೇ ಕಾಮಗಾರಿ ನಡೆಸಲು ಕೆಟಿಸಿಡಿಎ ಕಾಯ್ದೆಯಲ್ಲಿ ನಿರ್ಬಂಧವಿದೆ. ಹೀಗಾಗಿ, ಬಫರ್ ಝೋನ್‌ನಲ್ಲಿ ನಾಗರಿಕರಿಗೆ ಅನುಕೂಲವಾಗುವ ಮೂಲ-ಸೌಕರ್ಯಗಳನ್ನು ಕೆರೆಯ ಯಾವುದೇ ಪ್ರದೇಶ, ಒಳಹರಿವು ಹಾಗೂ ಹೊರಹರಿವಿಗೆ ಧಕ್ಕೆಯಾಗದಂತೆ ನಿರ್ವಹಿಸಲು ಕಾಯ್ದೆಯಲ್ಲಿ ಅವಕಾಶ ಮಾಡಲು ತಿದ್ದುಪಡಿ ತರಲಾಗುತ್ತಿದೆ. ಇದರಿಂದ, ಒಳಚರಂಡಿ ಮಾರ್ಗ, ಮ್ಯಾನ್‌ಹೋಲ್‌ಗಳನ್ನು ಬಫರ್ ಝೋನ್‌ಗಳಲ್ಲಿ ನಿರ್ಮಿಸಬಹುದಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಕೆರೆಗಳಿಗೆ ಸಂಸ್ಕರಿಸಿದ ನೀರನ್ನೇ ಹರಿಸಬೇಕೆಂದು ಹೈಕೋರ್ಟ್ ಆದೇಶ ನೀಡಿದ್ದು, ಇದನ್ನು ಪಾಲಿಸಲು ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳನ್ನು (ಎಸ್‌ಟಿಪಿ) ಸ್ಥಾಪಿಸುವುದು ಅನಿವಾರ್ಯ. ಆದರೆ, ಎಸ್‌ಟಿಪಿಗಾಗಿ ಕೆರೆ ಅಂಗಳವನ್ನು ಬಳಸಿಕೊಳ್ಳುವಂತಿಲ್ಲ. ಖಾಸಗಿ ಜಮೀನು ಪಡೆದುಕೊಳ್ಳು-ವುದು ಕಷ್ಟ. ಹೀಗಾಗಿ, 'ಬಫರ್ ಝೋನ್'ನಲ್ಲಿ ಎಸ್‌ಟಿಪಿ-ಗಳನ್ನು ಅಳವಡಿಸಲೂ ಕಾಯ್ದೆಯಲ್ಲಿ ಅವಕಾಶ ಸಿಗಲಿದೆ' ಎಂದರು.

ಕ್ರಿಮಿನಲ್‌ಗಳು ಮಾಡುವ ಅಪರಾಧ: ಯಲ್ಲಪ್ಪರೆಡ್ಡಿ




ಯಲ್ಲಪ್ಪ ರೆಡ್ಡಿ

'ರಿಯಲ್ ಎಸ್ಟೇಟ್ ಹೇಳುವಂತೆಯೇ ಎಲ್ಲವನ್ನೂ ಮಾಡುವ ಸರ್ಕಾರ, ಎಲ್ಲ ಕೆರೆಗಳನ್ನು ಮುಚ್ಚಿಬಿಡಲಿ. ಪರಿಸರ, ನಾಗರಿಕರ ಹಿತಾಸಕ್ತಿಯನ್ನು ಮರೆತುಬಿಡಲಿ. ಯಾರು ಈ ಸರ್ಕಾರಕ್ಕೆ ಸಲಹೆ ನೀಡುತ್ತಾರೋ ಗೊತ್ತಿಲ್ಲ? ಇದು ಕ್ರಿಮಿನಲ್‌ಗಳು ಮಾಡುವಂತಹ ದೊಡ್ಡ ಅಪರಾಧ. ನಾಡಪ್ರಭು ಕೆಂಪೇಗೌಡರ ಪ್ರತಿಮೆ ನಿಲ್ಲಿಸಿದರೆ ಸಾಲದು, ಅವರು ಕಟ್ಟಿದ ಕೆರೆಗಳನ್ನು ಮುಚ್ಚಲು ಹೊರಟರೆ ನಿಮ್ಮ ನಿಲುವಿನಲ್ಲಿರುವ ಅರ್ಥವೇನು? ಬಫರ್ ಝೋನ್‌ನಲ್ಲಿ ಎಸ್‌ಟಿಪಿ ಮಾಡಿದರೆ ಅಲ್ಲಿನ ಗತಿಯೇನು? ಅಂತರ್ಜಲ ಮಲಿನ ಹೆಚ್ಚಾಗುತ್ತದೆ. ಹೈಕೋರ್ಟ್ ಈ ಪ್ರಕರಣವನ್ನು ಸ್ವಯಂಪ್ರೇರಿ-ತವಾಗಿ ತೆಗೆದುಕೊಂಡು, 'ಬಫರ್ ಝೋನ್' ಅನ್ನು ಉಳಿಸಬೇಕು' ಎಂದು ಪರಿಸರ ತಜ್ಞ ಅ.ನ. ಯಲ್ಲಪ್ಪರೆಡ್ಡಿ ಅಭಿಪ್ರಾಯಪಟ್ಟರು.

ಅಕ್ಕನಿಂದ ತಮ್ಮನ ಕೊಲೆ; ಬಂಧನ

ಹೊಳಲ್ಕೆರೆ (ಚಿತ್ರದುರ್ಗ): ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದ ತಮ್ಮನನ್ನು ಆಸ್ತಿ ಕಾರಣಕ್ಕೆ ಅಕ್ಕನೇ ಕೊಲೆ ಮಾಡಿರುವ ಆರೋಪ ಕೇಳಿಬಂದಿದೆ.

ತಾಲ್ಲೂಕಿನ ದುಮ್ಮಿ ಗ್ರಾಮದ ಜಿ.ಎನ್‌.ಮಲ್ಲಿಕಾರ್ಜುನ (23) ಮೃತ ಯುವಕ. ಈ ಸಂಬಂಧ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ನಿಶಾಳನ್ನು ಪೊಲೀಸರು ಬಂಧಿಸಿದ್ದಾರೆ. ಈಕೆಯ ಪತಿ ಮಂಜುನಾಥ್‌ ತಲೆಮರೆಸಿಕೊಂಡಿದ್ದಾನೆ.



ನಿಶಾ

ಈಚೆಗೆ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಮಲ್ಲಿಕಾರ್ಜುನ್ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಈ ವೇಳೆ ರಕ್ತ ಪರೀಕ್ಷೆ ನಡೆಸಿದ್ದಾಗ ತೀವ್ರ ಸ್ವರೂಪದ ಕಾಯಿಲೆ ಇರುವುದು ಗೊತ್ತಾಗಿತ್ತು. ಕಾರಿನಲ್ಲಿ ಮಗನನ್ನು ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯುವು-ದಾಗಿ ತಿಳಿಸಿದ್ದ ಮಗಳು ಹಾಗೂ ಅಳಿಯ ಮಂಜುನಾಥ್, ಮಾರ್ಗಮಧ್ಯೆಯೇ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ. ಜುಲೈ 26ರಂದು ಊರಿಗೆ ಮೃತದೇಹ ತಂದು ಅನಾರೋಗ್ಯದಿಂದ ಮೃತಪಟ್ಟಿರುವುದಾಗಿ ಹೇಳಿದ್ದಾರೆ' ಎಂದು ಯುವಕನ ತಂದೆ ಜಿ.ಬಿ.ನಾಗರಾಜ ದೂರಿನಲಿ ತಿಳಿಸಿದಾರೆ.

ಕುಂಟುತ್ತಿದೆ 'ಸೂರು' ಕಾರ್ಯ

ಪಿಎಂಎವೈ–ಜಿ: 2024–25ನೇ ಸಾಲಿನಲ್ಲಿ ಶೇ 37.33ರಷ್ಟು ಮಾತ್ರವೇ ಪ್ರಗತಿ!

• ಎಂ.ಮಹೇಶ್

ಮುಖ್ಯಾಂಶಗಳು

- ಸಹಾಯಧನ ಬಹಳ ಕಡಿಮೆ ಇರುವುದರಿಂದ ಹಿನ್ನಡೆ
- ಕಂತುಗಳು ಸರಿಯಾಗಿ ಪಾವತಿ ಆಗದಿರುವುದೂ ಕಾರಣ

ಮೈಸೂರು: ಗ್ರಾಮೀಣ ವಸತಿ ರಹಿತರಿಗೆ 'ಸೂರು' ಕಲ್ಪಿಸುವ ಉದ್ದೇಶವುಳ್ಳ, ಪ್ರಧಾನ ಮಂತ್ರಿ ಆವಾಸ್ ಯೋಜನೆ-ಗ್ರಾಮೀಣ್ (ಪಿಎಂಎವೈ-ಜಿ) ರಾಜ್ಯದಲ್ಲಿ ಕುಂಟುತ್ತಿದೆ.

2024-25ನೇ ಸಾಲಿನಲ್ಲಿ 7.02 ಲಕ್ಷ ಗುರಿಯಲ್ಲಿ ಮಂಜೂರಾಗಿರುವುದು 2.62 ಲಕ್ಷ ಮನೆ ಮಾತ್ರ. 4.40 ಲಕ್ಷ ಫಲಾನುಭವಿಗಳಿಗೆ ಮಂಜೂರಾತಿ ನೀಡಬೇಕಾಗಿದೆ.

ಯೋಜನೆಯಡಿ ಈವರೆಗೆ ಶೇ 37.33ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ. ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯು ಶೇ 64.39ರಷ್ಟು ಪ್ರಗತಿ ಸಾಧಿಸಿ ಅನುಷ್ಠಾನದಲ್ಲಿ ಮೊದಲನೇ ಸ್ಥಾನದಲ್ಲಿದೆ. 20,908 ಮನೆಗಳ ಗುರಿಯ ಪೈಕಿ 13,462 ಮಂಜೂರಾಗಿದ್ದು, 7,466 ಮನೆಗಳ ಮಂಜೂರಾತಿ ಬಾಕಿ ಇದೆ. ನಂತರದ ಸ್ಥಾನದಲ್ಲಿ ವಿಜಯನಗರ ಜಿಲ್ಲೆ ಇದ್ದು, ಶೇ 63.85 ಸಾಧನೆಯಾಗಿದೆ. ಉಳಿದ ಜಿಲ್ಲೆಗಳು ಶೇ 60ರಷ್ಟು ಗುರಿ ಸಾಧನೆಯನ್ನೂ ಮಾಡಿಲ್ಲ.

ಯೋಜನೆಯಡಿ ಸಾಮಾನ್ಯ ವರ್ಗದವರಿಗೆ ₹1.20 ಲಕ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ₹1.75 ಲಕ್ಷ ಸಹಾಯಧನ ನೀಡಲಾಗುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 90 ಮಾನವ ದಿನಗಳನ್ನು ಬಳಸಿಕೊಳ್ಳಲು (ಕೆಲಸ ಮಾಡಿಸಿಕೊಳ್ಳಲು) ಎಲ್ಲ ವರ್ಗದವರಿಗೂ ಅವಕಾಶವಿದೆ. ಇದರಲ್ಲಿ ₹31,410 ಸಿಗುತ್ತದೆ. ಶೌಚಾಲಯ ನಿರ್ಮಾಣ ಸಹಾಯಧನಕ್ಕೆ ಅರ್ಹತೆ ಇದ್ದರೆ ಸಾಮಾನ್ಯ ವರ್ಗದವರಿಗೆ ₹12 ಸಾವಿರ ಹಾಗೂ ಪರಿಶಿಷ್ಟರಿಗೆ ₹20 ಸಾವಿರ ದೊರೆಯುತ್ತದೆ.

> ಪಿಎಂಎವೈ–ಜಿ ಅನುಷ್ಠಾನದಲ್ಲಿ ಮೈಸೂರು ಮೊದಲ ಸ್ಥಾನದಲ್ಲಿದೆ. ಫಲಾನುಭವಿಗಳು ಸಕಾಲದಲ್ಲಿ ಮನೆ ನಿರ್ಮಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ
> **ಎಸ್.ಯುಕೇಶ್‌ಕುಮಾರ್,** ಸಿಇಒ, ಜಿಲ್ಲಾ ಪಂಚಾಯಿತಿ, ಮೈಸೂರು

ವಸತಿರಹಿತ ಕುಟುಂಬಗಳು, ಭಿಕ್ಷುಕರು, ಸ್ವಚ್ಛತಾ ಸಿಬ್ಬಂದಿ, ಬುಡಕಟ್ಟು ಗುಂಪುಗಳು, ಜೀತ ವಿಮುಕ್ತಗೊಂಡ ಕುಟುಂಬಗಳು 'ಪಿಎಂಎವೈ-ಜಿ' ಫಲಾನುಭವಿಗಳಾಗಬಹುದು. ಶಿಥಿಲಗೊಂಡ ಚಿಕ್ಕ ಮನೆಯಲ್ಲಿರುವ ಕುಟುಂಬಗಳಿಗೆ ಮೂಲಸೌಕರ್ಯಗಳೊಂದಿಗೆ 'ಪಕ್ಕಾ ಮನೆ' ಕಟ್ಟಿಸಿಕೊಡಬಹುದು.

ಸ್ಥಳೀಯ ಸಂಸ್ಥೆಗಳ ಮೂಲಕ ಈ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಬಹುದು. ಆದರೆ, ಅನುದಾನ ಅಲಭ್ಯತೆ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಯೋಜನೆಯು ಚುರುಕಾಗಿ ನಡೆಯುತ್ತಿಲ್ಲ. ಇದರಿಂದಾಗಿ ವಸತಿರಹಿತರಾದ ನೈಜ ಫಲಾನುಭವಿಗಳು ಮನೆಗಾಗಿ ಕಾಯುತ್ತಲೇ ಇದ್ದಾರೆ.

ದರ ಹೆಚ್ಚು: 'ಇಟ್ಟಿಗೆ, ಕಬ್ಬಿಣ, ಮರಳು, ಸಿಮೆಂಟ್ ಸೇರಿದಂತೆ ನಿರ್ಮಾಣ ಸಾಮಗ್ರಿಗಳ ದರ ಜಾಸ್ತಿಯಾಗಿದ್ದು, ಯೋಜನೆಯ ಸಹಾಯಧನ ಬಹಳ ಕಡಿಮೆ ಎಂದು ಫಲಾನುಭವಿಗಳು ಉತ್ಸಾಹ ತೋರದಿರುವುದರಿಂದ ಯೋಜನೆ ಸಫಲವಾಗುತ್ತಿಲ್ಲ' ಎಂಬ ಮಾತುಗಳೂ ಅಧಿಕಾರಿಗಳ ವಲಯದಲ್ಲಿದೆ. ಕಾರ್ಯಾದೇಶ ದೊರೆತವರಿಗೆ ಸಕಾಲಕ್ಕೆ ಕಂತು ಪಾವತಿಯಾಗದಿರುವುದೂ ವಿಳಂಬಕ್ಕೆ ಕಾರಣ' ಎನ್ನಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ಉಡುಪಿ (ಶೇ 0.10) ಹಾಗೂ ಬೆಂಗಳೂರು (ಶೇ 0.06) ಕಳಪೆ ಸಾಧನೆ ಮಾಡಿರುವ ಜಿಲ್ಲೆಗಳು. ಅತಿ ಹೆಚ್ಚು ಮನೆಗಳ ನಿರ್ಮಾಣದ ಗುರಿ ನೀಡಿರುವುದು, ಬಹಳಷ್ಟು ದೊಡ್ಡ ವಿಸ್ತೀರ್ಣವನ್ನು ಹೊಂದಿರುವ ಬೆಳಗಾವಿಗೆ. ಅಲ್ಲಿಗೆ 74,139 ಗುರಿ ಕೊಡಲಾಗಿದ್ದು, ಅದರಲ್ಲಿ 30,947 ಮಾತ್ರವೇ ಮಂಜಾರಾಗಿ ನೀಡಲಾಗಿದೆ. 43,192 ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ಕೊಡುವುದು ಬಾಕಿ ಇದೆ.

'ಕಳಪೆ ಸಾಧನೆ'ಯ ಜಿಲ್ಲೆಗಳು

	ಗುರಿ	ಮಂಜೂರು	ಬಾಕಿ	ಪ್ರಗತಿ (ಶೇ)
ಚಾಮರಾಜನಗರ	39,317	10,681	28,636	27.17
ಹಾಸನ	33,671	8,630	25,041	25.63
ತುಮಕೂರು	29,875	7,544	22,331	25.25
ಹಾವೇರಿ	26,703	5,718	20,985	21.41
ರಾಮನಗರ	663	140	523	21.12
ಬಳ್ಳಾರಿ	25,563	5,017	20,546	19.63
ಚಿತ್ರದುರ್ಗ	38,496	5,681	32,815	14.76
ಕೊಡಗು	9,141	249	8,892	2.72
ಉಡುಪಿ	1,046	1	1,045	0.10
ಬೆಂಗಳೂರು	1,700	1	1,699	0.06

ದೇಶ ಭಕ್ತಿ

ಪ್ರಜಾವಾಣಿ ಚಿತ್ರ: **ಸತೀಶ್ ಬಡಿಗೇರ**



ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ದಾವಣಗೆರೆಯ ಪ್ರೇರಣಾ ಯುವ ಸಂಸ್ಥೆ ಭಾನುವಾರ ಆಯೋಜಿಸಿದ್ದ 7ನೇ ವರ್ಷದ ಬುಲೆಟ್ ಬೈಕ್ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದವರು ರಾಷ್ಟ್ರಧ್ವಜ ಹಿಡಿದು ಸಾಗುವ ಮೂಲಕ ದೇಶಭಕ್ತಿ ಮೆರೆದರು

ಬಿಜೆಪಿ ರೈತ ಮೋರ್ಚಾ ಸಭೆ ಇಂದು

ಕೊಪ್ಪಳ: ಸಕಾಲದಲ್ಲಿ ಯೂರಿಯಾ ರಸಗೊಬ್ಬರ ಸಿಗದ ಕಾರಣಕ್ಕೆ ನಗರದಲ್ಲಿ ಶನಿವಾರ ರೈತ ಮಣ್ಣು ತಿಂದಿದ್ದಕ್ಕೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದ್ದು, ಪ್ರತಿ ವಿಧಾನಸಭಾ ಕ್ಷೇತ್ರವಾರು ಹೋರಾಟ ನಡೆಸುವ ಯೋಜನೆ ರೂಪಿಸಲು ಸೋಮವಾರ ನಗರದ ಪಕ್ಷದ ಕಚೇರಿಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಂಡಿದೆ.

'ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ಮುಂದಾಳತ್ವದಲ್ಲಿ ಸಭೆ ನಡೆಸಿ ಹೋರಾಟದ ಯೋಜನೆ ರೂಪಿಸಲಾಗುತ್ತದೆ. ಅನ್ನ ಕೊಡುವ ರೈತನ ಕೈಗೆ ಸರ್ಕಾರ ಈಗ ಮಣ್ಣು ನೀಡಿದೆ' ಎಂದು ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೇಸೂಗೂರು ಹೇಳಿದರು.

ನಿಗಮ–ಮಂಡಳಿ ನೇಮಕ: ಸಿ.ಎಂ.ಗೆ ಕೇಳಿ– ಖರ್ಗೆ

ಬೆಂಗಳೂರು: 'ರಾಜ್ಯದಲ್ಲಿನ ನಿಗಮ-ಮಂಡಳಿಗಳಿಗೆ ನೇಮಕಾತಿ ಕುರಿತಂತೆ ನನ್ನನ್ನು ಕೇಳಬೇಡಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೇಳಿ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ರಾಜ್ಯದಲ್ಲಿ ಖಾಲಿ ಇರುವ ನಿಗಮ-ಮಂಡಳಿಗಳ ನೇಮಕದ ಬಗ್ಗೆ ಸುದ್ದಿಗಾರರು ಭಾನುವಾರ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, 'ರಾಜ್ಯದ ವಿಚಾರ ನನ್ನನ್ನು ಕೇಳಬೇಡಿ' ಎಂದಷ್ಟೇ ಹೇಳಿದರು.

ಸಂಸತ್ತಿನಲ್ಲಿ ಚರ್ಚೆ: ಲೋಕಸಭಾ ಚುನಾವಣಾ ಅಕ್ರಮಗಳ ಕುರಿತ ರಾಹುಲ್ ಗಾಂಧಿ ಪ್ರಸ್ತಾಪಿಸಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಖರ್ಗೆ, 'ದೇಶದಾದ್ಯಂತ ನಡೆಯುತ್ತಿರುವ ಚುನಾವಣಾ ಅಕ್ರಮಗಳ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಸಲಾಗುವುದು' ಎಂದರು.

'ಚುನಾವಣಾ ಅಕ್ರಮಗಳ ಬಗ್ಗೆ ಈಗಾಗಲೇ ಚರ್ಚೆಗಳಾಗುತ್ತಿವೆ. ಅದರ ಕುರಿತು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಚರ್ಚೆ ನಡೆಸುತ್ತೇವೆ' ಎಂದರು.

'ತಪ್ಪಿದ ಅವಕಾಶಕ್ಕೆ ಬೇಸರವಿಲ್ಲ'

ಪ್ರಜಾವಾಣಿ ವಾರ್ತೆ



ವಿಜಯಪುರ ನಗರದ ಬಿಎಲ್‌ಡಿಇ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಫ.ಗು.ಹಳಕಟ್ಟಿ, ಬಂಥನಾಳ ಸಂಗನಬಸವ ಶಿವಯೋಗಿಗಳು, ಬಿ.ಎಂ.ಪಾಟೀಲ ಮತ್ತು ಬಂಗಾರಮ್ಮ ಸಜ್ಜನ ಸ್ಮರಣೆ ಕಾರ್ಯಕ್ರಮದಲ್ಲಿ ಭಾನುವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು. ಸಚಿವ ಎಂ.ಬಿ.ಪಾಟೀಲ, ಬೇಲಿಮಠದ ಶಿವರುದ್ರ ಸ್ವಾಮೀಜಿ ಇದ್ದರು ಪ್ರಜಾವಾಣಿ ಚಿತ್ರ

ವಿಜಯಪುರ: 'ರಾಜ್ಯದಲ್ಲಿ 1999ರಲ್ಲಿ ವಿರೋಧ ಪಕ್ಷದ ನಾಯಕನಾಗಿ ಹೋರಾಟ ಮಾಡಿದೆ, ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದೆ. ಆದರೆ, ಚುನಾವಣೆಗೆ ನಾಲ್ಕು ತಿಂಗಳ ಹಿಂದೆ ಕೆಪಿಸಿಸಿ ಅಧ್ಯಕ್ಷರಾದ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾದರು. ರಾಜಕೀಯವಾಗಿ ಅವಕಾಶ ತಪ್ಪಿರುವ ಬಗ್ಗೆ ಬೇಸರವಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಫ.ಗು. ಹಳಕಟ್ಟಿ, ಬಂಥನಾಳ ಸಂಗನಬಸವ ಶಿವಯೋಗಿಗಳು, ಬಿ.ಎಂ.ಪಾಟೀಲ ಮತ್ತು ಬಂಗಾರಮ್ಮ ಸಜ್ಜನ ಸ್ಮರಣೆ ಕಾರ್ಯಕ್ರಮದಲ್ಲಿ ಭಾನುವಾರ ಅವರು ಮಾತನಾಡಿದರು.

'ನಾನು ಎಂದೂ ಅಧಿಕಾರದ ಹಿಂದೆ ಹೋಗಿಲ್ಲ, ನನ್ನ ಪ್ರಯತ್ನಗಳ ಫಲವಾಗಿ ಅಧಿಕಾರ ಪಡೆದುಕೊಂಡಿದ್ದೇನೆ. ಕಾಂಗ್ರೆಸ್ ಅಧ್ಯಕ್ಷ ಹುದ್ದೆಯಿಂದ ಎಐಸಿಸಿ ಹುದ್ದೆವರೆಗೂ ಬಂದಿರುವೆ, ಮನಸ್ಸಿನಲ್ಲಿ ದುರಾಸೆ ಇಟ್ಟುಕೊಂಡು ಮಾಡುವ ಕೆಲಸಗಳಿಂದ ಏನೂ ಮಾಡಲು ಸಾಧ್ಯವಿಲ್ಲ' ಎಂದರು.

'ಆರು ವರ್ಷದ ಬಾಲಕನಾಗಿದ್ದಾಗ ರಜಾಕಾರರ ಹಾವಳಿಯಲ್ಲಿ ನನ್ನ ತಾಯಿ, ಸಹೋದರಿಯನ್ನು ಕಳೆದುಕೊಂಡೆ, ತಂದೆಯ ಆಸರೆಯಲ್ಲಿ ಬೆಳೆದೆ' ಎಂದು ಅವರು ತಮ್ಮ ಜೀವನದ ಘಟನೆಗಳನ್ನು ನೆನಪಿಸಿಕೊಂಡು ಭಾವುಕರಾದರು.

ರಾಜೀನಾಮೆಗೆ ಕಾರಣ ಧನಕರ್ ಹೇಳಬೇಕು: 'ಉಪ ರಾಷ್ಟ್ರಪತಿ ಹುದ್ದೆಗೆ ದಿಢೀರ್ ರಾಜೀನಾಮೆ ನೀಡಲು ಕಾರಣವೇನು ಎಂಬುದನ್ನು ಧನಕರ್ ಅವರೇ ಹೇಳಬೇಕು' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಉಪ ರಾಷ್ಟ್ರಪತಿ ಹುದ್ದೆಗೆ ಏಕೆ ರಾಜೀನಾಮೆ ನೀಡಿದ್ದಾರೆ ಎಂಬುದು ಮೋದಿ ಮತ್ತು ಧನಕರ್ ಅವರಿಗೇ ಗೊತ್ತು. ಅವರ ನಡುವೆ ಏನಾಗಿದೆ ಎಂಬುದು ಗೊತ್ತಿಲ್ಲ' ಎಂದರು.

'ಧನಕರ್ ಅವರು ಯಾವಾಗಲೂ ಕೇಂದ್ರ ಸರ್ಕಾರದ ಪರವಾಗಿಯೇ ಇದ್ದರು. ನಮಗೆ ರೈತರ ಸಮಸ್ಯೆಗಳ ಬಗ್ಗೆ, ಬಡವರ ಸಂಕಷ್ಟಗಳ ಬಗ್ಗೆ, ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ ಮಾತನಾಡಲು ಅವಕಾಶವನ್ನೇ ನೀಡುತ್ತಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ದಕ್ಷಿಣ ಕನ್ನಡ: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಮ್ಮೇಳನ

ಪ್ರಕರಣಗಳ ಮರು ತನಿಖೆಗೆ ನಿರ್ಣಯ

ಪ್ರಜಾವಾಣಿ ವಾರ್ತೆ



ಈಶ್ವರಿ ಪದ್ಮುಂಜ



ಮಂಗಳೂರಿನಲ್ಲಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಮಾವೇಶದಲ್ಲಿ ಭಾಗವಹಿಸಿದ ಕಾರ್ಯಕರ್ತರು ಪ್ರಜಾವಾಣಿ ಚಿತ್ರ

ಮಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಗ್ರಾಮದಲ್ಲಿ ನಡೆದ ಪದ್ಮಲತಾ, ವೇದವಲ್ಲಿ, ಸೌಜನ್ಯಾ ಮತ್ತು ಯಮುನಾ ಸೇರಿದಂತೆ ಹೆಣ್ಣುಮಕ್ಕಳ ಅಸಹಜ ಸಾವಿನ ಪ್ರಕರಣಗಳನ್ನು ಮರುತನಿಖೆಗೆ ಒಳಪಡಿಸಬೇಕು ಮತ್ತು ಹೆಣಗಳನ್ನು ಹೂತು ಹಾಕಲಾಗಿದೆ ಎನ್ನಲಾಗುವ ಪ್ರಕರಣದ ನ್ಯಾಯಯುತ ತನಿಖೆ ನಡೆಯಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿತು.

ನಗರದಲ್ಲಿ ಭಾನುವಾರ ನಡೆದ ಸಂಘಟನೆಯ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನದಲ್ಲಿ ಜಿಲ್ಲಾ ಘಟಕದ ಉಪಾಧ್ಯಕ್ಷೆ ಈಶ್ವರಿ ಪದ್ಮುಂಜ ನಿರ್ಣಯ ಮಂಡಿಸಿದರು. ಅಧ್ಯಕ್ಷೆ ಜಯಂತಿ ಬಿ. ಶೆಟ್ಟಿ ಅನುಮೋದಿಸಿದರು. ಸಭಿಕರು ಚಪ್ಪಾಳೆ ತಟ್ಟಿ ಬೆಂಬಲಿಸಿದರು.

'ಸಾರ್ವಜನಿಕರ ಒತ್ತಡದ ನಂತರ ಧರ್ಮಸ್ಥಳ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ ರಚನೆ ಆಗಿದೆ. ಇದರಿಂದ ಜನರಲ್ಲಿ ಆಶಾಭಾವ ಮೂಡಿದೆ. ಆದರೆ, ಆಡಳಿತ ಮತ್ತು ವಿರೋಧ ಪಕ್ಷಗಳು ಪ್ರಕರಣದ ಕುರಿತು ವ್ಯಕ್ತಪಡಿಸುತ್ತಿರುವ ನಿಲುವುಗಳನ್ನು ಗಮನಿಸಿದರೆ ನಿಷ್ಪಕ್ಷಪಾತ ತನಿಖೆ ನಡೆಯುವ ಬಗ್ಗೆ ಸಂದೇಹ ಮೂಡುತ್ತಿದೆ' ಎಂಬ ಅಭಿಪ್ರಾಯ ನಿರ್ಣಯದಲ್ಲಿ ವ್ಯಕ್ತವಾಯಿತು.

'ವಿಶೇಷ ತಂಡಕ್ಕೆ ಮುಕ್ತ ಅವಕಾಶ ನೀಡಿ, ನ್ಯಾಯಯುತ ತನಿಖೆ ನಡೆಯುವುದನ್ನು ಸರ್ಕಾರ ಖಾತರಿಪಡಿಸಬೇಕು. ಸಾಕ್ಷಿದಾರ ಮತ್ತು ಅವರ ವಕೀಲರಿಗೆ ಭದ್ರತೆ ಒದಗಿಸಬೇಕು. ಹೆಣ ಹೂತುಹಾಕಲಾಗಿದೆ ಎನ್ನಲಾದ ಪ್ರಕರಣಕ್ಕೆ ತನಿಖೆಯನ್ನು ಸೀಮಿತಗೊಳಿಸದೆ, 80ರ ದಶಕದಲ್ಲಿ ಅಪಹರಣಕ್ಕೆ ಒಳಗಾಗಿ ಕೊಲೆ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ, 'ಪತ್ತೆಹಚ್ಚಲಾಗದ ಪ್ರಕರಣ' ಎಂದು ಷರಾ ಬರೆದಿರುವ ವಿದ್ಯಾರ್ಥಿನಿ ಪದ್ಮಲತಾ ಹಾಗೂ ಸೌಜನ್ಯಾ ಪ್ರಕರಣ, ಮಾವುತ ನಾರಾಯಣ ಅವರ ಸಹೋದರಿ ಯಮುನಾ ಕೊಲೆ ಪ್ರಕರಣಗಳನ್ನೂ ತನಿಖೆಗೆ ಒಳಪಡಿಸಬೇಕು' ಎಂದು ನಿರ್ಣಯದಲ್ಲಿ ಆಗ್ರಹಿಸಲಾಯಿತು.

ಬಿಜೆಪಿ ಪ್ರತಿಭಟನೆ ಇಂದು

ಯೂರಿಯಾ ಕೊರತೆ: ರಾಜ್ಯ ಸರ್ಕಾರದ ವೈಫಲ್ಯವೇ ಕಾರಣ– ವಿಜಯೇಂದ್ರ



ರಾಜ್ಯಕ್ಕೆ ಕೇಂದ್ರ 8.70 ಲಕ್ಷ ಟನ್ ಯೂರಿಯಾ ನೀಡಿದೆ. ಆದರೆ ರಾಜ್ಯದಲ್ಲಿ ಇರುವುದು 5.25 ಲಕ್ಷ ಟನ್ ಮಾತ್ರ. ಉಳಿದ 2.50 ಲಕ್ಷ ಟನ್ ಯೂರಿಯಾ ಎಲ್ಲಿಗೆ ಹೋಯಿತು?
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ದೊರೆಯುತ್ತಿಲ್ಲ ಮತ್ತು ರಸಗೊಬ್ಬರದ ತೀವ್ರ ಕೊರತೆ ಉಂಟಾಗಿದೆ. ರಾಜ್ಯ ಸರ್ಕಾರದ ವೈಫಲ್ಯವೇ ಇದಕ್ಕೆಲ್ಲಾ ಕಾರಣ. ಇದರ ವಿರುದ್ಧ ಸೋಮವಾರ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ರೈತರ ಬಗ್ಗೆ ಕಾಳಜಿಯೇ ಇಲ್ಲ. ಹೀಗಾಗಿಯೇ ಇಂತಹ ಬಿಕ್ಕಟ್ಟು ಎದುರಾಗಿದೆ’ ಎಂದರು.

‘ಈ ಬಾರಿ ಮುಂಗಾರು ಮಳೆ ವಾಡಿಕೆಗಿಂತ ಮೊದಲು ಆರಂಭವಾಗಿದ್ದು, ಬೇಸಾಯವೂ ಆರಂಭವಾಗುತ್ತದೆ ಎಂಬ ಅರಿವು ರಾಜ್ಯ ಸರ್ಕಾರಕ್ಕೆ ಮತ್ತು ಕೃಷಿ ಸಚಿವರಿಗೆ ಇರಬೇಕಿತ್ತು. ಇಡೀ ರಾಜ್ಯದಲ್ಲಿ ಒಂದೇ



ಸಮಯದಲ್ಲಿ ಬಿತ್ತನೆ ಮಾಡುವುದಿಲ್ಲ. ಮೊದಲು ಬಿತ್ತನೆ ನಡೆಯುವ ಕಲಬುರಗಿ, ಕೊಪ್ಪಳ, ಶಿವಮೊಗ್ಗ ಮತ್ತು ಇತರ ಜಿಲ್ಲೆಗಳಿಗೆ ಎಷ್ಟು ಬಿತ್ತನೆ ಬೀಜ ಹಾಗೂ ಯೂರಿಯಾ ಅಗತ್ಯವಿದೆ ಎಂಬ ಅಂದಾಜು ಕೃಷಿ ಸಚಿವರಿಗೆ ಇರಬೇಕಿತ್ತು’ ಎಂದು ಪ್ರಶ್ನೆಯೊಂದಕ್ಕೆ ಹೇಳಿದರು.

‘ರೈತರು ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಮಾಡುತ್ತಾರೆ ಎಂಬುದು ಗೊತ್ತಾದ ತಕ್ಷಣ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಹೆಚ್ಚುವರಿ ಯೂರಿಯಾ ಹಂಚಿಕೆ ಮಾಡುವಂತೆ ಕೋರಬೇಕಿತ್ತು. ಆದರೆ ಈಗ ಕೊರತೆ ತೀವ್ರವಾದ ನಂತರ ಪತ್ರ ಬರೆದಿದ್ದಾರೆ. ಇವರಿಗೆ ರೈತರ ಬಗ್ಗೆ ಸ್ವಲ್ಪವಾದರೂ ಕಾಳಜಿ ಇದೆಯೇ’ ಎಂದು ಪ್ರಶ್ನಿಸಿದರು.

‘ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ, ಅಧಿಕ ಬಿತ್ತನೆಯಾಗುವ ಸಂದರ್ಭದಲ್ಲಿ ಅನುಕೂಲಕ್ಕೆ ಬರಲಿ ಎಂದು ಕಾಪು ದಾಸ್ತಾನಿಗೆ ₹1,000 ಕೋಟಿ ಮೀಸಲಿರಿಸಿದ್ದರು. ಸಿದ್ದರಾಮಯ್ಯ ಅವರು ಕಾಪು ದಾಸ್ತಾನು ಅನುದಾನವನ್ನು ₹400 ಕೋಟಿಗೆ ಇಳಿಸಿದ್ದಾರೆ. ರೈತರ ಪರವಾದ ಯಾವ ಕೆಲಸವನ್ನೂ ಈ ಸರ್ಕಾರ ಮಾಡುತ್ತಿಲ್ಲ’ ಎಂದರು.

‘ನ್ಯಾನೊ ಯೂರಿಯಾ ಕಡೆಗಣನೆ’



‘ಯೂರಿಯಾ ಕೊರತೆಯನ್ನು ನಿವಾರಿಸಲೆಂದೇ ಅದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ನ್ಯಾನೊ ಯೂರಿಯಾವನ್ನು ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿ, ರಾಜ್ಯಗಳಿಗೆ ವಿತರಿಸಿದೆ. ಆದರೆ ರಾಜ್ಯ ಸರ್ಕಾರವು ನ್ಯಾನೊ ಯೂರಿಯಾ ಬಳಕೆ ಉತ್ತೇಜನವನ್ನು ಕಡೆಗಣಿಸಿದೆ. ಬಳಕೆ ಬಗ್ಗೆ ಜಾಗೃತಿ ಮೂಡಿಸಲು ಕೇಂದ್ರ ಸರ್ಕಾರವೇ ಬರಬೇಕೇ’ ಎಂದು ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

‘ನಾಲ್ಕಾರು ಚೀಲ ಯೂರಿಯಾ ಬಳಸುವಲ್ಲಿ, ಒಂದೆರಡು ಬಾಟಲಿನಷ್ಟು ನ್ಯಾನೊ ಯೂರಿಯಾ ಸಾಕಾಗುತ್ತದೆ. ಅದರ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಿ ಬಳಕೆಯನ್ನು ಉತ್ತೇಜಿಸಿದ್ದಿದ್ದರೆ, ಈಗ ಯೂರಿಯಾ ಕೊರತೆ ಉಂಟಾಗುತ್ತಿರಲಿಲ್ಲ. ಈ ಬಗ್ಗೆ ಜಾಗೃತಿ ಮೂಡಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ಸರ್ಕಾರ, ಮುಖ್ಯಮಂತ್ರಿ ಮತ್ತು ಕೃಷಿ ಸಚಿವರು ತಮ್ಮ ಕರ್ತವ್ಯ ಮರೆತು, ರೈತರನ್ನು ಬೀದಿಗೆ ತಂದು ನಿಲ್ಲಿಸಿದ್ದಾರೆ’ ಎಂದರು.

‘ಕಾರ್ಖಾನೆಗಳಿಗೆ ಯೂರಿಯಾ ಮಾರಾಟ ಶಂಕೆ’

ಪ್ರಜಾವಾಣಿ ವಾರ್ತೆ

ಹಾವೇರಿ: ‘ರೈತರಿಗೆ ಸಮರ್ಪಕವಾಗಿ ಯೂರಿಯಾ ಗೊಬ್ಬರ ಪೂರೈಸಲು ರಾಜ್ಯ ಸರ್ಕಾರ ವಿಫಲವಾಗಿದೆ. ಕೇಂದ್ರದಿಂದ ಪೂರೈಕೆಯಾಗಿರುವ ಗೊಬ್ಬರವನ್ನು ರಾಜ್ಯ ಸರ್ಕಾರ, ಕಾಳಸಂತೆಯಲ್ಲಿ ಯಾವುದಾದರೂ ಕಾರ್ಖಾನೆಗಳಿಗೆ ಕೊಡುತ್ತಿದೆಯಾ? ಎಂಬ ಬಗ್ಗೆ ಶಂಕೆ ಮೂಡಿದೆ’ ಎಂದು ಕೃಷಿ ಇಲಾಖೆಯ ಮಾಜಿ ಸಚಿವ, ಬಿಜೆಪಿ ಮುಖಂಡ ಬಿ.ಸಿ.ಪಾಟೀಲ ದೂರಿದರು.

ನಗರದಲ್ಲಿ ಭಾನುವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ‘ಮುಂಗಾರು ಆರಂಭದ ಬಗ್ಗೆ ಮಾರ್ಚ್– ಏಪ್ರಿಲ್‌ನಲ್ಲಿಯೇ ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಕೃಷಿಗೆ ಅಗತ್ಯವಿರುವ ಗೊಬ್ಬರವನ್ನು ರಾಜ್ಯ ಸರ್ಕಾರ ತರಿಸಿಕೊಳ್ಳಬೇಕಿತ್ತು. ಗೊಬ್ಬರ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಕಾಣುತ್ತಿದೆ’ ಎಂದರು.


ಬಿ.ಸಿ.ಪಾಟೀಲ

‘ಯೂರಿಯಾ ಗೊಬ್ಬರದಿಂದ ಹಲವು ಉತ್ಪನ್ನಗಳನ್ನು ಸಿದ್ಧಪಡಿಸುವ ಕಾರ್ಖಾನೆಗಳು ರಾಜ್ಯದಲ್ಲಿವೆ. ಕೋಲಾರ ಸೇರಿದಂತೆ ಕೆಲ ಕಾರ್ಖಾನೆಗಳಿಗೆ ಕಾಳಸಂತೆಯಲ್ಲಿ ಯೂರಿಯಾ ಗೊಬ್ಬರ ಹೋಗುತ್ತಿತ್ತು. ನಾನು ಸಚಿವನಾದಾಗ, ಕಾರ್ಯಾಚರಣೆ ನಡೆಸಿ ಅದನ್ನು ಪತ್ತೆ ಮಾಡಿ ಕ್ರಮ ಕೈಗೊಂಡಿದೆ. ಅಂಥ ಜಾಲ ಇಂದು ಸಹ ಸಕ್ರಿಯವಾಗಿರುವ ಅನುಮಾನವಿದೆ’ ಎಂದರು.

‘ಯಾವ ಪ್ರದೇಶದಲ್ಲಿ ಯಾವ ಬೆಳೆಯಿದೆ. ಎಷ್ಟು ಪ್ರಮಾಣದ ಗೊಬ್ಬರ ಪೂರೈಸಬೇಕೆಂಬ ಬಗ್ಗೆ ಕೃಷಿ ಸಚಿವರು, ಅಧಿಕಾರಿಗಳ ಸಭೆ ನಡೆಸಿ ನಿರ್ಣಯಿಸಬೇಕು. ಆದರೆ, ಇಂದಿನ ಕೃಷಿ ಸಚಿವರು ಗೊಬ್ಬರ ಪೂರೈಕೆಯ ಮೇಲ್ವಿಚಾರಣೆ ಮಾಡಿಲ್ಲ. ಇದೇ ಕಾರಣಕ್ಕೆ ರಾಜ್ಯದಲ್ಲಿ ಯೂರಿಯಾ ಗೊಬ್ಬರದ ಅಭಾವ ಉಂಟಾಗಿದೆ. ರೈತರನ್ನು ಸಂಕಷ್ಟಕ್ಕೆ ದೂಡಿರುವ ಈ ಸರ್ಕಾರ, ಕೇವಲ ಸಾಧನಾ ಸಮಾವೇಶ ಮಾಡುವುದರಲ್ಲಿ ಕಾಲಹರಣ ಮಾಡುತ್ತಿದೆ. ಇದೊಂದು ರೈತ ವಿರೋಧಿ ಸರ್ಕಾರ’ ಎಂದು ಕಿಡಿಕಾರಿದರು.

‘ರಾಜ್ಯದ ಹಲವು ಕಡೆಗಳಲ್ಲಿ ಹೆಚ್ಚಿನ ಮಳೆಯಾಗುತ್ತಿದೆ. ಬೆಳೆಯೂ ಹಾಳಾಗುವ ವಾತಾವರಣ ನಿರ್ಮಾಣವಾಗಿದೆ. ಕೆಲವು ಕಡೆಗಳಲ್ಲಿ ಬಿತ್ತನೆ ಸಹ ಮಾಡಿಲ್ಲ. ಅತಿವೃಷ್ಟಿಯಿಂದ ಆಗಿರುವ ಹಾನಿ ಬಗ್ಗೆ ಸರ್ಕಾರ ಕೂಡಲೇ ಸಮೀಕ್ಷೆ ನಡೆಸಬೇಕು. ರೈತರಿಗೆ ಮಧ್ಯಂತರ ಪರಿಹಾರ ಬಿಡುಗಡೆ ಮಾಡಬೇಕು’ ಎಂದೂ ಆಗ್ರಹಿಸಿದರು.

ಬಿಹಾರ: 65 ಲಕ್ಷ ಮತದಾರರಿಗೆ ಕೊಕ್

ಒಂದನೇ ಪುಟದಿಂದ...

‘ಸುಮಾರು 22 ಲಕ್ಷ ಮತದಾರರು ‘ಮೃತಪಟ್ಟಿದ್ದಾರೆ’ ಎಂದು ಘೋಷಿಸಲಾಗಿದೆ, 36 ಲಕ್ಷ ಮಂದಿ ಶಾಶ್ವತವಾಗಿ ವಲಸೆ ಹೋಗಿದ್ದಾರೆ ಅಥವಾ ಅವರ ಪತ್ತೆ ಸಾಧ್ಯವಾಗಿಲ್ಲ ಹಾಗೂ 7 ಲಕ್ಷ ಮತದಾರರು ಹಲವು ಕಡೆಗಳಲ್ಲಿ ನೋಂದಣಿ ಮಾಡಿಕೊಂಡಿರುವುದು ಪತ್ತೆಯಾಗಿದೆ’ ಎಂದು ತಿಳಿಸಿವೆ.

ದೇಶದಾದ್ಯಂತ ಪರಿಷ್ಕರಣೆ: ಚುನಾವಣಾ ಆಯೋಗವು ಬಿಹಾರದ ಬಳಿಕ ದೇಶದಾದ್ಯಂತ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲಿದೆ. ಬಿಹಾರದ ಕರಡು ಮತದಾರರ ಪಟ್ಟಿಯು ಆಗಸ್ಟ್ 1ರಂದು ಪ್ರಕಟಗೊಳ್ಳಲಿದೆ. ಈ ಪಟ್ಟಿಯು 7.89 ಕೋಟಿ ಮತದಾರರ ಬದಲಾಗಿ, 7.24 ಕೋಟಿ ಮತದಾರರ ಹೆಸರನ್ನು ಒಳಗೊಂಡಿರಲಿದೆ. ಅರ್ಹ ಮತದಾರರು ತಮ್ಮ ನೋಂದಣಿಯಲ್ಲಿನ ದೋಷಗಳನ್ನು ಸರಿಪಡಿಸಿಕೊಳ್ಳಲು ಒಂದು ತಿಂಗಳು ಅವಕಾಶ ಇರಲಿದೆ ಎಂದು ಮಾಹಿತಿ ನೀಡಿವೆ. ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡುವ ಆಯೋಗದ ನಿರ್ಧಾರವನ್ನು ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿವೆ.

7.24 ಕೋಟಿ ಮತದಾರರಿಂದ ಅರ್ಜಿ ನಮೂನೆ ವಾಪಸ್

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಮೊದಲ ಹಂತವು ಮುಕ್ತಾಯವಾಗಿದ್ದು, 7.24 ಕೋಟಿ ಅಥವಾ ಶೇ 91.69ರಷ್ಟು ಮತದಾರರಿಂದ ಅರ್ಜಿ ನಮೂನೆಗಳನ್ನು ವಾಪಸ್ ಪಡೆಯಲಾಗಿದೆ ಎಂದು ಚುನಾವಣಾ ಆಯೋಗ ಭಾನುವಾರ ಮಾಹಿತಿ ನೀಡಿದೆ.



ಮೊದಲ ಹಂತದ ಕಾರ್ಯಾಚರಣೆಗೆ ಸಂಬಂಧಿಸಿದ ಅರ್ಜಿಗಳ ವಿತರಣೆ ಮತ್ತು ವಾಪಸ್ ಪಡೆಯುವ ಪ್ರಕ್ರಿಯೆಯು ಜುಲೈ 25ಕ್ಕೆ ಕೊನೆಗೊಂಡಿದೆ. ‘ಆಗಸ್ಟ್ 1ರಿಂದ ಸೆಪ್ಟೆಂಬರ್ 1ರ ವರೆಗಿನ ಆಕ್ಷೇಪಣೆ ಅವಧಿಯಲ್ಲಿಯೂ ನೈಜ ಮತದಾರರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಬಹುದು’ ಎಂದು ಆಯೋಗ ಸ್ಪಷ್ಟಪಡಿಸಿದೆ.

ಎಸ್‌ಐಆರ್ ವಿರುದ್ಧ ‘ಕೈ’ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಬಾರದು ಎಂದು ಕಾಂಗ್ರೆಸ್ ಕಾರ್ಯಕರ್ತರು ಇಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.



ಈ ವರ್ಷದ ಕೊನೆಯಲ್ಲಿ ನೆರೆಯ ಬಿಹಾರದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಅಲ್ಲಿ ಎಸ್‌ಐಆರ್ ನಡೆಸಲಾಗುತ್ತಿದೆ. 2026ರ ಮಧ್ಯದಲ್ಲಿ ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆಯಿದೆ.

ಇಂದು ಪ್ರತಿಭಟನೆ

ನವದೆಹಲಿ (ಪಿಟಿಐ): ಸಂಸತ್ತಿನಲ್ಲಿ ‘ಆಪರೇಷನ್ ಸಿಂಧೂರ’ದ ಬಗ್ಗೆ ಸೋಮವಾರ ಚರ್ಚೆ ಆರಂಭಗೊಳ್ಳುವ ಮುನ್ನವೇ, ಸಂಸತ್ತಿನ ‘ಮಕರ ದ್ವಾರ’ದ ಎದುರು ಇಂಡಿಯಾ ಕೂಟದ ಸಂಸದರು, ಚುನಾವಣಾ ಆಯೋಗದ (ಇ.ಸಿ) ವಿರುದ್ಧ ಪ್ರತಿಭಟನೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಖಂಡಿಸಿರುವ ಇಂಡಿಯಾ ಕೂಟವು, ಇದರ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವುದಾಗಿ ಹೇಳಿದೆ.



ಇಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಜೆಡಿ, ಕಾಂಗ್ರೆಸ್, ಸಿಪಿಎಂ ಪಕ್ಷದ ಮುಖಂಡರು ಇ.ಸಿ ವಿರುದ್ಧ ವಾಗ್ದಾಳಿ ನಡೆಸಿದರು.



ಅಧಿವೇಶನ ಕಾವೇರಲಿರುವ ‘ಸಿಂಧೂರ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನ ಸೋಮವಾರದಿಂದ ಪುನರಾರಂಭ ಆಗಲಿದ್ದು, ಲೋಕಸಭೆಯಲ್ಲಿ ‘ಆಪರೇಷನ್ ಸಿಂಧೂರ’ ಕುರಿತು ಕಾವೇರಿದ ಚರ್ಚೆ ನಡೆಯುವ ಸಾಧ್ಯತೆಯಿದೆ.

ಕೆಲ ವಿರೋಧ ಪಕ್ಷಗಳು ಬಿಹಾರದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತೂ ಧ್ವನಿಯೆತ್ತುವ ನಿರೀಕ್ಷೆಗಳಿವೆ.

ರಾಜ್ಯಸಭೆಯಲ್ಲಿ ‘ಆಪರೇಷನ್ ಸಿಂಧೂರ’ ಕುರಿತ ಮಂಗಳವಾರ ಚರ್ಚೆಗೆ 16 ಗಂಟೆ ಮೀಸಲಿಡಲಾಗಿದೆ. ಎರಡೂ ಸದನಗಳಲ್ಲಿ ಈ ವಿಷಯ ಕುರಿತು ಚರ್ಚಿಸಲು ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ವಿರೋಧ ಪಕ್ಷಗಳು ತಮ್ಮ ಹಿರಿಯ ನಾಯಕರನ್ನು ಹೆಸರಿಸಿವೆ.

ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಭಯೋತ್ಪಾದನೆ ಮತ್ತು ‘ಆಪರೇಷನ್ ಸಿಂಧೂರ’ದ ಕುರಿತು ಸರ್ಕಾರದ ನಿಲುವನ್ನು ಸಮರ್ಥಿಸಿಕೊಳ್ಳಲಿದ್ದಾರೆ. ಚರ್ಚೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರೂ ಮಧ್ಯ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಎರಡು ದಶಕಗಳ ಬಳಿಕ ‘ಮಾತೋಶ್ರೀ’ಗೆ ಬಂದ ಎಂಎನ್‌ಎಸ್ ಮುಖ್ಯಸ್ಥ

ಉದ್ಧವ್–ರಾಜ್ ಭೇಟಿಯ ಕುತೂಹಲ

ಪ್ರಜಾವಾಣಿ ವಾರ್ತೆ

ಮುಂಬೈ: ರಾಜಕೀಯ ಕಾರಣದಿಂದಾಗಿ ಪರಸ್ಪರ ಅಂತರ ಕಾಯ್ದುಕೊಂಡಿರುವ ಸೋದರ ಸಂಬಂಧಿಗಳೂ ಆದ, ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಹಾಗೂ ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ ಅವರು 15 ದಿನಗಳಲ್ಲಿ ಎರಡನೇ ಬಾರಿ ಜತೆಯಾಗಿ ಕಾಣಿಸಿಕೊಂಡಿದ್ದಾರೆ. ಈ ಬೆಳವಣಿಗೆ, ಮಹಾರಾಷ್ಟ್ರ ರಾಜಕೀಯದಲ್ಲಿ ಅಚ್ಚರಿಗೆ ಕಾರಣವಾಗಿದೆ.

ಭಾನುವಾರ 65ನೇ ಹುಟ್ಟುಹಬ್ಬ ಆಚರಿಸಿದ ಉದ್ಧವ್‌ಗೆ ಶುಭ ಕೋರಲು ರಾಜ್ ಅವರು ಬಾಂದ್ರಾದಲ್ಲಿರುವ ‘ಮಾತೋಶ್ರೀ’ ನಿವಾಸಕ್ಕೆ ಬಂದಿದ್ದಾರೆ. ಎರಡು ದಶಕಗಳ ಬಳಿಕ ‘ಮಾತೋಶ್ರೀ’ಗೆ ಭೇಟಿ ನೀಡಿದ ರಾಜ್, ದೊಡ್ಡ ಹೂಗುಚ್ಛ ನೀಡಿ ಶುಭ ಹಾರೈಸಿದರು.

ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುಂಚಿತವಾಗಿ ಶಿವಸೇನಾ (ಯುಬಿಟಿ) ಮತ್ತು ಎಂಎನ್‌ಎಸ್ ಮೈತ್ರಿ ಮಾಡಿಕೊಳ್ಳಲಿವೆ


ಉದ್ಧವ್ ಠಾಕ್ರೆ ಮತ್ತು ರಾಜ್ ಠಾಕ್ರೆ –ಪಿಟಿಐ ಚಿತ್ರ

ಎಂಬ ಊಹಾಪೋಹಕ್ಕೆ ಈ ಭೇಟಿ ಇನ್ನಷ್ಟು ಬಲ ತುಂಬಿದೆ.

ಉದ್ಧವ್ ಅವರು ತಮಗೆ ಶುಭಾಶಯ ಹೇಳಲು ಬಂದ ರಾಜ್ ಅವರ ಭುಜದ ಮೇಲೆ ಕೈಹಾಕಿ ಕುಶಲೋಪರಿ ನಡೆಸಿದರು. ಶಿವಸೇನಾ ಸಂಸ್ಥಾಪಕ ದಿವಂಗತ ಬಾಳಾಸಾಹೇಬ್ ಠಾಕ್ರೆ ಅವರ ಭಾವಚಿತ್ರದ ಬಳಿ ನಿಂತು ಇಬ್ಬರೂ ಫೋಟೊ ತೆಗೆಸಿಕೊಂಡರು. ರಾಜಕೀಯ ಭಿನ್ನಾಭಿಪ್ರಾಯ ಮರೆತು ಇಬ್ಬರೂ ಜತೆಯಾಗಿದ್ದಾರೆ ಎಂಬುದನ್ನು ಈ ಫೋಟೊ ತೋರಿಸಿದೆ.


‘ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಅವರು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರಿಗೆ ಶುಭ ಹಾರೈಸಿದರು’ ಎಂದು ಶಿವಸೇನಾ (ಯುಬಿಟಿ) ತನ್ನ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದೆ. ‘ಹಿರಿಯ ಸಹೋದರ ಉದ್ಧವ್ ಅವರಿಗೆ ಜನ್ಮ ದಿನದ ಶುಭಾಶಯ ತಿಳಿಸಲು ನಾನು ‘ಮಾತೋಶ್ರೀ’ಗೆ ಭೇಟಿ ನೀಡಿದೆ’ ಎಂದು ರಾಜ್ ‘ಎಕ್ಸ್’ನಲ್ಲಿ ಹೇಳಿದ್ದಾರೆ.

20 ವರ್ಷಗಳ ಬಿಡುವಿನ ಬಳಿಕ ಜುಲೈ 5ರಂದು ಉದ್ಧವ್ ಮತ್ತು ರಾಜ್ ಮೊದಲ ಬಾರಿ ಜತೆಯಾಗಿದ್ದರು. ಹಿಂದಿ ಹೇರಿಕೆ ವಿರುದ್ಧ ವರ್ಲಿಯ ಸರ್ಧಾರ್ ವಲ್ಲಭಭಾಯಿ ಕ್ರೀಡಾಂಗಣದಲ್ಲಿ ನಡೆದಿದ್ದ ಜಂಟಿ ಪ್ರತಿಭಟನೆಯಲ್ಲಿ ಇಬ್ಬರೂ ವೇದಿಕೆ ಹಂಚಿಕೊಂಡಿದ್ದರು.

ಇಬ್ಬರು ಸೋದರ ಸಂಬಂಧಿಗಳು ಜತೆಯಾಗಿ ಕಾಣಿಸಿಕೊಂಡಿರುವುದು ತುಂಬಾ ಸಂತೋಷ ಉಂಟು ಮಾಡಿದೆ
ಸುಪ್ರಿಯಾ ಸುಳೆ
ಎನ್‌ಸಿಪಿ (ಎಸ್‌ಪಿ) ಕಾರ್ಯಾಧ್ಯಕ್ಷೆ

ಉದ್ಧವ್ ಠಾಕ್ರೆ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಮಹಾರಾಷ್ಟ್ರ ಜನರ ಹಿತಾಸಕ್ತಿ ಹಾಗೂ ಹಕ್ಕಿಗಾಗಿ ಸಂಘಟಿತರಾಗಿ ಹೋರಾಡೋಣ
ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ

‘ಜನರ ಮನಸ್ಸಿನಲ್ಲಿ ಏನಿದೆ ಎಂಬುದು ತಿಳಿದಿದೆ’


ದೇವೇಂದ್ರ ಫಡಣವೀಸ್

ಈ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯಿಸಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ‘ಜನರ ಮನಸ್ಸಿನಲ್ಲಿ ಏನಿದೆಯೋ ಅದು ವಿಧಾನಸಭಾ ಚುನಾವಣೆಯಲ್ಲಿ ಪ್ರತಿಫಲಿಸಿದೆ’ ಎಂದಿದ್ದಾರೆ.

‘ಜನರ ಮನಸ್ಸಿನಲ್ಲಿ ಏನಿದೆಯೋ ಅದು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಪ್ರತಿಫಲಿಸುತ್ತದೆ. ಇಬ್ಬರು ವ್ಯಕ್ತಿಗಳ ಮನಸ್ಸಿನಲ್ಲಿ ಏನಿದೆ ಎಂಬುದು ಮುಖ್ಯವಲ್ಲ’ ಎಂದು ಹೇಳಿದ್ದಾರೆ. ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು, ‘ಇದು ಕುಟುಂಬಕ್ಕೆ ಸಂಬಂಧಿಸಿದ ವಿಚಾರ’ ಎಂದರು.

ಕೊರ್ಟೆವಾ ಅಗ್ರಿಸೈನ್ಸ್ ವಿದ್ಯಾರ್ಥಿವೇತನ
ಕೃಷಿಗೆ ಸಂಬಂಧಿಸಿದಂತೆ ಸರ್ಕಾರಿ ಕಾಲೇಜಿನಲ್ಲಿ ಪದವಿ, ಸ್ನಾತಕೋತ್ತರ ಪದವಿ (ಎಂಬಿಎ/ಎಂಎಸ್ಸಿ/ಎಂ.ಟೆಕ್) ಅಧ್ಯಯನ, ಸಂಶೋಧನೆಯಲ್ಲಿ ನಿರತರಾಗಿರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಕುಟುಂಬದ ವಾರ್ಷಿಕ ಆದಾಯ ₹ 6 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಆರ್ಥಿಕ ನೆರವು: ಪದವಿ: ₹ 25,000, ಸ್ನಾತಕೋತ್ತರ ಪದವಿ: ₹ 35,000. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೇ ದಿನ: 31-08-2025. ಮಾಹಿತಿಗೆ: www.b4s.in/praja/CASP5

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

46) ಬಿಟ್ಟ ಸ್ಥಳ ತುಂಬಿ

3) ಭಾರತದ ಮಧ್ಯಭಾಗದಲ್ಲಿ.................ಉತ್ತರ ಅಕ್ಷಾಂಶ ಹಾಯ್ದು ಹೋಗುತ್ತದೆ.
ಉತ್ತರ:– $82^0.5'$

4) ಭಾರತದ ದಕ್ಷಿಣ ತುದಿಯಲ್ಲಿರುವ ದೇಶ ....
ಉತ್ತರ:– ಶ್ರೀಲಂಕ

5) ಭಾರತವು ಹೊಂದಿರುವ ಉದ್ದವಾದ ಕರಾವಳಿಯು .... ಕಿ.ಮೀ.ಗಳಷ್ಟು ಆಗಿದೆ.
ಉತ್ತರ:– 6100

6) ದಕ್ಷಿಣ ಭಾರತದ ಎತ್ತರವಾದ ಶಿಖರ ....
ಉತ್ತರ:– ಆನೆಮುಡಿ

7) ಮಹಾ ಹಿಮಾಲಯವನ್ನು ....ಎಂದೂ ಕರೆಯುವರು.
ಉತ್ತರ:– ಹಿಮಾದ್ರಿ

8)..................ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾಗಿದೆ.
ಉತ್ತರ:– ಮೌಂಟ್ ಎವರೆಸ್ಟ್

9) ಉತ್ತರ ಭಾರತದ ಮೈದಾನವು .... ಮಣ್ಣಿನಿಂದ ನಿರ್ಮಾಣವಾಗಿದೆ.
ಉತ್ತರ:– ಮೆಕ್ಕಲು

10) ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು .... ಎಂದು ಕರೆಯುವರು.
ಉತ್ತರ:– ಸಹ್ಯಾದಿ

11) ....ಎಂಬುದು ಭಾರತದಲ್ಲಿ ಅತಿಎತ್ತರವಾದ ಶಿಖರವಾಗಿದೆ.
ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ $ಕೆ_2$

13) ಭಾರತದ ಉತ್ತರದ ತುತ್ತತುದಿ..........................
ಉತ್ತರ:– ಇಂದಿರಾಕೂಲ್

14) ಭಾರತದ ದಕ್ಷಿಣದ ತುತ್ತತುದಿ ....
ಉತ್ತರ:– ಇಂದಿರಾ ಪಾಯಿಂಟ್

15) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ....
ಉತ್ತರ:– ಪರ್ಯಾಯ ಪ್ರಸ್ಥಭೂಮಿ

16) ಭಾರತ ಮತ್ತು ಚೀನಾದ ನಡುವೆ ಎಳೆದಿರುವ ರೇಖೆ ....
ಉತ್ತರ:– 'ಮ್ಯಾಕ್‌ಮೋಹನ್' (McMohan line) ರೇಖೆ

17) ಭಾರತ ಮತ್ತು ಅಫ್ಘಾನಿಸ್ಥಾನದ ನಡುವೆ ಎಳೆದಿರುವ ರೇಖೆ ....
ಉತ್ತರ:– 'ಡ್ಯೂರ್ಯಾಂಡ್' (Durand line) ರೇಖೆ

18) ಭಾರತದ ಭೂಸ್ವರೂಪಗಳಲ್ಲಿ ಅತಿಪುರಾತನವಾದದ್ದು ....
ಉತ್ತರ:– ಪರ್ಯಾಯ ಪ್ರಸ್ಥಭೂಮಿ

19) ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರ ಸುಮಾರು ....
ಉತ್ತರ:– 16 ಲಕ್ಷ ಚ.ಕಿ.ಮೀ.

20) ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ..................
ಉತ್ತರ:– ರಾಧಾನಾಥ್ ಸಿಕ್ದರ್

21) ದಕ್ಷಿಣ ಭಾರತದಲ್ಲಿ ಅತ್ಯುನ್ನದ ಪ್ರದೇಶ/ಅತ್ಯುನ್ನತ ಶಿಖರ ....
ಉತ್ತರ:– ಅಣ್ಣಾಮಲೈ ಶ್ರೇಣಿಯಲ್ಲಿರುವ ಆನೈಮುಡಿ ಶಿಖರ

22) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು .... ದಲ್ಲಿ ಸಂಧಿಸುತ್ತವೆ
ಉತ್ತರ:– ನೀಲಗಿರಿ ಬೆಟ್ಟ

23) ಮೌಂಟ್ ಎವರೆಸ್ಟ್‌ನ ಎತ್ತರ ....
ಉತ್ತರ:– 8848 ಮೀ

24) ಭಾರತದಲ್ಲಿರುವ ಅತಿಎತ್ತರವಾದ ಶಿಖರ ....
ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ K2

25) ಗಾಡ್ವಿನ್‌ಆಸ್ಟಿನ್ ಅಥವಾ K2 ಶಿಖರದ ಎತ್ತರ ....
ಉತ್ತರ:– 8,611ಮೀ.

ಅಧ್ಯಾಯ–11 ಭಾರತದ ಋತುಗಳು

ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಈ ಮಾದರಿಯ ವಾಯುಗುಣದಲ್ಲಿ ಮಾರುತಗಳು ವರ್ಷದ ವಿವಿಧ ಋತುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಿಂದ ಬೀಸುತ್ತವೆ. ವರ್ಷದ ಅರ್ಧಭಾಗ ನೈಋತ್ಯ ದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುವ ಕಡೆಗೆ ಬೀಸುವ ಮಾನ್ಸೂನ್ ಮಾರುತಗಳು ಉಳಿದ ಅವಧಿಯಲ್ಲಿ ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುತ್ತವೆ. ಜೊತೆಗೆ ಭಾರತವು ಭೌಗೋಳಿಕವಾಗಿ ಉಷ್ಣವಲಯದ ಹಾಗೂ ಸಮಶಿತೋಷ್ಣ ವಲಯಗಳೆರಡರಲ್ಲಿಯೂ ಹಂಚಿಕೆಯಾಗಿದೆ. ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಸಾಗರಗಳಿಂದ ಇರುವ ದೂರ, ಮಾರುತಗಳ ದಿಕ್ಕು, ಪರ್ವತ ಸರಣಿಗಳು ಹಬ್ಬಿರುವ ರೀತಿ, ಸಾಗರ ಪ್ರವಾಹಗಳು ಮುಂತಾದವು ಭಾರತದ ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ.

ಪ್ರಶ್ನೋತ್ತರ

1) ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ಎಷ್ಟು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ.?
ಉತ್ತರ:– ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ನಾಲ್ಕು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ
1) **ಬೇಸಿಗೆ ಕಾಲ:** ಮಾರ್ಚ್ ನಿಂದ–ಮೇ ವರೆಗೆ
2) **ನೈಋತ್ಯ ಮಾನ್ಸೂನ್ ಕಾಲ ಅಥವಾ ಮುಂಗಾರು ಮಳೆಗಾಲ:** ಜೂನ್‌ನಿಂದ – ಸೆಪ್ಟಂಬರ್‌ವರೆಗೆ
3) **ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ:** ಅಕ್ಟೋಬರ್‌ನಿಂದ – ನವಂಬರ್‌ವರೆಗೆ
4) **ಚಳಿಗಾಲ:** ಡಿಸೆಂಬರ್‌ನಿಂದ – ಫೆಬ್ರವರಿವರೆಗೆ

2) ಭಾರತದಲ್ಲಿ ಬೇಸಿಗೆ ಕಾಲ ಯಾವಾಗ ಆರಂಭವಾಗುತ್ತದೆ?
ಉತ್ತರ:– ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ.

3) ಭಾರತದಲ್ಲಿ ಎಲ್ಲಿ ಅತಿಹೆಚ್ಚು ಉಷ್ಣಾಂಶ ದಾಖಲಾಗುತ್ತದೆ?
ಉತ್ತರ: ರಾಜಸ್ತಾನದ ಗಂಗಾನಗರವು 52^0 ಸೆ. ಗಳಷ್ಟು ಉಷ್ಣಾಂಶ ದಾಖಲಾಗುತ್ತದೆ. ಇದು ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ

4) ದಕ್ಷಿಣ ಭಾರತವು ಬೇಸಿಗೆಯಲ್ಲಿ ಸಾಧಾರಣ ಉಷ್ಣಾಂಶವನ್ನು ಹೊಂದಿದೆ ಯಾಕೆ?
ಉತ್ತರ:– ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿರುವ ಕಾರಣ ಉಷ್ಣಾಂಶ ಸಾಧಾರಣವಾಗಿರುತ್ತದೆ

5) ಭಾರತದಲ್ಲಿ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಯಾಕೆ? ಯಾವ ಯಾವ ಪ್ರದೇಶದಲ್ಲಿ ಈ ಮಳೆಯನ್ನು ಯಾವ ಯಾವ ಹೆಸರಿನಲ್ಲಿ ಕರೆಯುತ್ತಾರೆ?
ಉತ್ತರ:– ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ 'ಕಾಲ ಬೈಸಾಕಿ,' ಉತ್ತರ ಪ್ರದೇಶದಲ್ಲಿ 'ಆಂಡೀಸ್', ಕರ್ನಾಟಕದಲ್ಲಿ 'ಕಾಫಿ ತುಂತುರು' ಹಾಗೂ ಕೇರಳದಲ್ಲಿ 'ಮಾವಿನ ಹೊಯ್ಲು' ಎಂದು ಕರೆಯುತ್ತಾರೆ.

6) ಭಾರತದ ·ಬೇಸಿಗೆ ಕಾಲದ ಬಗ್ಗೆ ವಿಸ್ತಾರವಾಗಿ ಬರೆಯಿರಿ
ಉತ್ತರ: ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ. ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧಗೋಳದ ಮೇಲೆ *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

Chapter – 1

ELECTRIC CHARGES AND FIELDS

2. The electric field intensity at a distance of 4 cm due to infinite line charge is $18x10^4$ NC^{-1}. Calculate the linear charge density.

Soln:- Given, electric field $E = 18 \times 10^4\ NC^{-1}$
Distance $r = 4\ cm = 0.04\ m$


$$\text{But } E = \frac{\lambda}{2\pi \in_0 r} \text{ (or) } \lambda = E.\ 2\pi \in_0 r$$

$$\text{i.e., } \lambda = \frac{E}{2}(4\pi \in_0) r = \frac{18x10^4 x0.04}{2x(9x10^9)}$$

$$\left(\therefore \frac{1}{4\pi \in_0} = 9x10^9\ Nm^2\ C^{-2}\right)$$

$$= 4x10^{-7}\ Cm^{-1}$$

3. Metal plates I and II are parallel and close to each other as shown in figure. On their inner faces, the plates have surface charge densities of opposite signs and of magnitude 8.85 x 10^{-20} Cm^{-2}. What is the electric field to the left and to the right of the plates as well as between the plates?



Soln:- $\overrightarrow{E}$ in region I and III will be zero (Field intensities due to plate 1 and 2 will cancel each other in region I and III due to equal and opposite signs of surface charge densities on plates I and II).

$$E_{II} = \frac{\sigma}{\in_0} = \frac{8.85x10^{-20}}{8.85x10^{-12}} = 10^{-8}\ NC^{-1}$$

4. A uniformly charged conducting sphere of radius 1.2m has a surface charge density of 16 $\mu C\ m^{-2}$. Find (a) the charge on the sphere and (b) the total electric flux leaving the surface of the sphere.

Soln:- (a) Given, $r = 1.2\ m$
Surface charge density, $\sigma = 16 \mu C\ m^{-2}$
$= 16 \times 10^{-6}\ C\ m^{-2}$

$$\text{charge density, } \sigma = \frac{q}{4\pi r^2} \Rightarrow q = \sigma \times 4\pi r^2$$

$$(\text{where, surface area of the sphere} = 4\pi r^2)$$

$$q = (16x10^{-6}) x 4 x \frac{22}{7} x (1.2)^2$$

$$= 2.9\ x 10^{-4}\ C$$

b) Total electric flux, ϕ

$$\frac{q}{\in_0} = \frac{(2.9x10^{-4})}{8.85x10^{-12}} = 3.28x10^7\ NC^{-1}\ m^2$$

5. A spherical conductor of radius 10 cm has a charge of 2 x 10^{-7} C distributed uniformly on its surface. What is the electric field -
(a) inside the sphere
(b) at the surface of the sphere
(c) at a point 20 cm from the centre of the sphere?

Soln:- $q = 2 \times 10^{-7}\ C,\ R = 10\ cm = 10 \times 10^{-2}\ m$

a) The conductor has no charge inside it because the whole charge resides on its outer surface. Therefore, electric field inside the conductor is zero.

b) At the surface of sphere,

$$E = \frac{1}{4\pi \in_0}\left(\frac{q}{R^2}\right) = \frac{9x10^9 x2x10^{-7}}{(10x10^{-2})^2} = 1.8\ x10^5\ NC^{-1}$$

c) At a point 20 cm from the centre of the sphere (i.e., at $r = 20 \times 10^{-2}$ m)

$$E = \frac{1}{4\pi \in_0}\left(\frac{q}{r^2}\right) = \frac{9x10^9 x2x10^{-7}}{(20x10^{-2})^2} = 4.5\ x\ 10^4\ NC^{-1}$$

6. Two large parallel thin metallic plates are placed close to each other. The plates have surface charge densities of opposite signs and of magnitude $20x10^{-12}$ C/m^2. Calculate the electric field intensity –
(i) in the outer region of plates and
(ii) in the interior region between the plates.

Soln:- i) Electric field intensity in the outer region of the plates is zero. This because


$$E = E_1 - E_2 = \frac{1}{2 \in_0}(\sigma - \sigma) = 0$$

ii) Electric field intensity in the interior region between the plates,

$$E = \frac{\sigma}{\in_0} = \frac{20\ x\ 10^{-12}}{8.85x10^{-12}} = 2.26\ NC^{-1}$$

7. An early model for an atom considered it to have a positively charged point nucleus of charge *Ze*, surrounded by a uniform density of negative charge upto a radius R. The atom as a whole is neutral. For this model, what is the electric field at a distance r from the nucleus?

Soln:- Charge on nucleus = +Ze



Since atom is neutral, therefore, charge outside the nucleus = -Ze
Now, negative volume charge density,

$$\rho = \frac{\text{negative charge}}{\left(\begin{matrix}\text{volume of sphere of radius(R)} \\ \text{around the nucleus}\end{matrix}\right)}$$

$$= \frac{-Ze}{\frac{4}{3}\pi R^3} = -\frac{3Ze}{4\pi R^3} \quad ....(i)$$

(i) Now consider a point B at a distance r from the nucleus, such that r > R. Draw a Gaussian surface in the form of a sphere of radius r. The net charge inside the Gaussian surface $q = Ze - Ze = 0$.
According to Gauss's theorem,

$$\oint \vec{E}.d\vec{s} = \frac{q}{\in_0}$$

Since $q = 0$, therefore, $E = 0$ at point B.
(ii) Now consider a point A at a distance r from the nucleus, such that r < R. ***Contd/-***

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನನ್ನ ಕನ್ನಡ ನುಡಿಯೆ, ನೀನೆಷ್ಟು ಚಂದ! ಏನು ಗೀಚಿದರು ಆಗುವುದು ಶ್ರೀಗಂಧ.

ದಿನಕರ ದೇಸಾಯಿ

ಸಂಪಾದಕೀಯ

ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ 'ಸುಪ್ರೀಂ' ಮಾರ್ಗಸೂಚಿ ಸ್ವಾಗತಾರ್ಹ

ಶಿಕ್ಷಣ ಸಂಸ್ಥೆಗಳು ಹಾಗೂ ಕೋಚಿಂಗ್ ಸೆಂಟರ್‌ಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗಟ್ಟಲು ಅಗತ್ಯವಾದ ಸಮರ್ಪಕ ಕಾನೂನು ಮತ್ತು ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದನ್ನು ಸುಪ್ರೀಂ ಕೋರ್ಟ್ ಹೇಳಿದೆ. ಈ ಮೂಲಕ, ಸ್ಪರ್ಧಾತ್ಮಕ ಶಿಕ್ಷಣದ ಸ್ವರೂಪದಲ್ಲಿ ವಿದ್ಯಾರ್ಥಿಗಳ ಮೇಲೆ ಅತೀವ ಒತ್ತಡ ಹೇರಲಾಗುತ್ತಿದೆ ಎಂದು ಧ್ವನಿ ಎತ್ತುತ್ತಲೇ ಇರುವ ಪ್ರಜ್ಞಾವಂತರ ಅಭಿಪ್ರಾಯಕ್ಕೆ ಬಲ ಬಂದಂತಾಗಿದೆ. ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆ ನಿರ್ಧಾರಕ್ಕೆ ದೂಡುವಂತಹ ಮಾನಸಿಕ ಒತ್ತಡವನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, ದೇಶದ ಎಲ್ಲ ಭಾಗಗಳಿಗೆ ಅನ್ವಯವಾಗುವಂತೆ ಹದಿನೈದು ಅಂಶಗಳ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ಸಂಬಂಧಪಟ್ಟ ಪ್ರಾಧಿಕಾರವು ಸೂಕ್ತ ಕಾನೂನು ಮತ್ತು ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವವರೆಗೂ ಈ ಮಾರ್ಗಸೂಚಿಗಳು ಜಾರಿಯಲ್ಲಿರಲಿವೆ ಎಂದು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಹೇಳಿದೆ. 'ಕೋವಿಡ್-19'ರ ಸಮಯದಲ್ಲಿ ಹಾಗೂ ಆ ಬಳಿಕ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಶಿಕ್ಷಣ ಸಚಿವಾಲಯವು 'ಮನೋದರ್ಪಣ' ಕಾರ್ಯಕ್ರಮ ಆರಂಭಿಸಿತ್ತು. ಶಾಲಾ ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ತಡೆಗಟ್ಟುವ ಉದ್ದೇಶದಿಂದ 2023ರಲ್ಲಿ 'ಉಮ್ಮೀದ್' ಕಾರ್ಯಕ್ರಮ ಜಾರಿಗೊಂಡಿತ್ತು. ಈ ಎರಡೂ ಕಾರ್ಯಕ್ರಮಗಳ ಜೊತೆಗೆ 'ಆತ್ಮಹತ್ಯೆ ತಡೆ ರಾಷ್ಟ್ರೀಯ ಕಾರ್ಯತಂತ್ರ'ದಲ್ಲಿ ಇರುವ ಅಂಶಗಳನ್ನೂ ಪರಿಗಣಿಸಿ, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಏಕರೂಪದ ನೀತಿಯನ್ನು ಅಳವಡಿಸಿಕೊಳ್ಳುವಂತೆ ಶಿಕ್ಷಣ ಸಂಸ್ಥೆಗಳಿಗೆ ನ್ಯಾಯಪೀಠ ನಿರ್ದೇಶಿಸಿದೆ. ಪ್ರತಿವರ್ಷವೂ ಪರಿಷ್ಕಾರ ಗೊಳ್ಳಬೇಕಾದ ಈ ನೀತಿಯನ್ನು ಎಲ್ಲ ಶಿಕ್ಷಣ ಸಂಸ್ಥೆಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಹಾಗೂ ಸೂಚನಾ ಫಲಕಗಳಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸಬೇಕು ಎಂದೂ ಹೇಳಿದೆ. ಈ ಮಾರ್ಗಸೂಚಿಗಳ ಅನುಷ್ಠಾನಕ್ಕಾಗಿ ತೆಗೆದುಕೊಂಡಿರುವ ಕ್ರಮಗಳು ಮತ್ತು ಅದರ ಮೇಲ್ವಿಚಾರಣೆಗೆ ಮಾಡಿರುವ ವ್ಯವಸ್ಥೆಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ತೊಂಬತ್ತು ದಿನಗಳ ಒಳಗೆ ಸಲ್ಲಿಸುವಂತೆಯೂ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ನೂರು ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳು ಕನಿಷ್ಠ ಒಬ್ಬ ಮನಃಶಾಸ್ತ್ರಜ್ಞ, ಆಪ್ತ ಸಮಾಲೋಚಕ ಅಥವಾ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯದ ಬಗ್ಗೆ ತರಬೇತಿ ಹೊಂದಿರುವ ಸಮಾಜ ಸೇವಕರನ್ನು ಹೊಂದಿರಬೇಕು. ನೂರಕ್ಕೂ ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿರುವ ಸಂಸ್ಥೆಗಳು ಮಾನಸಿಕ ಆರೋಗ್ಯ ವೃತ್ತಿಪರರೊಂದಿಗೆ ಸಂಪರ್ಕದಲ್ಲಿದ್ದು, ಅವರ ಸೇವೆ ಬಳಸಿಕೊಳ್ಳಬೇಕು. ಕೋಚಿಂಗ್ ಸೆಂಟರ್‌ಗಳು ಸೇರಿದಂತೆ ಎಲ್ಲ ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ಸಾಧನೆ, ಅಂಕಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ತಂಡಗಳನ್ನಾಗಿ ವಿಂಗಡಿಸಿ, ಅವಮಾನಕ್ಕೆ ಗುರಿಪಡಿಸಬಾರದು. ಲೈಂಗಿಕ ದೌರ್ಜನ್ಯ, ಕಿರುಕುಳ, ರ‍್ಯಾಗಿಂಗ್ ಮತ್ತು ಜಾತಿ, ವರ್ಗ, ಲಿಂಗ, ಅಂಗವೈಕಲ್ಯ, ಧರ್ಮ ಅಥವಾ ಜನಾಂಗೀಯತೆಯ ಆಧಾರದ ಮೇಲೆ ನಡೆಯುವ ಶೋಷಣೆ, ತಾರತಮ್ಯವನ್ನು ತಡೆಗಟ್ಟಲು ಶಿಕ್ಷಣ ಸಂಸ್ಥೆಗಳು ದೃಢವಾದ, ಗೋಪ್ಯವಾದ ಮತ್ತು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ ಕಾರ್ಯವಿಧಾನಗಳನ್ನು ರೂಪಿಸಬೇಕು ಎನ್ನುವುದು ಸುಪ್ರೀಂ ಕೋರ್ಟ್ ಬಿಡುಗಡೆ ಮಾಡಿರುವ ಮಾರ್ಗಸೂಚಿಯಲ್ಲಿ ಸೇರಿದೆ. ಸಂಸ್ಥೆಯ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳ ಆತ್ಮಹತ್ಯೆ ಸಂಭವಿಸಿದರೆ, ಅದನ್ನು ಸಾಂಸ್ಥಿಕ ಅಪರಾಧವೆಂದು ಪರಿಗಣಿಸಲಾಗುತ್ತದೆ ಎಂದೂ ನ್ಯಾಯಪೀಠ ಎಚ್ಚರಿಸಿದೆ.

ಮಕ್ಕಳನ್ನು ಮಾನಸಿಕವಾಗಿ ಸುಲಭಗೊಳಿಸುವುದು ಹಾಗೂ ಮನೋವಿಕಾಸದೊಂದಿಗೆ ಸದೃಢ ವ್ಯಕ್ತಿತ್ವ ರೂಪಿಸುವುದು ಶಿಕ್ಷಣದ ಪ್ರಾಥಮಿಕ ಉದ್ದೇಶವಾಗಿದೆ. ಬದುಕಿನ ದುಬಾರಿ ಗಳಿಗೆಗಳಲ್ಲಿ ಎದುರಿಸುವ ಆಘಾತವನ್ನು ಮನೋಬಲದಿಂದ ಜಯಿಸಬಲ್ಲ ಮಾನಸಿಕ ಶಕ್ತಿ ವಿದ್ಯಾರ್ಥಿಗಳಿಗೆ ದೊರೆಯಬೇಕು. ದುರದೃಷ್ಟವಶಾತ್, ಇದಕ್ಕೆ ವಿರುದ್ಧವಾದ ಘಟನೆಗಳು ದೇಶದ ವಿವಿಧ ಭಾಗಗಳಲ್ಲಿ ನಿರಂತರವಾಗಿ ವರದಿಯಾಗುತ್ತಿವೆ. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳ ಜೊತೆಗೆ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ದೊರಕಿಸಿಕೊಡುವ ಸಿಇಟಿ- ನೀಟ್ ಪರೀಕ್ಷೆಗಳು ವಿದ್ಯಾರ್ಥಿಗಳ ಮೇಲೆ ಅಪಾರ ಒತ್ತಡ ಸೃಷ್ಟಿಸಿವೆ. ಕಾಲೇಜು ಹಾಗೂ ಕೋಚಿಂಗ್ ಕೇಂದ್ರಗಳ ನಡುವಿನ ವ್ಯಾಪಾರ ತೀವ್ರವಾಗುತ್ತಿದೆ. ಕೋಚಿಂಗ್ ಕೇಂದ್ರಗಳ ಕಾರ್ಖಾನೆ ಎಂದೇ ಪ್ರಸಿದ್ಧವಾದ ರಾಜಸ್ಥಾನದ ಕೋಟಾ, ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಯ ಕಾರಣದಿಂದ ಆಗಾಗ ಸುದ್ದಿಯಲ್ಲಿರುತ್ತದೆ. ಶೈಕ್ಷಣಿಕ ಸಂಸ್ಥೆಗಳು ಹಾಗೂ ಕೋಚಿಂಗ್ ಕೇಂದ್ರಗಳಲ್ಲಿ, ವಿದ್ಯಾರ್ಥಿಗಳ ಜೀವಕ್ಕೆ ಗಾಳ ಆಗುವಂತಹ ಒತ್ತಡದ ಪರಿಸ್ಥಿತಿ ತಿಳಿಗೊಳಿಸಲು ಸುಪ್ರೀಂ ಕೋರ್ಟ್ ನಿರ್ದೇಶನವು ಅವಕಾಶ ಕಲ್ಪಿಸಿದೆ. ಮಾನಸಿಕ ಆರೋಗ್ಯವು ಬದುಕುವ ಹಕ್ಕಿನ ಅಂತರ್ಗತ ಭಾಗ ಎನ್ನುವ ಸುಪ್ರೀಂ ಕೋರ್ಟ್ ಮಾತಿಗೆ ವಿದ್ಯಾಸಂಸ್ಥೆಗಳು ಕಿವಿಗೊಡಬೇಕು.



ವಿದ್ಯಾರ್ಥಿಗಳನ್ನು ತೀವ್ರ ಮಾನಸಿಕ ಒತ್ತಡಕ್ಕೆ ಗುರಿಯಾಗಿಸುವ ಸ್ಪರ್ಧಾತ್ಮಕ ಶಿಕ್ಷಣ ವ್ಯವಸ್ಥೆಯನ್ನು ಮಾನವೀಯಗೊಳಿಸುವ ಪ್ರಯತ್ನದ ರೂಪದಲ್ಲಿ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಹಾಗೂ ನಿರ್ದೇಶನಕ್ಕೆ ವಿಶೇಷ ಮಹತ್ವವಿದೆ.

ಹಳೆಯ ಕಥೆ; ಅದೇ ವ್ಯಥೆ



ಪಡಸಾಲೆ

ರಘುನಾಥ ಚ.ಹ.

ಕನ್ನಡದ ಅತ್ಯುತ್ತಮ ಸಣ್ಣಕಥೆಗಳ ಅನೇಕ ಸಂಕಲನಗಳಲ್ಲಿ ಪುನರಾವರ್ತನೆಗೊಂಡಿರುವ ಕಥೆ, 'ಆನಂದ' ಕಾವ್ಯನಾಮದಿಂದ ಪ್ರಸಿದ್ಧರಾದ ಅಜ್ಜಂಪುರ ಸೀತಾರಾಮಯ್ಯನವರ 'ನಾನು ಕೊಂದ ಹುಡುಗಿ.' ಗಂಡಿನ ಪ್ರಭಾವಳಿಯಿಂದ ಹೊರಗೆ ಉಳಿಯಬಯಸುವ ಹೆಣ್ಣುಮಕ್ಕಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಬಾಯಿಹರುಕತನ ಹಾಗೂ ಸಮಾಜಕ್ಕೆ ಮಾದರಿ ಆಗಬೇಕಾದವರ ಅವಹಾಸ್ಯ ಸಿಕ್ಕಿದಾಗ ಹೆಣ್ಣನ್ನು ಹುರಿದುಮುಕ್ಕುವ ವ್ಯಕ್ತಿಚಿತ್ರ ಪ್ರವೃತ್ತಿಯ ಹಿನ್ನೆಲೆಯಲ್ಲಿ ಆನಂದರ ಕಥೆಯನ್ನು ಹಲವು ಆಯಾಮಗಳಲ್ಲಿ ಓದುವುದು ಸಾಧ್ಯವಿದೆ.

ಹಳ್ಳಿಯೊಂದರ ಮನೆಗೆ ಅಭ್ಯಾಗತನಾಗಿ ಬರುವ ಕಥಾನಾಯಕ, ಆ ಮನೆಯ ಹೆಣ್ಣುಮಗಳ ಸಾವಿಗೆ ಪರೋಕ್ಷ ಕಾರಣನಾಗುವುದು 'ನಾನು ಕೊಂದ ಹುಡುಗಿ'ಯ ಒಂದು ಸಾಲಿನ ಕಥೆ. ಮನೆಯಲ್ಲಿ ಲವಲವಿಕೆಯಿಂದ ಓಡಾಡುವ ಯುವತಿಯ ಬಗ್ಗೆ ಕಥಾನಾಯಕನ ಪ್ರಾಸಂಗಿಕ ವಿಚಾರಣೆಗೆ ಆಘಾತವಾಗಿ ಪರಿಣಮಿಸಿ, ಆ ಯುವತಿ ಆ ರಾತ್ರಿ ಅವನ ಕೋಣೆಗೆ ಬರುತ್ತಾಳೆ. ಸಖ್ಯ ಬಯಸಿ ಬಂದ ಹೆಣ್ಣನ್ನು ಕಂಡು ಕಥಾನಾಯಕ ತಬ್ಬಿಬ್ಬು. ನೀನು ಮಾಡುತ್ತಿರುವುದು ಸರಿಯಲ್ಲ; ಈ ವಿಷಯ ನಿನ್ನ ಅಪ್ಪ-ಅಮ್ಮನಿಗೆ ತಿಳಿದರೆ ಇಬ್ಬರಿಗೂ ತೊಂದರೆಯಾಗುತ್ತದೆ ಎಂದು ಬುದ್ಧಿ ಹೇಳುತ್ತಾನೆ. ಆಕೆಯ ಪಾಲಿಗದು ವಿಚಿತ್ರ ಸಂದರ್ಭ. ಅದುವರೆಗೆ ಏಕಾಂತದಲ್ಲಿ ಆಕೆಗೆ ಎದುರಾದ ಯಾವ ಗಂಡಸೂ ಹೀಗೆ ವರ್ತಿಸಿದ್ದಿಲ್ಲ. ಅಲ್ಲದೆ, ತಾನು ಮಾಡುತ್ತಿರುವ ಕೆಲಸವನ್ನು ಸೇವೆ-ಕರ್ತವ್ಯವೆಂದು ಆಕೆ ತಿಳಿದಿದ್ದಾಳೆಯೇ ಹೊರತು, ಅದು ಅನೈತಿಕ ಎನ್ನುವ ಸಣ್ಣ ಶಂಕೆಯೂ ಅವಳಿಗಿಲ್ಲ. ಅತಿಥಿಗಳನ್ನು ತೃಪ್ತಿಪಡಿಸುವುದು ತನ್ನ ಕರ್ತವ್ಯವೆಂದು ಆಕೆಯೂ ನಂಬಿದ್ದಾಳೆ; ಮಗಳನ್ನು ದೇವದಾಸಿಯನ್ನಾಗಿಸಿದ ತಂದೆಯೂ ನಂಬಿದ್ದಾನೆ. ಆ ನಂಬಿಕೆಯನ್ನೇ ಕಥಾನಾಯಕ ಪ್ರಶ್ನಿಸುತ್ತಿದ್ದಾನೆ. ಏನಾದರೂ ಮಾಡಿ ಅವಳು ಮಾಡುತ್ತಿರುವ ಕೆಲಸ ಬಹಳ ಕೆಟ್ಟದ್ದು- ಬಹಳ ನೀಚವಾದದ್ದು- ಬಹಳ ಪಾಪಕೃತ್ಯದ್ದು- ಎಂದು ಅವಳ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಹೇಳಲು ಪ್ರಯತ್ನಿಸುತ್ತಾನೆ. ಪತಿವ್ರತಾ ಧರ್ಮದ ಬಗ್ಗೆ ಉಪನ್ಯಾಸ ನೀಡುತ್ತಾನೆ. ಅದರ ಫಲವಾಗಿ, ತಾನು ಅವರೆಗೂ ಮಾಡುತ್ತಿದ್ದುದು ಸೇವೆಯಲ್ಲ- ಹಾದರ ಎನ್ನುವ ಅರಿವು ಮತ್ತು ಪಾಪಪ್ರಜ್ಞೆಯಿಂದ ತತ್ತರಿಸುವ ಯುವತಿ ಬಾವಿಗೆ ಬಿದ್ದು ಬದುಕನ್ನು ಕೊನೆಗಾಣಿಸಿಕೊಳ್ಳುತ್ತಾಳೆ. ಇದಿಷ್ಟು ಕಥೆ.

ಕಥೆಯನ್ನು ಓದಿದ ಯಾರಿಗಾದರೂ ಕಥಾನಾಯಕಿ ಚೆನ್ನಿಯ ಬಗ್ಗೆ ಅನುಕಂಪ ಮೂಡುತ್ತದೆ. ಹಾಗೆಯೇ, ಅವಳ ಸಾವಿಗೆ ಪರೋಕ್ಷವಾಗಿ ಕಾರಣನಾಗಿ, ಪಾಪಪ್ರಜ್ಞೆ ಅನುಭವಿಸುವ ಕಥಾನಾಯಕನ ಬಗ್ಗೆಯೂ ಸಹಾನುಭೂತಿ ಉಂಟಾಗುತ್ತದೆ. ಆದರೆ, ಕಥೆಯೊಳಗಿನ ವಿವರಗಳು ಅಷ್ಟು ಸರಳವಾಗಿಲ್ಲ.

ಓದುಗರ ಕಣ್ಣಿಗೆ ಕಥಾನಾಯಕ ಸುಸಂಸ್ಕೃತನಂತೆ ಹಾಗೂ ಪತ್ನಿಯನ್ನಲ್ಲದೆ ಬೇರೆ ಯಾರನ್ನೂ ಮೋಹಿಸದ ವ್ಯಕ್ತಿಯಂತೆ ಕಾಣಿಸುತ್ತಾನೆ. ಆದರೆ, ಮೇಲ್ನೋಟದ ವ್ಯಕ್ತಿತ್ವಕ್ಕೆ ತಕ್ಕಂತೆ ಅವನ ಮಾತು ಮತ್ತು ವರ್ತನೆಯಿಲ್ಲ. ಚೆನ್ನಿಯ ಮುಗ್ಧ ನಗುವನ್ನು ಕಂಡಾಗ, 'ಪಟ್ಟಣಗಳಲ್ಲಿ ಯುವತಿಯರ ಮಂದಹಾಸವನ್ನು ಅನೇಕ ಸಂದರ್ಭಗಳಲ್ಲಿ ನೋಡಿದ್ದೇನೆ. ಆದರೆ ಅದು ಸಾಧಾರಣವಾಗಿ ದೊಡ್ಡ ದೊಡ್ಡ ಮರಗಳನ್ನುರುಳಿಸಿ ಧೂಳೆಬ್ಬಿಸುವ ಬಿರುಗಾಳಿಯಂತೆ, ಮನಸ್ಸಿನಲ್ಲಿ ಗರ್ಜಿಸುವ ಅಲೆಗಳನ್ನೆಬ್ಬಿಸಿ ಅಲ್ಲೋಲ ಕಲ್ಲೋಲ ಮಾಡುವ ಮುಗುಳ್ನಗೆ. ಚೆನ್ನಮ್ಮನ ಮುಗುಳ್ನಗೆ ಅಂತಹುದಲ್ಲ. ಅದು, ಮೃದುವಾಗಿ ಅಲ್ಲಿ ಸುಳಿದು ಇಲ್ಲಿ ಸುಳಿದು, ಚಿಗುರುಗಳಲ್ಲಿ ತೂರಿ, ಹೂಗೊಂಚಲನ್ನು ಹಾಯ್ದು, ಪರಿಮಳವನ್ನು ಹೊತ್ತು ತರುವ ತಂಗಾಳಿಯಂತೆ, ಹೃದಯದಲ್ಲಿ ಚಿಕ್ಕ ಚಿಕ್ಕ ತರಂಗ ಮಾಲೆಗಳನ್ನು ಹುಟ್ಟಿಸುವ ಸರಳವಾದ ಮುಗುಳ್ನಗೆ' ಎಂದು ಯೋಚಿಸುತ್ತಾನೆ. ಪೂರ್ವಗ್ರಹ ಮತ್ತು ಭಾವುಕತೆ ಬೆರೆತ ಮಾತುಗಳಿವು. ಈ ಪೂರ್ವಗ್ರಹ ಅಪ್ರಜ್ಞಾಪೂರ್ವಕವಾದುದೋ, ಆಕಸ್ಮಿಕವಾದುದೋ ಅಲ್ಲ. ನಿರೂಪಕ, ನಗರ ನಾಗರಿಕತೆಯನ್ನು ಶ್ರೇಷ್ಠವೆಂದು ಬಗೆದವನು; ಅದೇ ಕಾಲಕ್ಕೆ ಹೆಣ್ಣುಮಕ್ಕಳ ನಡವಳಿಕೆ ಬಗ್ಗೆ ಪೂರ್ವಗ್ರಹಪೀಡಿತ.

ತೋಟದ ಬಾವಿಯ ದಂಡೆಯಲ್ಲಿ ಕುಳಿತು ಕೊಳಲನುದುವ ನಿರೂಪಕ, ಚೆನ್ನಿ ಅಲ್ಲಿಗೆ ಬಂದಾಗ ಅನಗತ್ಯವಾಗಿ ನಾಚಿಕೊಳ್ಳುತ್ತಾನೆ. ನಾನು ಪಟ್ಟಣದ ನಾಗರಿಕನೆಂದು ಇವರು ಗೌರವವನ್ನಿಟ್ಟು ಕೊಂಡಿದ್ದಾರೆ. ಈಗ ನಾನು ಗೊಲ್ಲರ ಹುಡುಗನಂತೆ ಕೊಳಲೂದುತ್ತಾ ಬಾವಿಗೆ ಬಂದಂತೆ ಅವರು ತಿಳಿದರೆ ಏನನ್ನಬೇಕು ಎಂದುಕೊಳ್ಳುತ್ತಾನೆ. ಮರಡಿ ಬೆಟ್ಟದಿಂದ ಹಿಂತಿರುಗುವಾಗ ಗೊಲ್ಲರ ಹುಡುಗನೊಬ್ಬ ಲಾವಣಿ ಹಾಡುವುದನ್ನು ನೋಡಿ: ಅವನಿಗೆ ಯಾರದ್ದೇನು ಹೆದರಿಕೆ? ಎಂದು ಯೋಚಿಸುತ್ತಾನೆ. ಪಟ್ಟಣದ ನಾಗರಿಕತೆ ಶ್ರೇಷ್ಠವಾದುದೆಂದು ಬಿಂಬಿಸುವ ಈ ಮಾತುಗಳು, ನಾಗರಿಕತೆ ಮತ್ತು ಅನಾಗರಿಕತೆಯ ಕಲ್ಪನೆಯಲ್ಲಿ ಗ್ರಹಿಕೆಯೂ ಹೌದು.

ಚೆನ್ನಮ್ಮನ ವ್ಯಕ್ತಿತ್ವವನ್ನು ತಿಳಿಸುವ ಅಳಿನ ವರ್ತನೆಯನ್ನು ನೋಡಿ, 'ಲಕ್ಷ್ಮಿಯನ್ನು ಬಿಟ್ಟು ನನ್ನ ಜೀವನ ಇಲ್ಲವೆಂದು ಈ ಮುಖ್ಯಳನು ತಿಳಿಯುವುದು ಹೇಗೆ?' ಎಂದು ಕಥಾನಾಯಕ ಯೋಚಿಸುತ್ತಾನೆ. ಪದೇ ಪದೇ ತನ್ನ ಚಾರಿತ್ರ್ಯದ ಬಗ್ಗೆ ಹೇಳಿಕೊಳ್ಳುವ ಹಂಬಲ ಅವನದು. ಚಾರಿತ್ರ್ಯದ ಬಗ್ಗೆ ಬಹಳಷ್ಟು ಯೋಚಿಸುವ ಈ ವ್ಯಕ್ತಿ, ಯಾವುದೇ ಲಜ್ಜೆಯಿಲ್ಲದೆ ಚೆನ್ನಮ್ಮನ ಫೋಟೋಗಳನ್ನು ತೆಗೆದು, ಅವುಗಳ ಪ್ರತಿ ತೆಗೆದು ಮನೆಯವರಿಗೆ ಕೊಡುತ್ತಾನೆ. ಅಷ್ಟು ಮಾತ್ರವಲ್ಲ, ಅವಳ ಸೌಂದರ್ಯ, ಬಿಗಿದ ಮೈಕಟ್ಟನ್ನು ಗಮನಿಸುತ್ತಾನೆ.

ವರ್ತಮಾನದ ಜಗತ್ತಿನಲ್ಲಿ ಹೆಣ್ಣಿನ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಲು ಕೈಗನ್ನಡಿಯಂತೆ ಒದಗುವ ಕಥೆ ಆನಂದರ 'ನಾನು ಕೊಂದ ಹುಡುಗಿ.' ಎಲ್ಲವನ್ನೂ ಪ್ರಭಾವಿಸುವ ಕಾಲದ ಚಲನಶೀಲತೆಗೆ, ಹೆಣ್ಣನ್ನು ಮಾನಸಿಕವಾಗಿಯೂ ದೈಹಿಕವಾಗಿಯೂ ಗಾಸಿಗೊಳಿಸುವ ಗಂಡಿನ ಮನೋಭಾವದಲ್ಲಿ ವ್ಯತ್ಯಾಸ ತರುವುದಕ್ಕೆ ಸಾಧ್ಯವಾಗಿಲ್ಲ.

ಚೆನ್ನಮ್ಮ ಕೊಠಡಿಯೊಳಕ್ಕೆ ಬಂದಾಗ ನಿರೂಪಕ ತನ್ನ ಬಗ್ಗೆ ಹೇಳಿಕೊಳ್ಳುವ ಮಾತುಗಳು ಸ್ವಾನುಕಂಪದಿಂದ ಕೂಡಿರುವಂತಹವು. 'ಅವಳು ಬಾಗಿಲು ಹಾಕಿದ್ದನ್ನು ನೋಡಿ ಇದ್ದಕ್ಕಿದ್ದ ಹಾಗೆಯೇ ನನ್ನ ಮೈ ನಡುಗಿ ಬಿಸಿಯಾಯಿತು. ಬೆವರು ಮುಖದ ಮೇಲೆಲ್ಲಾ ಮೂಡಿತು. ಗಂಟಲು ಒಣಗಿ ಉಗುಳು ನುಂಗತೊಡಗಿದೆ.' ಸ್ವಯಂ ನಿಯಂತ್ರಣವಿಲ್ಲದ ಆತ, ಪತ್ನಿಯನ್ನು ನೈತಿಕ ಗುರಾಣಿಯಂತೆ ಬಳಸಿಕೊಂಡು ಸಂದರ್ಭವನ್ನು ನಿಭಾಯಿಸಲು ಪ್ರಯತ್ನಿಸುತ್ತಾನೆ. 'ಆ ದಿನ ರಾತ್ರಿ ಪಾಪದ ಬಲೆಯಿಂದ ತಪ್ಪಿಸಿ ರಕ್ಷಿಸಿದವಳು ನನ್ನ ಲಕ್ಷ್ಮಿ. ಅವಳ ಪ್ರೇಮವೆಂಬ ಕೋಟೆ ನನ್ನನ್ನು ಸಂಪೂರ್ಣ ಆವರಿಸಿತ್ತು' ಎನ್ನುವ ನಾಯಕನ ಮಾತು, ಆತನಿಗೆ ಮದುವೆ ಆಗದೆ ಇದ್ದಿದ್ದರೆ ಎನ್ನುವ ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ. ನಾಯಕನಲ್ಲಿನ ದ್ವಂದ್ವಗಳಿಂದಾಗಿಯೇ, ಆತನ ತಳಮಳವನ್ನು ಪಾಪಪ್ರಜ್ಞೆಯಷ್ಟೇ ಆಗಿ ನೋಡುವುದು ಕಷ್ಟ. ಸೂಕ್ಷ್ಮವಾಗಿ ನೋಡಿದರೆ, ಅದು ಪಾಪಕೃತ್ಯವೇ ಆಗಿದೆ.

'ನಾನು ಕೊಂದ ಹುಡುಗಿ'ಯಲ್ಲಿನ ಕೊಲೆ ಎರಡು ಬಗೆಯದು. ಒಂದು, ದೇವದಾಸಿ ಕಾಯಕದಲ್ಲಿ ತೊಡಗಿಕೊಂಡಿದ್ದ ಯುವತಿಯನ್ನು ಪಾಪಪ್ರಜ್ಞೆಗೆ ಒಳಗಾಗುವಂತೆ ಮಾಡಿ ಅವಳು ತನ್ನನ್ನು ತಾನು ಕೊಂದುಕೊಳ್ಳುವಂತೆ ಮಾಡುವುದು. ಇದು, ನಿರೂಪಕ ಅಪ್ರಜ್ಞಾಪೂರ್ವಕವಾಗಿ ದುರಂತಕ್ಕೆ ಕಾರಣ ಕರ್ತನಾಗುವ ನಡವಳಿಕೆ. ಎರಡನೆಯದು, ಯುವತಿಯ ಬದುಕಿನಲ್ಲಿನ ಅನೈತಿಕತೆಯನ್ನು ಅವಳಿಗೆ ಮನವರಿಕೆ ಮಾಡಿಕೊಡುವ ಭರದಲ್ಲಿ, ಹೆಣ್ಣೆಂದರೆ ಹೇಗಿರಬೇಕು ಎಂದು ನಾಯಕ ಪ್ರತಿಪಾದಿಸುವ ವಿಚಾರಗಳು. ಲಿಂಗ ಸಮಾನತೆಯ ಮೀಮಾಂಸೆ ಬಹು ಗಟ್ಟಿಯಾಗಿ ಬೆಳೆದಿರುವ ಸಂದರ್ಭದಲ್ಲಿ, ಕಥೆಯಲ್ಲಿನ ಸಂಗತಿಗಳೀಗ ಪ್ರತಿಗಾಮಿ ವಿಚಾರಗಳಾಗಿ ಕಾಣಿಸುತ್ತವೆ. ಪಾತಿವ್ರತ್ಯ ಹಾಗೂ ಚಾರಿತ್ರ್ಯದ ಕುರಿತ ವಿಚಾರಗಳು, ಪಾತ್ರದ ಪೂರ್ವಗ್ರಹವಷ್ಟೇ ಆಗಿರದೆ, ಒಟ್ಟು ಗಂಡುಕುಲದ ಪೂರ್ವಗ್ರಹವಾಗಿರುವ ಸಾಧ್ಯತೆಗಳೂ ಇವೆ.

ಕಥಾನಾಯಕಿ ಚೆನ್ನಮ್ಮನಿಗೆ, ಆಕೆ ಸೇವೆಯೆಂದು ನಂಬಿರುವುದು ಸೇವೆಯಾಗಿರದೆ ಮೌಢ್ಯವಾಗಿದೆ ಎನ್ನುವುದನ್ನು ಮನವರಿಕೆ ಮಾಡಿಕೊಡುವುದು ಹಾಗೂ ಆಕೆ ಶೋಷಣೆಗೆ ಒಳಗಾಗುತ್ತಿದ್ದಾಳೆ ಎನ್ನುವ ಅರಿವು ಮೂಡಿಸುವುದು ಕಥಾನಾಯಕನ ಕರ್ತವ್ಯವಾಗಿತ್ತು. ಆ ಮನವರಿಕೆಯ ಪ್ರಯತ್ನ ಆಕೆಯಲ್ಲಿ ಪಾಪಪ್ರಜ್ಞೆಗೆ ಕಾರಣವಾಗದೆ, ಅರಿವಿಗೆ ಹಾಗೂ ಹೊಸ ಬದುಕಿಗೆ ಪ್ರೇರಣೆಯಾಗಬೇಕಿತ್ತು. ಆದರೆ, ಕಥಾನಾಯಕ ಆಡುವ ಮಾತುಗಳು ಚೆನ್ನಿಯಲ್ಲಿ ಬದುಕುವ ಹಕ್ಕನ್ನೇ ಕಳೆದುಕೊಂಡಂತಹ ಪಾಪಪ್ರಜ್ಞೆ ಮೂಡಿಸುವುದರ ಜೊತೆಗೆ, ತಾನು ಹೆಣ್ಣೇ ಅಲ್ಲ ಅಥವಾ ಹೆಣ್ಣಿನ ಗುಣ ಅರ್ಹತೆಗಳು ತನ್ನಲ್ಲಿಲ್ಲ ಎನ್ನುವ ನಿಲುವಿಗೆ ಬರಲು ಒತ್ತಾಯಿಸುವಂತಿವೆ. ಇದು, ಸುಧಾರಣೆಯ ಆಶಯದ ಬರಹವೊಂದು ತನಗೆ ತಿಳಿಯದಂತೆಯೇ ಮಾಡಬಹುದಾದ ಅಪಾಯಕ್ಕೆ ಉದಾಹರಣೆಯಂತಿದೆ.

ಚೆನ್ನಮ್ಮ ಓದಿದವಳಲ್ಲ. ಮಗಳನ್ನು ದೇವದಾಸಿಯನ್ನಾಗಿಸಿದ ಅವಳ ತಂದೆಯೂ ಓದಿದವನಲ್ಲ. ಮಗನನ್ನು ಪಡೆಯುವುದಕ್ಕಾಗಿ ಮಗಳನ್ನು ದೇವರಿಗೆ ಮೀಸಲಿಡುವ ಹರಕೆ ಕಟ್ಟಿಕೊಂಡವನು. ಚೆನ್ನಮ್ಮನ ಬದುಕಿನ ದುರಂತಕ್ಕೆ ಅವಳ ಅನಕ್ಷರತೆಯೂ ಕಾರಣವಾಗಿದೆ. ಹಾಗಾದರೆ, ಅಕ್ಷರದ ಆಸರೆ ಹೆಣ್ಣನ್ನು ಸಬಲಳನ್ನಾಗಿಸುತ್ತದೆ ಎಂದು ನಂಬಿರುವ ವರ್ತಮಾನದಲ್ಲಿ ಹೆಣ್ಣು ಸುರಕ್ಷಿತಳಾಗಿದ್ದಾಳೆಯೇ? ಮನೆ, ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಧಾರ್ಮಿಕ ಸ್ಥಳ – ಎಲ್ಲಿಯಾದರೂ ಹೆಣ್ಣು ಸುರಕ್ಷಿತಳು ಎಂದು ಹೇಳುವುದು ನಮಗೆ ಸಾಧ್ಯವಿದೆಯೆ?

'ನಾನು ಕೊಂದ ಹುಡುಗಿ'ಯ ಕುರಿತಾದ ಈ ಟಿಪ್ಪಣಿ, ಕಥೆಯ ಮಿತಿಗಳನ್ನು ಅಥವಾ ಕಥೆಗಾರರ ಮಿತಿಗಳನ್ನು ಗುರ್ತಿಸುವ ಪ್ರಯತ್ನವಲ್ಲ. ಆನಂದರು ಬರೆದ ಕಾಲಕ್ಕೆ ಕಥೆಯಲ್ಲಿನ ವಿಚಾರಗಳು ಸಮಕಾಲೀನವೂ ಪ್ರಸ್ತುತವೂ ಆಗಿದ್ದಿರಬಹುದು. ಕಾಲದ ಜೊತೆಗೆ ನಮ್ಮ ಚಿಂತನೆಗಳ ಧಾಟಿ ಬದಲಾಗುತ್ತಾ ಹೋದಂತೆ, ಹಳೆಯ ಕೃತಿಗಳ ಮರು ಓದು ಸಮಕಾಲೀನ ವಿದ್ಯಮಾನಗಳು, ವಿಚಾರಗಳನ್ನು ಅರ್ಥ ಮಾಡಿಕೊಳ್ಳಲು ಬೆಳಕಿಂಡಿಗಳನ್ನು ತೆರೆಯಬಹುದು; ಹಾಗೆಯೇ, ಒಬ್ಬ ಬರಹಗಾರ ಅಥವಾ ಸಹೃದಯಿ ತನ್ನ ಸಂವೇದನೆಗಳನ್ನು ಒರೆಗೆ ಹಚ್ಚಿಕೊಳ್ಳಲು ಪ್ರೇರಣೆಯನ್ನೂ ನೀಡಬಹುದು. ಆನಂದರ ಕಥೆಯ ಶೀರ್ಷಿಕೆ ಹಾಗೂ ವಿವರಗಳು ಈ ಹೊತ್ತಿನ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಲು ನಮಗೆ ಕೆಲವು ಹೊಳಹುಗಳನ್ನು ಕರುಣಿಸುತ್ತಿವೆ.

'ನಾನು ಕೊಂದ ಹುಡುಗಿ' ಎನ್ನುವುದು ಕಥೆಯ ಶೀರ್ಷಿಕೆಯಷ್ಟೇ ಅಲ್ಲ ಹಾಗೂ ಸಾವಿಗೀಡಾದ ಹುಡುಗಿ ಕಥೆಯ ಪಾತ್ರವಷ್ಟೇ ಅಲ್ಲ. ಶಿಕ್ಷಣಜ್ಞಾನವುಳ್ಳ ವ್ಯಕ್ತಿ, ತನ್ನ ಮೇಲರಿಮೆಯನ್ನು ಯುವತಿಯ ಮೇಲೆ ಹೇರಿ ಕೊಲ್ಲುವ ಕಥೆ, ಈ ಹೊತ್ತಿನ ವಾಸ್ತವದ ವ್ಯಾಖ್ಯಾನವೂ ಹೌದು. ಆಧುನಿಕತೆಯ ಓಟದಲ್ಲಿ ಸಾಕಷ್ಟು ದೂರ ಸಾಗಿಬಂದಿದ್ದರೂ ಹೆಣ್ಣಿನ ಕುರಿತ ನಮ್ಮ ಧೋರಣೆ ಆನಂದರ ಕಥೆಯ ನಾಯಕನಿಗಿಂತಲೂ ಹೆಚ್ಚು ಭಿನ್ನವೇನೂ ಆಗಿಲ್ಲ. ಹೆಣ್ಣಿನ ಅಭಿವ್ಯಕ್ತಿಗೆ ಮಿತಿಗಳನ್ನು ಕಲ್ಪಿಸುವ ಹಾಗೂ ಆಕೆಗೆ ಚಾರಿತ್ರ್ಯವನ್ನು ಆರೋಪಿಸುವ ಗಂಡು ಮನೋಭಾವ ಸಾಮಾಜಿಕ ಮಾಧ್ಯಮಗಳ ಸಂದರ್ಭದಲ್ಲೂ ಬದಲಾಗಿಲ್ಲ. ತನ್ನನ್ನು ಕೊಂದುಕೊಂಡ ಚೆನ್ನಿ ವರ್ತಮಾನದಲ್ಲೂ ಬೇರೆ ಬೇರೆ ರೂಪದಲ್ಲಿ ಸಾಯುತ್ತಿದ್ದಾಳೆ. ಸತ್ಯ ಇಷ್ಟೇ: ಹೆಣ್ಣನ್ನು ಕೊಲ್ಲುವ ಕ್ರಿಯೆ ಮುಂದುವರೆದಿದೆ – ಮಾನಸಿಕವಾಗಿಯೂ ದೈಹಿಕವಾಗಿಯೂ. ಆದರೆ, ಕಥಾನಾಯಕ ತನ್ನ ಕೃತ್ಯಕ್ಕೆ ಮರುಗುವುದು ಹಾಗೂ ಪಾಪಪ್ರಜ್ಞೆಯಿಂದ ನರಳುವುದು (ಆ ಪಾಪಪ್ರಜ್ಞೆಗೆ ಸಕಾರಣಗಳಿಲ್ಲದಿದ್ದರೂ) ಕಥೆಯಲ್ಲಷ್ಟೇ ಸತ್ಯ ಎನ್ನುವ ಸ್ಥಿತಿ ವರ್ತಮಾನದ್ದು.

ವಾಚಕರ ವಾಣಿ

ಹೆಚ್ಚುವರಿ ಪಿ.ಎಫ್ ಕಡಿತ: ನಿರ್ಬಂಧ ಬೇಡ

ಕೇಂದ್ರದಲ್ಲಿ ಯು.ಪಿ.ಎ ಸರ್ಕಾರವಿದ್ದಾಗ ಕಾರ್ಮಿಕರ ಭವಿಷ್ಯನಿಧಿಯಲ್ಲಿ ಸ್ಟ್ಯಾಂಡರ್ಡ್ ಡಿಡಕ್ಷನ್ ಶೇ 12ರಷ್ಟು ಹೊರತುಪಡಿಸಿ, ಹೆಚ್ಚುವರಿಯಾಗಿ ಶೇ 70ರವರೆಗೂ ಸ್ವಯಂಪ್ರೇರಿತವಾಗಿ ಕಡಿತಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಆ ಅವಕಾಶ ಬಳಸಿಕೊಂಡು ಬಹಳಷ್ಟು ಉದ್ಯೋಗಿಗಳು ತಿಂಗಳ ವೇತನದಲ್ಲಿ ಮನೆಯ ಖರ್ಚಿಗೆ ಎಷ್ಟು ಬೇಕೋ ಅಷ್ಟು ಉಳಿಸಿಕೊಂಡು ಉಳಿದ ಹಣವನ್ನು ಭವಿಷ್ಯನಿಧಿಗೆ ನೀಡುತ್ತಿದ್ದರು. ಆ ಹಣಕ್ಕೆ ಉತ್ತಮ ಬಡ್ಡಿಯೂ ಸಿಗುತ್ತಿತ್ತು.

ಪ್ರಸ್ತುತ ಎನ್‌ಡಿಎ ನೇತೃತ್ವದ ಬಿಜೆಪಿ ಸರ್ಕಾರ ಈ ಮಿತಿಯನ್ನು ಶೇ 20ಕ್ಕೆ ಇಳಿಸಿದೆ. ಇದರಿಂದ ಉದ್ಯೋಗಿಗಳ ಉಳಿತಾಯದ ಅವಕಾಶ ತಪ್ಪಿಹೋಗಿದೆ. ಅಪಾಯ ಇರುವ ಕಡೆ ಹಣ ಹೂಡಿಕೆ ಮಾಡಿ ಕಳೆದುಕೊಳ್ಳುತ್ತಿದ್ದಾರೆ. ಭವಿಷ್ಯನಿಧಿಯಲ್ಲಿ ಈ ಹಿಂದೆ ಹೇಗೆ ಹೆಚ್ಚುವರಿಯ ಕಡಿತಕ್ಕೆ ಅವಕಾಶವಿತ್ತೋ ಅದನ್ನು ಪುನಃ ಜಾರಿಗೊಳಿಸಿದರೆ ಉದ್ಯೋಗಿಗಳಿಗೆ ಉಳಿತಾಯ ಮಾಡಲು ಅನುಕೂಲವಾಗಲಿದೆ.

ಜಿ.ಎಸ್. ಗೋಪಾಲ ನಾಯ್ಕ, ಬೆಂಗಳೂರು

ರಾಜ್ಯದಲ್ಲಿ 'ಸಂಸದ ರತ್ನ'ರಿಲ್ಲವೇ?

ಲೋಕಸಭೆಯಲ್ಲಿ ಉತ್ತಮ ಸಾಧನೆಗೈದ 17 ಸಂಸದರಿಗೆ 'ಸಂಸದ ರತ್ನ' ಪ್ರಶಸ್ತಿ ನೀಡಲಾಗಿದೆ (ಪ್ರ.ವಾ., ಜುಲೈ 27). ಮೂರು ಅವಧಿ ಪೂರೈಸಿರುವ ಮತ್ತು ಹೊಸಬರು ಸೇರಿ ಕರ್ನಾಟಕದ 28 ಸಂಸದರ ಪೈಕಿ ಒಬ್ಬರೂ 'ರತ್ನ'ರಾಗಿಲ್ಲ! ಪರಂತು, ಇವರಲ್ಲಿ ಒಬ್ಬರಿಗಾದರೂ 'ಸಂಸದ ರತ್ನ'ರಾಗುವ ಯೋಗ್ಯತೆ, ಸಾಮರ್ಥ್ಯ ಇಲ್ಲವೆಂದು ಭಾವಿಸೋಣವೇ? 'ನಮ್ಮ ಸಂಸದರು'- 'ತಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ ನೀಡಿದ ಸುಸ್ಥಿರ ಕೊಡುಗೆಗಳು' ಹಾಗೂ 'ಸಂಸದೀಯ ಬದ್ಧತೆ- ಉತ್ತರದಾಯಿತ್ವ' ಅವರಿಗೆ ಇಲ್ಲವೇ? ಇಲ್ಲವೆಂದ ಮೇಲೆ ಅವರ ಬದುಕು 'ಸಾರ್ಥಕ'ವಲ್ಲ; ನಿರರ್ಥಕ!

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ಪೊಲೀಸ್ ಸಿಬ್ಬಂದಿಗೆ ಅನ್ಯಾಯ

ಪೊಲೀಸ್ ಸಿಬ್ಬಂದಿಗೆ 'ವಿಶೇಷ ಕರ್ತವ್ಯ ಆಹಾರ ಭತ್ಯೆ' (ಹೊರ ಜಿಲ್ಲಾ ಬಂದೋಬಸ್ತ್) ಎಂದು ದಿನವೊಂದಕ್ಕೆ ₹300 ನೀಡಲಾಗುತ್ತಿದೆ. ಆದರೆ, ನಿಜವಾಗಿಯೂ ಈ ಮೊತ್ತಕ್ಕೆ ಗುಣಮಟ್ಟದ ಆಹಾರ ದೊರಕುತ್ತದೆಯೇ? ಕರ್ತವ್ಯಕ್ಕೆ ನಿಯೋಜನೆಗೊಂಡಾಗ ಪೊಲೀಸರಿಗೆ ಕೊಡುವುದು ಚಿತ್ರಾನ್ನ ಅಥವಾ ತರಕಾರಿ ಪಲಾವ್ ಹೆಸರಿನ ಬಣ್ಣದ ಅನ್ನ. ಹಿರಿಯ ಅಧಿಕಾರಿಗಳು, ಸಿಬ್ಬಂದಿ ಹೆಸರಿನಲ್ಲಿ ಆಹಾರಭತ್ಯೆಯ ಬಿಲ್ ಅನ್ನು ಸರ್ಕಾರಕ್ಕೆ ಸಲ್ಲಿಸಿ ಹಣ ಡ್ರಾ ಮಾಡಿಕೊಳ್ಳುತ್ತಾರೆ.

ಆಹಾರಭತ್ಯೆಯ ಹಣ ಪೊಲೀಸರಿಗೆ ದೊರಕದೆ ಹಿರಿಯ ಪೊಲೀಸ್ ಅಧಿಕಾರಿಗಳ ಕಿಸೆ ಸೇರುತ್ತಿದೆ. ಸರ್ಕಾರವು ಈ ಭತ್ಯೆಯ ಮೊತ್ತವನ್ನು ಸಿಬ್ಬಂದಿಯ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಿದರೆ ಅವರು ಗುಣಮಟ್ಟದ ಆಹಾರ ಪಡೆಯಲು ಅನುಕೂಲವಾಗಲಿದೆ.

ಜಗದೀಶ, ಬೆಂಗಳೂರು

ನಿಷ್ಕ್ರಿಯ ಸಂಪರ್ಕ ಸಂಖ್ಯೆ

ವಿದ್ಯಾರ್ಥಿ ವೇತನ ಕುರಿತ ಮಾಹಿತಿ ಪಡೆಯಲು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್‌ನಲ್ಲಿ 1902, 9008400010 ಮತ್ತು 9008400078 ಸಂಪರ್ಕ ಸಂಖ್ಯೆ ಪ್ರಕಟಿಸಲಾಗಿದೆ. ಈ ಸಂಖ್ಯೆಗೆ ದೂರವಾಣಿ ಕರೆ ಮಾಡಿದರೆ ಅಸ್ತಿತ್ವದಲ್ಲಿ ಇಲ್ಲವೆಂಬ ಪ್ರತಿಕ್ರಿಯೆ ಬರುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಯ ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿ ವೇತನ, ಕುಂದುಕೊರತೆ ಹಂಚಿಕೊಳ್ಳಲು ನಮೂದಿಸಿರುವ ಸಂಪರ್ಕ ಸಂಖ್ಯೆಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಸಂಪರ್ಕ ಸಂಖ್ಯೆಗಳು ನಿಷ್ಕ್ರಿಯವಾಗಿದ್ದರೆ, ತೆಗೆದುಹಾಕಿ ಚಾಲ್ತಿಯಲ್ಲಿರುವ ಹೊಸ ಸಂಪರ್ಕ ಸಂಖ್ಯೆಯನ್ನು ನಮೂದಿಸಬೇಕಿದೆ.

ಅಶೋಕ ಎನ್.ಎಚ್., ಕೋಲಾರ

ಇನ್ನೆಷ್ಟು ಮಕ್ಕಳು ಬಲಿಯಾಗಬೇಕು?

ರಾಜಸ್ಥಾನದ ಝಾಲಾವಾಢ ಎಂಬಲ್ಲಿ ಸರ್ಕಾರಿ ಶಾಲೆಯ ಚಾವಣಿ ಕುಸಿದು ಏಳು ವಿದ್ಯಾರ್ಥಿಗಳು ಮೃತಪಟ್ಟಿರುವುದು ನೋವಿನ ಸಂಗತಿ. ದೇಶದಲ್ಲಿ ಶಿಕ್ಷಣಕ್ಕೆ ಎಷ್ಟರ ಮಟ್ಟಿಗೆ ಪ್ರಾಮುಖ್ಯ ನೀಡಿದ್ದೇವೆ ಎನ್ನುವುದಕ್ಕೆ ಈ ಅವಘಡ ಕನ್ನಡಿ ಹಿಡಿದಿದೆ. ಕರ್ನಾಟಕದಲ್ಲೂ ಶಾಲೆಗಳ ಸ್ಥಿತಿ ಉತ್ತಮವಾಗಿದೆ ಎಂದು ಹೇಳುವಂತಿಲ್ಲ. 2019ರಲ್ಲಿ ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥಶೆಟ್ಟಿ ಅವರು ರಾಜ್ಯದ 11 ಜಿಲ್ಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ಆರು ತಿಂಗಳೊಳಗೆ ದುರಸ್ತಿಪಡಿಸುವಂತೆ ಸರ್ಕಾರಕ್ಕೆ ಸೂಚಿಸಿದ್ದರು. ಆದರೂ, ಪರಿಸ್ಥಿತಿ ಸುಧಾರಿಸಿಲ್ಲ.

ಎ.ಜೆ. ಜಾವೀದ್, ಹಾಸನ

ಯೂರಿಯಾ: ಸಂಸದರ ಮೌನವೇಕೆ?

ರಾಜ್ಯದಲ್ಲಿ ಈ ಬಾರಿ ಉತ್ತಮವಾಗಿ ಮಳೆ ಸುರಿದರೂ ಯೂರಿಯಾ ರಸಗೊಬ್ಬರ ಸಿಗದೆ ರೈತರು ಪರದಾಡುವಂತಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಅವರು, ಕೇಂದ್ರ ರಸಗೊಬ್ಬರ ಸಚಿವರಿಗೆ ಪತ್ರವನ್ನೂ ಬರೆದಿದ್ದಾರೆ. ಇದು ಕೇವಲ ಮುಖ್ಯಮಂತ್ರಿ ಅವರ ಕರ್ತವ್ಯವೇ? ರಾಜ್ಯದಿಂದ ಆಯ್ಕೆಯಾಗಿರುವ 28 ಸಂಸದರಿಗೆ ಇದರ ಹೊಣೆಗಾರಿಕೆ ಇಲ್ಲವೇ? ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು ಏನು ಮಾಡುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ. ಇವರಲ್ಲಿ ಯಾರೂ ರಾಜ್ಯದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದಿಲ್ಲ. ತಮಿಳುನಾಡಿನ ಸಂಸದರು ಭಾಷೆಯ ವಿಚಾರ ಬಂದಾಗ ಸ್ವಹಿತಾಸಕ್ತಿ ಬದಿಗೊತ್ತಿ ಒಟ್ಟುಗೂಡುವುದನ್ನು ನೋಡಿ ನಮ್ಮ ಸಂಸದರು ಕಲಿಯಬೇಕಿದೆ. ಕೇಂದ್ರದ ಮೇಲೆ ಒತ್ತಡ ಹೇರಿ ರಾಜ್ಯದ ಪಾಲಿನ ಯೂರಿಯಾ ಸರಬರಾಜಿಗೆ ಕ್ರಮವಹಿಸಬೇಕಿದೆ.

ಸಂತೋಷ್ ಕುಮಾರ್ ಎಲ್., ಹಿರಿಯೂರು

ಜಾಲಾಡಿ

ರೈತರ ಸಮಸ್ಯೆಗೆ ಪರಿಹಾರ ಎಲ್ಲಿ?

ಎಡ, ಮಧ್ಯಮ ಹಾಗೂ ಬಲಪಂಥ ಎಲ್ಲವೂ ರೈತರ ಸಮಸ್ಯೆಗಳನ್ನು ರಚನಾತ್ಮಕವಾಗಿ ಪರಿಹರಿಸಲು ವಿಫಲವಾಗಿವೆ.

ಚೇತನ್ ಅಹಿಂಸಾ, ನಟ
ಫೇಸ್‌ಬುಕ್‌ನಿಂದ



ಕಿಡಿನುಡಿ

ಕರಾವಳಿಯ ತಾಯಂದಿರಿಗೆ ನೆಮ್ಮದಿಯನ್ನು ಯಾವಾಗ ತಂದು ಕೊಡುವುದು? ಅವರ ಮಕ್ಕಳು ಕೊಲೆಯಾಗುತ್ತಿರುವಾಗ ಯಾರು ಉತ್ತರ ಕೊಡುತ್ತಾರೆ? ಇದು ಎಷ್ಟು ಮಂದಿ ತಾಯಂದಿರಿಗೆ ನೋವು ಉಂಟು ಮಾಡುತ್ತಿದೆ ಎಂದು ಆಲೋಚಿಸಿದ್ದೀರಾ?

ಎಲ್.ಎನ್. ಮುಕುಂದರಾಜ್, ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ



25 ವರ್ಷಗಳ ಹಿಂದೆ

ಶುಕ್ರವಾರ, 28-7-2000

- **ತೆಂಗಿನ ಬೆಲೆ ಕುಸಿತ: ರೈತರ ರಕ್ಷಣೆಗೆ ಮನವಿ**

ನವದೆಹಲಿ, ಜುಲೈ 27– ತೆಂಗಿನಕಾಯಿ ಮತ್ತು ಕೊಬ್ಬರಿಯ ಆಮದಿನ ಮೇಲೆ ನಿಯಂತ್ರಣ ಹೇರಿ ಬೆಲೆ ಕುಸಿತದಿಂದಾಗಿ ಸಂಕಷ್ಟಕ್ಕೀಡಾಗಿರುವ ರೈತರನ್ನು ರಕ್ಷಿಸಬೇಕೆಂದು ಕರ್ನಾಟಕ, ತಮಿಳುನಾಡು ಮತ್ತು ಕೇರಳದ ಸಂಸತ್ ಸದಸ್ಯರು ಇಂದು ಕೃಷಿ ಸಚಿವ ನಿತೀಶ್ ಕುಮಾರ್ ಅವರನ್ನು ಭೇಟಿ ಮಾಡಿ ಒತ್ತಾಯಿಸಿದರು.

- **ಬಿಜಲಾನಿ ಮನೆ ಸೇರಿ 8 ಕಡೆ ಆದಾಯ ತೆರಿಗೆ ದಾಳಿ**

ಬೆಂಗಳೂರು, ಜುಲೈ 27– ಕ್ರಿಕೆಟ್ ಮೋಸದಾಟದ ಪ್ರಕರಣದಲ್ಲಿ ತೆರಿಗೆ ವಂಚನೆ ಬಗ್ಗೆ ತನಿಖೆ ನಡೆಸುತ್ತಿರುವ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಇಂದು ನಗರದ ಎಂಟು ಮತ್ತು ಚೆನ್ನೈನ ಎರಡು ಸ್ಥಳಗಳ ಮೇಲೆ ದಾಳಿ ನಡೆಸಿ, ಅಪಾರ ಪ್ರಮಾಣದ ದಾಖಲೆಗಳನ್ನು ಮತ್ತು ಸ್ವತ್ತನ್ನು ವಶಪಡಿಸಿಕೊಂಡಿದ್ದಾರೆ.

ಮೋಸದಾಟದಲ್ಲಿ ಭಾಗಿಯಾದ ಆರೋಪ ಹೊತ್ತಿರುವ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಅಜರುದ್ದೀನ್ ಅವರ ತಾರಾ ಪತ್ನಿ ಸಂಗೀತಾ ಬಿಜಲಾನಿಗೆ ಸೇರಿದ ಮನೆ ಹಾಗೂ ಡೊಮಿನಿಯನ್ ಕ್ಲಬ್ ಮಾಲೀಕ ಸುರೇಶ್ ಜೈನ್ ಅವರಿಗೆ ಸೇರಿದ ಮೂರು ಸ್ಥಳಗಳು ಇದರಲ್ಲಿ ಸೇರಿವೆ. ಆದರೆ, ಇದರಲ್ಲಿ ಯಾವುದೇ ಕ್ರಿಕೆಟ್ ಆಟಗಾರರ ಮನೆ ಸೇರಿಲ್ಲ.

75 ವರ್ಷಗಳ ಹಿಂದೆ

ಶುಕ್ರವಾರ, 28-7-1950

- **ಕಾಲೇಜು ಪ್ರವೇಶಕ್ಕೆ ಜಾತಿ, ಮತ, ಕುಲ ಆಧಾರವಾಗದು**

ಮದರಾಸ್, ಜುಲೈ 27– ಸಂಸ್ಥಾನದ ನಾನಾ ಕಾಲೇಜುಗಳ ಪ್ರವೇಶಕ್ಕೆ ವಿದ್ಯಾರ್ಥಿಗಳನ್ನು ಆರಿಸಲು 'ಮತ, ಕುಲ ಅಥವಾ ಜಾತಿ' ಆಧಾರವಾಗದು ಎಂಬುದಾಗಿ ಮದರಾಸ್ ಶ್ರೇಷ್ಠ ನ್ಯಾಯಸ್ಥಾನದ ಪೂರ್ಣ ಪೀಠ ಇಂದು ತೀರ್ಪು ನೀಡಿತು.

ಮದರಾಸಿನ ಕಾಲೇಜುಗಳಿಗೆ ಪ್ರವೇಶ ಕೊಡುವ ವಿಚಾರದಲ್ಲಿ ಮದರಾಸ್ ಸರ್ಕಾರ ಹೊರಡಿಸಿದ ಕೋಮುವಾರು ಆಜ್ಞೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಇಬ್ಬರು ವಿದ್ಯಾರ್ಥಿಗಳು ಸಲ್ಲಿಸಿದ್ದ, ಮ್ಯಾಂಡಮಸ್ ಅರ್ಜಿಯ ಕುರಿತ ತೀರ್ಪು ಇದಾಗಿದೆ.

ಚುರುಮುರಿ



ಜೈತ್ರಯಾತ್ರೆ

• ಸುಮಂಗಲಾ

'ಬಾಪ್‌ರೇ... ನಮ್ ಮೋದಿ ಮಾಮಾ ರೆಕಾರ್ಡ್ ಮೇಲೆ ರೆಕಾರ್ಡ್ ಮಾಡಾಕ್ತತ್ತಾರೆ!' ಎಂದು ಬೆಕ್ಕಣ್ಣ ರೋಮಾಂಚನದಿಂದ ಉದ್ಗರಿಸಿತು.

'ಇಂದಿರಾ ಗಾಂಧಿ 4,077 ದಿನ ನಿರಂತರವಾಗಿ ಪಿ.ಎಂ ಆಗಿದ್ದರಂತೆ. ಮೋದಿ ಮಾಮಾ ಮೊನ್ನೆ ಶುಭ ಶುಕ್ರವಾರ ಆ ರೆಕಾರ್ಡ್ ಬ್ರೇಕ್ ಮಾಡಿ, 4,078 ದಿನ ನಿರಂತರವಾಗಿ ಪಿ.ಎಂ ಆಗ್ಯಾರೆ...' ಎಂದು ವರ್ಣಿಸಿತು.

'ಅಷ್ಟೇ ಯಾಕೆ... ನೋಟು ರದ್ದತಿಯಿಂದ ಹಿಡಿದು ಸಿಎಎವರೆಗೆ ಹತ್ತಾರು ಕಾಯ್ದೆಗಳು, ಕ್ರಮಗಳ ವಿಷಯದಾಗೂ ಅವರದ್ದು ರೆಕಾರ್ಡೇ ಬಿಡು' ಎಂದೆ.

'ನೀ ಎಲ್ಲಾದ್ರಾಗೆ ಏನರೇ ಹುಳುಕು ತೆಗಿಬ್ಯಾಡ. ಮೂರು ಸಲ ನಿರಂತರವಾಗಿ ಲೋಕಸಭಾ ಚುನಾವಣೆ ಗೆದ್ದು, ನೆಹರೂ ರೆಕಾರ್ಡೂ ಮುರಿದ್ರು. ಮೂರು ಸಲ ಸತತವಾಗಿ ಪಿ.ಎಂ ಆಗಿರೋ ಕಾಂಗ್ರೆಸ್ಸೇತರ ಪಿ.ಎಂ, ರಾಜ್ಯವೊಂದರಲ್ಲಿ ಸಿ.ಎಂ, ದೇಶದ ಪಿ.ಎಂ ಎರಡೂ ಆಗಿದ್ದು... ಆಹಾ! ರೆಕಾರ್ಡ್ ಮ್ಯಾಲೆ ರೆಕಾರ್ಡ್!' ಎಂದು ಎದೆಯುಬ್ಬಿಸಿತು.

'ಈ ಹಿಂದೆ ಯಾವ ಪಿಎಮ್ಮೂ ಮಾಡಿರದಷ್ಟು ವಿದೇಶ ಯಾತ್ರೇನೂ ಮಾಡ್ಯಾರೆ ಅನ್ನೋ ರೆಕಾರ್ಡೂ ಅವರದ್ದೇ' ಎಂದು ಹಂಗಿಸಿದೆ.

'ಹೌದು... ಮೋದಿ ಮಾಮಾ ಭೇಟಿ ಮಾಡದೇ ಇರೂ ರಾಷ್ಟ್ರಗಳೇ ಇಲ್ಲ! 91 ಸಲ ವಿದೇಶ ಯಾತ್ರೆ, 78 ದೇಶಗಳಿಗೆ ಭೇಟಿ... ಅಮೆರಿಕಕ್ಕೇ ಹತ್ತು ಸಲ ಹೋಗ್ಯಾರೆ!' ಹೇಳುತ್ತಲೇ ಬೆಕ್ಕಣ್ಣ ಪುಳಕಗೊಂಡಿತು.

'ಈ ಎಲ್ಲಾ ವಿದೇಶ ಯಾತ್ರೆಗೆ ಹೆಚ್ಚು ಕಡಿಮೆ ₹2,000 ಕೋಟಿ ಖರ್ಚಾಗೈತಿ... ಇದೂ ರೆಕಾರ್ಡೇ!' ಎಂದೆ.

'ತಪ್ಪೇನೈತಿ? ಅಷ್ಟೆಲ್ಲ ವಿದೇಶಯಾತ್ರೆ ಮಾಡಿದ್ದರಿಂದಲೇ ವಿಶ್ವಗುರು ಪಟ್ಟ ಸಿಕ್ಕೈತಿ! ದ್ವಿಪಕ್ಷೀಯ ಮಾತುಕತಿ ಅಂದ್ರ ಸುಮ್ಮನೇ ಏನು?'

'ಅಲ್ಲಲೇ... ಅಷ್ಟೆಲ್ಲ ವಿದೇಶ ಯಾತ್ರೆ ಮಾಡೋರು ಮತ್ತ ದಿಲ್ಲಿಯಿಂದ ಇಮಾನದಾಗೆ ಮೂರೇ ತಾಸು ದೂರ ಇರೋ ಹೊತ್ತಿ ಉರೀತಿರೋ ಮಣಿಪುರಕ್ಕೆ ಎದಕ್ಕೆ ಹೋಗಿಲ್ಲಲೇ?' ಎಂದೆ. ಬೆಕ್ಕಣ್ಣ ಬಾಲ ಮುದುರಿಕೊಂಡು ಹೆೃಹೆೃಗುಟ್ಟಿತು.

ಸಂಗತ

ಬೆಂಗಳೂರು ನಾಟಕ ಅಕಾಡೆಮಿಯೆ?

ತಾನು ಅಖಂಡ ಕರ್ನಾಟಕಕ್ಕೆ ಸೇರಿರುವ ಸಂಸ್ಥೆ ಎನ್ನುವುದನ್ನು 'ಕರ್ನಾಟಕ ನಾಟಕ ಅಕಾಡೆಮಿ' ಮರೆತಿರುವಂತಿದೆ. ಅದರ ಪುರಸ್ಕಾರಗಳಲ್ಲಿ ಬೆಂಗಳೂರಿಗೆ ಅಗ್ರಪಾಲು.

• ಡಿ.ಎಸ್. ಚೌಗಲೆ


ಕರ್ನಾಟಕ ನಾಟಕ ಅಕಾಡೆಮಿಯೋ, ಬೆಂಗಳೂರು ನಾಟಕ ಅಕಾಡೆಮಿಯೋ? –'ಕರ್ನಾಟಕ ನಾಟಕ ಅಕಾಡೆಮಿ'ಯ 2025–26ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳು ಮತ್ತು ದತ್ತಿನಿಧಿ ಪ್ರಶಸ್ತಿಗಳನ್ನು ನೋಡಿದಾಗ ಎದುರಾಗುವ ಪ್ರಶ್ನೆಯಿದು.

ಅಕಾಡೆಮಿಯ ಪುರಸ್ಕಾರಗಳಲ್ಲಿ ಸಿಂಹಪಾಲು ರಾಜಧಾನಿ ಬೆಂಗಳೂರಿನ ಪಾಲಾಗಿದೆ. 'ಕರ್ನಾಟಕ ನಾಟಕ ಅಕಾಡೆಮಿ' ಸರ್ಕಾರದ ಅಡಿಯ, ಪ್ರಜಾಸತ್ತಾತ್ಮಕವಾದ ಒಂದು ಸ್ವಾಯತ್ತ ಸಂಸ್ಥೆ. ಪ್ರಜಾಸತ್ತಾತ್ಮಕ ಸಂಸ್ಥೆಯೊಂದು ತಾನು ನೀಡುವ ಪ್ರಶಸ್ತಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪಾಲಿಸದಿರುವುದು ಸರ್ವಾಧಿಕಾರಿ ಧೋರಣೆಯೇ ಸರಿ.

ಅಕಾಡೆಮಿಯ ಪುರಸ್ಕೃತರಲ್ಲಿ ಹದಿಮೂರಕ್ಕೂ ಹೆಚ್ಚು ಜನ ಬೆಂಗಳೂರು ನಗರ, ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಗೆ ಸೇರಿದವರಾಗಿದ್ದಾರೆ. ಶಶಿಧರ ಅಡಪ ಅವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು, ಅವರ ಪ್ರತಿಭೆಯ ಕುರಿತು ಎರಡು ಮಾತಿಲ್ಲ. ಮತ್ತೊಬ್ಬ ಪ್ರತಿಭಾವಂತ ರಂಗಕರ್ಮಿ ಮಾಲತೇಶ ಬಡಿಗೇರ ಅವರು ಗದಗ ಜಿಲ್ಲೆಯ ಮೂಲದವರು. ಆದರೆ, ಇವರಿಬ್ಬರೂ ಪ್ರಸ್ತುತ ಬೆಂಗಳೂರು ನಗರವಾಸಿಗಳು. ಬೆಂಗಳೂರನ್ನು ಕಾರ್ಯಕ್ಷೇತ್ರ ಮಾಡಿಕೊಂಡ ರಂಗಕರ್ಮಿಗಳನ್ನು ರಾಜಧಾನಿಯೊಂದಿಗೆ ಗುರ್ತಿಸುವ ಬದಲು ಮೂಲ ಜಿಲ್ಲೆಗಳೊಂದಿಗೆ ಗುರ್ತಿಸಿದಾಗ, ಗದಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕಲಾವಿದರಿಗೆ ಅನ್ಯಾಯ ಆಗುವುದು ಸಹಜ. ಇದನ್ನು ಅಕಾಡೆಮಿ ಗಮನಿಸಬೇಕಿತ್ತವೆ?

ಪ್ರಾದೇಶಿಕ ನ್ಯಾಯ ಹಾಗೂ ಸಾಮಾಜಿಕ ನ್ಯಾಯವನ್ನು ಅಕಾಡೆಮಿಯ ಅಧ್ಯಕ್ಷರಾದ ಕೆ.ವಿ. ನಾಗರಾಜಮೂರ್ತಿ ಮತ್ತು ಸರ್ವಸದಸ್ಯರು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಸಮರ್ಪಕ ಮಹಿಳಾ ಪ್ರಾತಿನಿಧ್ಯದ ಪಾಲನೆಯಾಗಿಲ್ಲ. ಶರಣತತ್ವ ಮತ್ತು ಸಮಾಜವಾದ ಸಿದ್ಧಾಂತಗಳ ಕುರಿತು ಮಾತನಾಡುವ ಅಧ್ಯಕ್ಷರು ಅಕಾಡೆಮಿಯ ಪ್ರಶಸ್ತಿ ಆಯ್ಕೆ ಸಂದರ್ಭದಲ್ಲಿ ತಾವು ಪ್ರತಿಪಾದಿಸುವ ತತ್ವ ಮತ್ತು ಸಿದ್ಧಾಂತಗಳನ್ನು ಪಾಲಿಸಬೇಕಿತ್ತು.

ಲಿಂಗ ಸಮಾನತೆ ಮತ್ತು ಪ್ರಾದೇಶಿಕ ಪ್ರಾತಿನಿಧ್ಯಕ್ಕೆ ಸಮಕಾಲೀನ ಸಂದರ್ಭದಲ್ಲಿ ವಿಶೇಷ ಮಹತ್ವವಿದೆ. ಧಾರ್ಮಿಕ ಅಲ್ಪಸಂಖ್ಯಾತರು, ಹಿಂದುಳಿದ ಸಮುದಾಯಗಳು ಹಾಗೂ ಹಿಂದುಳಿದ ಪ್ರದೇಶಗಳ ಪ್ರತಿಭೆಗಳನ್ನು ಗಮನಿಸಿ ಗುರ್ತಿಸಬೇಕಾದುದು ಸಾರ್ವಜನಿಕರ ತೆರಿಗೆ ಹಣದಿಂದ ಅನುದಾನ ಪಡೆಯುವ ಅಕಾಡೆಮಿಯ ಆದ್ಯ ಕರ್ತವ್ಯ. ನೇಪಥ್ಯದಲ್ಲೇ ಉಳಿದ ಪ್ರತಿಭಾವಂತರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಿರುವುದು ಒಂದು ಸಾರ್ವಜನಿಕ ಸಾಂಸ್ಕೃತಿಕ ಸಂಸ್ಥೆಯ ಹೊಣೆಗಾರಿಕೆಯೂ ಹೌದು. ಈ ಜವಾಬ್ದಾರಿಯಿಂದ ಅಕಾಡೆಮಿ ನುಣುಚಿಕೊಂಡಿದೆ. ಎಡವಿರುವುದೆಲ್ಲಿ ಎನ್ನುವ ಆತ್ಮಾವಲೋಕನ ಮಾಡಿಕೊಂಡು, ಅಕಾಡೆಮಿ ತನ್ನ ಮುಂದಿನ ಹೆಜ್ಜೆಗಳನ್ನು ಇಡಬೇಕಾಗಿದೆ.



ಕೊನೆಯ ಪಕ್ಷ, ಮಹಿಳಾ ರಂಗಕರ್ಮಿಗಳ ಪರವಾಗಿ ಅಕಾಡೆಮಿಯ ಸದಸ್ಯೆಯರಾದರೂ ಗಟ್ಟಿಯಾಗಿ ವಾದಿಸಬೇಕಿತ್ತು. ಸಮರ್ಪಕ ಮಹಿಳಾ ಪ್ರಾತಿನಿಧ್ಯಕ್ಕಾಗಿ ಹಟದಿಂದ ಪಟ್ಟು ಹಿಡಿದು ನಿಲ್ಲಬೇಕಿತ್ತು. ಪುರಸ್ಕೃತರ ಪಟ್ಟಿಯಲ್ಲಿ ಮಹಿಳೆಯರ ಸಂಖ್ಯೆ ತೀರಾ ಕನಿಷ್ಠ ಆಗಿರುವುದನ್ನು ನೋಡಿದರೆ, ಆಯ್ಕೆ ಪ್ರಕ್ರಿಯೆಯಲ್ಲಿ ಸದಸ್ಯೆಯರ ಭಾಗವಹಿಸುವಿಕೆ ಎಷ್ಟರಮಟ್ಟಿಗಿತ್ತು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ.

ಹವ್ಯಾಸಿ ಮತ್ತು ವೃತ್ತಿರಂಗಭೂಮಿಯಲ್ಲಿ ಗಮನಾರ್ಹವಾಗಿ ಸೇವೆ ಸಲ್ಲಿಸಿರುವವರ ಸಂಖ್ಯೆ ಸಾಕಷ್ಟಿದೆ. ರಂಗಭೂಮಿಗೆ ಗಣನೀಯ ಸೇವೆ ಸಲ್ಲಿಸಿರುವವರು ನಾಡಿನೊಳಗೂ ಇದ್ದಾರೆ, ಹೊರಗೂ ಇದ್ದಾರೆ. ಅವರನ್ನು ಹುಡುಕಿ ಗುರ್ತಿಸುವ ಕೆಲಸವನ್ನು ಅಕಾಡೆಮಿ ನಿರ್ವಹಿಸಿರುವಂತಿಲ್ಲ. 'ಮಹಿಳೆಯರಿಗೆ ಆದ್ಯತೆ' ಎನ್ನುವ ಮಾತು ಪ್ರಸ್ತುತ ಬರೀ ಘೋಷವಾಕ್ಯವಾಗಿ ಉಳಿದಿದೆಯೇ ಹೊರತು, ಕಾರ್ಯರೂಪಕ್ಕೆ ಬಂದಿಲ್ಲ. ಮೂವತ್ತ ನಾಲ್ಕು ಪುರಸ್ಕೃತರಲ್ಲಿ ಕೇವಲ ಮೂವರು ಕಲಾವಿದೆಯರಷ್ಟೇ ಇರುವಂತೆ ಆಯ್ಕೆ ಮಾಡಿರುವ ಅಕಾಡೆಮಿಯ ಕ್ರಮ ಅತ್ಯಂತ ಲಜ್ಜಗೇಡಿತನದ್ದು ಮತ್ತು ಖಂಡನೀಯವಾದುದು.

ಬಳ್ಳಾರಿ, ರಾಯಚೂರು, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಧಾರವಾಡ- ಹುಬ್ಬಳ್ಳಿ ಪರಿಸರದಲ್ಲಿ ರಂಗಭೂಮಿಯಲ್ಲಿ ತೊಡಗಿಕೊಂಡಿರುವ ಮಹಿಳೆ ಮತ್ತು ಪುರುಷ ಕಲಾವಿದರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ತಮ್ಮಷ್ಟಕ್ಕೆ ತಾವು ರಂಗಭೂಮಿ ಚಟುವಟಿಕೆಗಳಲ್ಲಿ ನಿರತರಾಗಿರುವ ಅವರಿಗೆ ಪ್ರಭಾವಿ ಹಿನ್ನೆಲೆಯಿಲ್ಲ, ಅವರ ಬೆನ್ನಿಗೆ ನಿಲ್ಲುವವರು ಯಾರೂ ಇಲ್ಲ. ಅಂಥವರನ್ನು ಹುಡುಕುವ ಕಾರ್ಯವನ್ನು ಅಕಾಡೆಮಿಯಲ್ಲದೆ ಬೇರೆ ಯಾರು ಮಾಡಬೇಕು?


ಅಕಾಡೆಮಿ ಪುರಸ್ಕಾರಗಳಲ್ಲಿ ನಾಡಿನ ಅತಿದೊಡ್ಡ ಜಿಲ್ಲೆ ಎಂಬ ಹೆಗ್ಗಳಿಕೆಯ ಬೆಳಗಾವಿಗೆ ದೊರೆತಿರುವುದು ಒಂದೇ ಒಂದು ಪ್ರಶಸ್ತಿ. ಎಲ್ಲವೂ ರಾಜಧಾನಿ ಕೇಂದ್ರಿತವೇ ಆಗಿರುತ್ತದೆ. ಬೆಂಗಳೂರಿನಿಂದ ದೂರವಿರುವುದು ಎಂದರೆ, ಪ್ರಚಾರ- ಪ್ರಶಸ್ತಿಯಿಂದ ದೂರವಿರುವುದೂ ಎಂದಾಗಿದೆ.

ಅಕಾಡೆಮಿಯ ಕಾರ್ಯ ಚಟುವಟಿಕೆಗಳು ನಾಡಿನಲ್ಲಿ ಯಾವ ಪ್ರಮಾಣದಲ್ಲಿ ವಿಕೇಂದ್ರೀಕರಣಗೊಂಡಿವೆ ಎನ್ನುವುದನ್ನು ಗಮನಿಸಿದರೆ, ಅಲ್ಲೂ ನಿರಾಸೆ ಎದ್ದು ಕಾಣುತ್ತದೆ. ದಕ್ಷಿಣದ ಮೈಸೂರು, ಬೆಂಗಳೂರು, ತುಮಕೂರು ಮುಂತಾದ ಕಡೆಗೆ ಅಕಾಡೆಮಿ ಹೆಚ್ಚು ಸಕ್ರಿಯವಾಗಿದೆ. ಅಕಾಡೆಮಿಯ ಹೆಚ್ಚಿನ ಚಟುವಟಿಕೆಗಳು ದಕ್ಷಿಣ ಕರ್ನಾಟಕದಲ್ಲಿ ನಡೆಯುತ್ತಿವೆ. ಆ ಭಾಗದಲ್ಲಿ ಸಾಕಷ್ಟು ರಂಗ ಸಂಘಟನೆಗಳು, ರೆಪರ್ಟರಿಗಳು ಈಗಾಗಲೇ ಕ್ರಿಯಾಶೀಲವಾಗಿವೆ. ಅಂತಹ ಪ್ರದೇಶಗಳಿಗಿಂತ, ರಂಗ ಚಟುವಟಿಕೆಗಳ ಕೊರತೆ ಎಲ್ಲಿದೆಯೋ ಅಲ್ಲಿ ಅಕಾಡೆಮಿಯ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು. 'ಬೆಂಗಳೂರು ಕೇಂದ್ರಿತ' ಎನ್ನುವ ಹಣೆಪಟ್ಟಿ ಕಳಚಿಕೊಳ್ಳುವುದು ಅಕಾಡೆಮಿಯ ಹಿತದೃಷ್ಟಿಯಿಂದ ಒಳ್ಳೆಯದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಾರ್ವಜನಿಕರಿಗೂ ಸಾಧ್ಯ ‘ಬಾಹ್ಯಾಕಾಶ ಪ್ರವಾಸ’

ವಿಜ್ಞಾನಿಗಳಿಗಷ್ಟೇ ಮೀಸಲು ಎಂದು ಪರಿಗಣಿಸಲಾಗಿದ್ದ ಬಾಹ್ಯಾಕಾಶ ಯಾತ್ರೆಯು, ಒಂದೆರಡು ಕೋಟಿ ರೂಪಾಯಿ ಖರ್ಚು ಮಾಡಿದರೆ ಸಾರ್ವಜನಿಕರಿಗೂ ಎಟಕುವಂತಾಗಿದೆ. ವಿಜ್ಞಾನಿಗಳಲ್ಲದವರೂ ಆಗಸಕ್ಕೆ ಜಿಗಿಯಬಹುದು ಎಂಬ ಕನಸು ‘ಬಾಹ್ಯಾಕಾಶ ಪ್ರವಾಸೋದ್ಯಮ’ದಿಂದ ವಾಸ್ತವರೂಪ ತಳೆದಿದೆ. ಖಾಸಗಿ ಕಂಪನಿಗಳು ಬಾಹ್ಯಾಕಾಶ ಕ್ಷೇತ್ರಕ್ಕೆ ಕಾಲಿಟ್ಟ ಬಳಿಕ ‘ಬಾಹ್ಯಾಕಾಶ ಪ್ರವಾಸೋದ್ಯಮ’ವು ಉದ್ದಿಮೆಯ ಸ್ವರೂಪ ಪಡೆದಿದೆ



ಭಾರತದ ಹೆಜ್ಜೆ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಸದ್ಯ ಗಗನಯಾನದತ್ತ ದೃಷ್ಟಿ ನೆಟ್ಟಿದೆ. ಇದಕ್ಕಾಗಿ ಆ್ಯಕ್ಸಿಯಂ–4 ಎಂಬ ಅಂತರಿಕ್ಷ ಅಭಿಯಾನದ ಭಾಗವಾಗಿ, ಶುಭಾಂಶು ಶುಕ್ಲಾ ಅವರನ್ನು ಈಚೆಗಷ್ಟೇ ಐಎಸ್‌ಎಸ್‌ಗೆ ಕಳುಹಿಸಿತ್ತು. ಭಾರತದ ಖಾಸಗಿ ಬಾಹ್ಯಾಕಾಶ ಸಂಸ್ಥೆಗಳೂ ಬಾಹ್ಯಾಕಾಶ ಪ್ರವಾಸೋದ್ಯಮದತ್ತ ದೃಷ್ಟಿ ನೆಟ್ಟಿವೆ. ‘ಅಗ್ನಿಕುಲ್’, ‘ಸ್ಕೈರೂಟ್’ ಹಾಗೂ ಇತರೆ ಕೆಲವು ಸಂಸ್ಥೆಗಳು ವಿವಿಧ ಉಡ್ಡಯನ ಸಾಮರ್ಥ್ಯದ ವಾಹನಗಳ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ತೊಡಗಿವೆ. ಅವುಗಳಲ್ಲಿ ಕೆಲವು ಬಾಹ್ಯಾಕಾಶ ಪ್ರವಾಸೋದ್ಯಮವನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ.

• ಅಮೃತ್ ಕಿರಣ್ ಬಿ.ಎಂ

ಭೂಮಿಯ ವಾತಾವರಣವನ್ನು ದಾಟಿ, ದಿಗಂತದಲ್ಲಿ ಪ್ರಯಾಣಿಸುವ ಕಲ್ಪನೆ ಯುಗಗಳಿಂದಲೂ ಮಾನವನನ್ನು ಆಕರ್ಷಿಸುತ್ತಲೇ ಇದೆ. ಮನುಷ್ಯನ ಸಾಹಸ ಗುಣಕ್ಕೆ ತಂತ್ರಜ್ಞಾನ ಬಲ ನೀಡಿದ್ದರಿಂದ ಅಂತರಿಕ್ಷಕ್ಕೆ ಗಗನಯಾತ್ರಿಗಳು ಹೋಗಿ ಬರುವುದು ಸಾಧ್ಯವಾಗಿದೆ. ವಿಜ್ಞಾನಿಗಳಲ್ಲದವರಿಗೂ ಈ ಅವಕಾಶ ಈಗ ಲಭ್ಯವಾಗುತ್ತಿದೆ. ಇದನ್ನು ಸಾಧ್ಯವಾಗಿಸಿದ್ದು, ‘ಬಾಹ್ಯಾಕಾಶ ಪ್ರವಾಸೋದ್ಯಮ’. ಭೂಮಿಯಿಂದ 100 ಕಿಲೋಮೀಟರ್ ಎತ್ತರದಲ್ಲಿ (ಕಕ್ಷೆ) ಹಾಗೂ ಅದಕ್ಕಿಂತ ಕೆಳಗಿನ ಎತ್ತರದ (ಉಪಕಕ್ಷೆ) ನೀಲಾಗಸದಲ್ಲಿ ಕೆಲವೇ ನಿಮಿಷ ಇದ್ದು, ಭೂಮಿಯ ಚೆಲುವನ್ನು ಕಣ್ತುಂಬಿಕೊಳ್ಳುವುದು ಹಾಗೂ ತೂಕರಹಿತ ದೇಹ ಸ್ಥಿತಿಯನ್ನು ಅನುಭವಿಸುವುದು ಈಗ ಸುಲಭವಾಗಿದೆ.

ಖಾಸಗಿ ಕಂಪನಿಗಳು ಬಾಹ್ಯಾಕಾಶ ಕ್ಷೇತ್ರಕ್ಕೆ ಕಾಲಿಟ್ಟಿದ್ದು, ಇದು ಉದ್ದಿಮೆಯಾಗಿ ಬೆಳೆಯುತ್ತಿದೆ. ‘ಬಾಹ್ಯಾಕಾಶ ಪ್ರವಾಸೋದ್ಯಮ’ ಸಾಕಾರಕ್ಕೆ ಅಂತರಿಕ್ಷ ಸಂಸ್ಥೆಗಳ ನಡುವೆ ಪೈಪೋಟಿಯೇ ಏರ್ಪಟ್ಟಿದ್ದು, ಅವು ಹೊಸ ತಂತ್ರಜ್ಞಾನ, ಯಥೇಚ್ಛ ಹಣ ಹಾಗೂ ಮಾನವ ಶ್ರಮವನ್ನು ಹೂಡಿಕೆ ಮಾಡುತ್ತಿವೆ.

ಎರಡು ದಶಕಗಳ ಯತ್ನ: 2001ರಲ್ಲಿ ಅಮೆರಿಕದ ಉದ್ಯಮಿ ಹಾಗೂ ಎಂಜಿನಿಯರ್ ಡೆನಿಸ್ ಟಿಟೊ ಅವರು ಬಾಹ್ಯಾಕಾಶಕ್ಕೆ ಪ್ರಯಾಣಿಸಿದ ವೃತ್ತಿಪರ ಗಗನಯಾತ್ರಿ ಅಲ್ಲದ ಮೊದಲ ವ್ಯಕ್ತಿ. ಏಳು ದಿನ ಅಲ್ಲಿದ್ದು ಇತಿಹಾಸ ನಿರ್ಮಿಸಿದ್ದರು. ಇದಾದ ಎರಡು ದಶಕಗಳ ನಂತರ ಬಾಹ್ಯಾಕಾಶ ಪ್ರವಾಸೋದ್ಯಮ ಮಹತ್ವದ ಹಂತವನ್ನು ತಲುಪಿದೆ. ಎಲ್ಲ ಆರು ಮಂದಿ ಮಹಿಳೆಯರೇ ಇದ್ದ ನೌಕೆಯನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಮೂಲಕ ಅಮೆರಿಕದ ‘ಬ್ಲೂ ಒರಿಜಿನ್’ ಖಾಸಗಿ ಸಂಸ್ಥೆಯು ಈಚೆಗಷ್ಟೇ ದೊಡ್ಡ ಸದ್ದು ಮಾಡಿತ್ತು.

ಬ್ಲೂ ಒರಿಜಿನ್: 2000ನೇ ಇಸ್ವಿಯಲ್ಲಿ ಅಂತರಿಕ್ಷ ಕ್ಷೇತ್ರವನ್ನು ಪ್ರವೇಶಿಸಿದ್ದ ಉದ್ಯಮಿ ಜೆಫ್ ಬಿಜೋಸ್, 2015ರಲ್ಲಿ ಮಾನವರಹಿತ ರಾಕೆಟ್ ಉಡ್ಡಯನ ಪರೀಕ್ಷೆ ನಡೆಸಿದ್ದರು. ಇದಾದ 20 ವರ್ಷ ಅದರ ಸುದ್ದಿಯೇ ಇರಲಿಲ್ಲ. 2021ರ ಜುಲೈನಲ್ಲಿ ಸ್ವತಃ ಬಿಜೋಸ್ ತಮ್ಮ ಸಂಸ್ಥೆ ಅಭಿವೃದ್ಧಿಪಡಿಸಿದ ‘ನ್ಯೂ ಶೆಫರ್ಡ್’ ರಾಕೆಟ್ ಮೂಲಕ ಆಗಸಕ್ಕೆ ಸ್ವತಃ ಜಿಗಿದು ಇತಿಹಾಸ ಬರೆದರು. ಭೂಮಿಯಿಂದ ಮೇಲಕ್ಕೆ 100 ಕಿ.ಮೀ. ದೂರದಲ್ಲಿ ಗುರುತಿಸಿರುವ ‘ಕಾರ್ಮನ್ ಲೈನ್’ ಪ್ರವೇಶಿಸಿದ ಮೊದಲ ಕೋಟ್ಯಧೀಶ ಎಂಬುದಾಗಿ ಕರೆಯಿಸಿಕೊಂಡರು. ಅಲ್ಲಿಂದ ಈವರೆಗೆ ‘ಬ್ಲೂ ಒರಿಜಿನ್’ ಸಂಸ್ಥೆಯು 11 ಅಂತರಿಕ್ಷ ಯಾನಗಳನ್ನು ಪೂರೈಸಿದ್ದು, 58 ನಾಗರಿಕರನ್ನು ಬಾಹ್ಯಾಕಾಶದಲ್ಲಿ ಸುತ್ತಾಡಿಸಿದೆ.

ಅಂತರಿಕ್ಷ ಯಾನದ ವೆಚ್ಚವನ್ನು ತಗ್ಗಿಸುವ ಉದ್ದೇಶದಿಂದ ಬಿಜೋಸ್ ಅವರು ಅಭಿವೃದ್ಧಿಪಡಿಸಿರುವ ಮರುಬಳಕೆಯ ರಾಕೆಟ್ ತಂತ್ರಜ್ಞಾನವು ಈ ಉದ್ಯಮದಲ್ಲಿ ಹೊಸ ದಿಕ್ಕು ತೋರಿದ್ದು, ಇದರ ಬಳಕೆಯಲ್ಲಿ ಅವರು ಸದ್ಯ ಮುಂಚೂಣಿಯಲ್ಲಿದ್ದಾರೆ. ಎರಡು ಹಂತಗಳಲ್ಲಿ ರಾಕೆಟ್‌ನ ವಿನ್ಯಾಸವಿದೆ. ಯಾತ್ರಿಗಳು ಇರುವ ಕ್ಯಾಪ್ಸೂಲ್ ಮೇಲ್ಭಾಗದಲ್ಲಿ, ಅವರನ್ನು ಹೊತ್ತೊಯ್ಯುವ ರಾಕೆಟ್ ಕೆಳಭಾಗದಲ್ಲಿ ಇರುತ್ತದೆ. ನಿಗದಿತ ಕಕ್ಷೆಯನ್ನು ತಲುಪಿದ ಬಳಿಕ ಕ್ಯಾಪ್ಸೂಲ್ ರಾಕೆಟ್‌ನಿಂದ ಬೇರ್ಪಡುತ್ತದೆ. ಭೂಮಿಯ ಮೇಲ್ಮೈನಲ್ಲಿ, ಉಡ್ಡಯನ ಮಾಡಿದ ಜಾಗದ ಸಮೀಪದಲ್ಲೇ ರಾಕೆಟ್ ಬಂದು ಲ್ಯಾಂಡ್ ಆಗುತ್ತದೆ. ಕ್ಯಾಪ್ಸೂಲ್ ಸ್ವಲ್ಪ ಹೊತ್ತಿನ ಬಳಿಕ ಭೂಮಿಯತ್ತ ವಾಪಸ್ ಆಗುತ್ತದೆ. ಭೂ ಮೇಲ್ಮೈಯನ್ನು ಸಮೀಪಿಸುವ ಹೊತ್ತಿಗೆ, ಕ್ಯಾಪ್ಸೂಲ್‌ಗೆ ಅಳವಡಿಸಿರುವ ಪ್ಯಾರಾಚೂಟ್ ತೆರೆದುಕೊಂಡು, ಯಾತ್ರಿಕರು ಸುರಕ್ಷಿತವಾಗಿ ಲ್ಯಾಂಡ್ ಆಗುತ್ತಾರೆ.

ವರ್ಜಿನ್ ಗೆಲಾಕ್ಟಿಕ್: 2004ರಲ್ಲಿ ಈ ಸಂಸ್ಥೆಯನ್ನು ಹುಟ್ಟುಹಾಕಿದ ಬ್ರಿಟನ್‌ನ ಉದ್ಯಮಿ ರಿಚರ್ಡ್ ಬ್ರಾನ್ಸನ್ ಅವರು ಸಂಶೋಧನೆ, ಅಭಿವೃದ್ಧಿಯ ನಂತರ 2021ರಲ್ಲಿ ಮೊದಲ ಬಾರಿಗೆ ಜನರನ್ನು ಹೊತ್ತ ನೌಕೆಯ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದರು. ಅವರು ಬಾಹ್ಯಾಕಾಶವನ್ನು ಸುತ್ತುಹಾಕಲು ಆಯ್ದುಕೊಂಡ ವಿಧಾನ ಮಾತ್ರ ವಿನೂತನವಾಗಿದೆ. ರಾಕೆಟ್ ಬದಲಾಗಿ ಮೂರು ವಿಮಾನಗಳ ರಚನೆಯನ್ನು ಅವರು ಪರಿಚಯಿಸಿದರು. ಒಂದಕ್ಕೊಂದು ಬೆಸೆದಂತೆ ಕಾಣುವ ಮೂರೂ ವಿಮಾನಗಳು ಆಗಸಕ್ಕೆ ನೆಗೆಯುವಾಗ ಒಟ್ಟಿಗೆ ಇರುತ್ತವೆ. ಆಕಾಶದಲ್ಲಿ ಗೊತ್ತುಪಡಿಸಿದ ಎತ್ತರವನ್ನು ತಲುಪಿದ ಬಳಿಕ, ಮಧ್ಯಭಾಗದ ವಿಮಾನವು ಬೇರ್ಪಡುತ್ತದೆ. ಮಧ್ಯದ ವಿಮಾನದಲ್ಲಿರುವ ಪೈಲಟ್‌ಗಳು, ಅದು ಬೇರ್ಪಟ್ಟ ಕೂಡಲೇ ರಾಕೆಟ್ ರೀತಿಯಲ್ಲಿ ಮೇಲ್ಮುಖವಾಗಿ ಕಾರ್ಮನ್ ಲೈನ್‌ನತ್ತ ವಿಮಾನವನ್ನು ಚಲಾಯಿಸುತ್ತಾರೆ. ವಿಮಾನದ ಎರಡೂ ಭಾಗಗಳು ಸ್ವತಂತ್ರವಾಗಿ ಬಂದು ಲ್ಯಾಂಡ್ ಆಗುತ್ತವೆ. ಸಂಸ್ಥೆಯ ವಿಎಸ್‌ಎಸ್ ಯೂನಿಟಿ ಅಂತರಿಕ್ಷ ವಿಮಾನವು 65 ಜನರಿಗೆ ಬಾಹ್ಯಾಕಾಶದ ದರ್ಶನ ಮಾಡಿಸಿದೆ.

ಸ್ಪೇಸ್‌ಎಕ್ಸ್: ಉದ್ಯಮಿ ಇಲಾನ್ ಮಸ್ಕ್ ಒಡೆತನದ ‘ಸ್ಪೇಸ್‌ಎಕ್ಸ್’ ಖಾಸಗಿ ಬಾಹ್ಯಾಕಾಶ ಸಂಸ್ಥೆಯು ಸಂಸ್ಥೆಯು ತನ್ನ ಪ್ರತಿಸ್ಪರ್ಧಿಗಳಿಗಿಂತ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಗಗನಯಾತ್ರಿಗಳನ್ನು ಕಳುಹಿಸಿ ಈಗಾಗಲೇ ಸೈ ಎನಿಸಿಕೊಂಡಿರುವ ಸಂಸ್ಥೆಯು, ಕಕ್ಷೆಗೆ (ಆರ್ಬಿಟಲ್ ಟ್ರಿಪ್) ಜನರನ್ನು ಪ್ರವಾಸಕ್ಕೆ ಕರೆದೊಯ್ಯುವ ಹಾಗೂ ಐಎಸ್‌ಎಸ್‌ಗೆ ‘ಟ್ರಿಪ್’ ಕಳುಹಿಸುವ ಮಹತ್ವಾಕಾಂಕ್ಷಿ ಗುರಿಗಳನ್ನು ಇಟ್ಟುಕೊಂಡಿದೆ. ಸಂಪೂರ್ಣ ಕಕ್ಷೆಯ ಯೋಜನೆ (ಫುಲ್ ಆರ್ಬಿಟಲ್ ಮಿಷನ್) ಹಾಗೂ ಅದಕ್ಕಿಂತ ಎತ್ತರದ ಕಕ್ಷೆಯಲ್ಲಿ ದೀರ್ಘಕಾಲ ಜನರು ಉಳಿಯಲು ಬೇಕಾಗುವ ರೀತಿಯಲ್ಲಿ ತನ್ನ ರಾಕೆಟ್‌ಗಳನ್ನು ಸಜ್ಜುಗೊಳಿಸುತ್ತಿದೆ.

ಸ್ಪೇಸ್ ಪರ್ಸ್‌ಪೆಕ್ಟಿವ್ ಮತ್ತು ಡೀಪ್ ಬ್ಲೂ: ಸ್ಪೇಸ್ ಪರ್ಸ್‌ಪೆಕ್ಟಿವ್ ಸಂಸ್ಥೆಯದ್ದು ಮತ್ತೊಂದು ವಿನೂತನ ವಿನ್ಯಾಸದ ಬಾಹ್ಯಾಕಾಶ ಪ್ರಯಾಣ. ಎತ್ತರದ ಬಲೂನ್ ಹಾಗೂ ಒತ್ತಡದ ಕ್ಯಾಪ್ಸೂಲ್‌ಗಳನ್ನು ಬಳಸಿ ಜನರನ್ನು ಆಗಸದತ್ತ ಕರೆದೊಯ್ಯುವುದು ಈ ಸಂಸ್ಥೆಯ ಉದ್ದೇಶ. ನಿಧಾನ ಹಾಗೂ ಸುಲಭವಾದ ಈ ವಿಧಾನವು ಉಳಿದೆಲ್ಲಕ್ಕಿಂತ ಉತ್ತಮವಾಗಿ ಭೂಮಿಯ ವಿಹಂಗಮ ನೋಟವನ್ನು ಸವಿಯಲು ಅವಕಾಶ ನೀಡುತ್ತದೆ. ಈ ವರ್ಷವೇ ಯೋಜನೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಚೀನಾದ ಡೀಪ್ ಬ್ಲೂ ಏರೊಸ್ಪೇಸ್ ನವೋದ್ಯಮವು 2027ರ ವೇಳೆಗೆ ನೆಬ್ಯುಲಾ–1 ವಿಟಿವಿಎಲ್ ರಾಕೆಟ್ ಮತ್ತು ಕ್ಯಾಪ್ಸೂಲ್ ಮೂಲಕ ಜನರಿಗೆ ಉಪಕಕ್ಷೆಯ ಪ್ರವಾಸದ ಅನುಭವ ನೀಡಲು ಸಜ್ಜಾಗುತ್ತಿದೆ. ಬಾಹ್ಯಾಕಾಶ ಪ್ರವಾಸವು ಉದ್ಯಮದ ರೂಪ ಪಡೆದಿದ್ದು, 2030ರ ವೇಳೆಗೆ ವಾರ್ಷಿಕವಾಗಿ ₹25 ಸಾವಿರ ಕೋಟಿ ಆದಾಯ ತಂದುಕೊಡಲಿದೆ ಎಂದು ‘ಮೋರ್ಗನ್ ಸ್ಟ್ಯಾನ್ಲಿ’ ವರದಿ ಅಂದಾಜಿಸಿದೆ. ಇದು 2040ರ ಹೊತ್ತಿಗೆ 1 ಟ್ರಿಲಿಯನ್ ಡಾಲರ್‌ಗೆ ಏರಲಿದೆ ಎಂದೂ ತಿಳಿಸಿದೆ.

ಆಧಾರ: ಸ್ಪೇಸ್ ಎಕ್ಸ್, ಬ್ಲೂ ಒರಿಜಿನ್, ವರ್ಜಿನ್ ಗೆಲಾಕ್ಟಿಕ್, ಎಎಫ್‌ಪಿ, ರಾಯಿಟರ್ಸ್



ಎಲ್ಲೆಲ್ಲಿಗೆ ಪ್ರವಾಸ..

1. **ಉಪಕಕ್ಷೆ (ಸಬ್ ಆರ್ಬಿಟ್)** ಭೂಮಿಯಿಂದ 100 ಕಿಲೋಮೀಟರ್ ಎತ್ತರದಲ್ಲಿರುವ ಕಾರ್ಮನ್ ಲೈನ್‌ನಲ್ಲಿ ಪ್ರಯಾಣಿಕರಿಗೆ ಸುಮಾರು 10 ನಿಮಿಷ ಸೂಕ್ಷ್ಮಗುರುತ್ವಬಲದ, ಅಂದರೆ ದೇಹ ತೇಲಾಡುವ ಅನುಭವ ಸಿಗುತ್ತದೆ. ಇಲ್ಲಿ ಭೂಮಿಯ ಗೋಳಾಕಾರದ ದರ್ಶನವಾಗುತ್ತದೆ.
2. **ಕಕ್ಷೆ:** ಕಾರ್ಮನ್ ಲೈನ್‌ಗಿಂತ ಮೇಲಕ್ಕಿರುವ ಪ್ರದೇಶ. ಇದು ದೀರ್ಘಕಾಲದ ಉಳಿದುಕೊಳ್ಳುವಿಕೆ, ಐಎಸ್‌ಎಸ್ ಹಾಗೂ ಇತರೆ ಬಾಹ್ಯಾಕಾಶ ನಿಲ್ದಾಣಗಳಿಗೆ ಪ್ರವೇಶಿಸುವ ಹಾಗೂ ಅಲ್ಲಿಂದ ವಾಪಸಾಗುವ ಪ್ರಕ್ರಿಯೆ ನಡೆಯುವ ವಲಯವಾಗಿದೆ. ಲೂನಾರ್ ಟೂರಿಸಂ ಎಂಬ ಖಾಸಗಿ ಬಾಹ್ಯಾಕಾಶ ಯೋಜನೆ ಅಭಿವೃದ್ಧಿಯ ಹಂತದಲ್ಲಿದೆ. ಸ್ಪೇಸ್ ಎಕ್ಸ್ ಸಂಸ್ಥೆಯ ‘ಡಿಯರ್ ಮೂನ್’ ಹಾಗೂ ಬ್ಲೂ ಒರಿಜಿನ್ ಸಂಸ್ಥೆಯ ‘ಬ್ಲೂ ಮೂನ್’ ಮುಂದಿನ ದಿನಗಳಲ್ಲಿ ಸಾಕಾರಗೊಳ್ಳುವ ನಿರೀಕ್ಷೆಯಿದೆ.

ಟಿಕೆಟ್ ದರ ಎಷ್ಟು?

ಬಹುತೇಕ ಯಾವ ಕಂಪನಿಯೂ ಟಿಕೆಟ್ ದರ ಬಹಿರಂಗಪಡಿಸಿಲ್ಲ. ತಮ್ಮನ್ನು ನೇರವಾಗಿ ಸಂಪರ್ಕಿಸುವಂತೆ ಸೂಚಿಸಿವೆ. ಉಪಕಕ್ಷೆಗೆ ತೆರಳುವ ಪ್ರಯಾಣಿಕರ ಟಿಕೆಟ್ ದರ ಅಂದಾಜು ₹2.10 ಕೋಟಿಯಿಂದ ₹3.80 ಕೋಟಿವರೆಗೂ ಇದೆ ಎಂದು ವರದಿಗಳು ಹೇಳಿವೆ.

ಸ್ಪೇಸ್ ಪರ್ಸ್‌ಪೆಕ್ಟಿವ್ ಯೋಜನೆಯಲ್ಲಿ ಒಂದು ಟಿಕೆಟ್‌ಗೆ ಅಂದಾಜು ₹1 ಕೋಟಿ ದರ ನಿಗದಿಯಾಗುವ ಸಾಧ್ಯತೆಯಿದೆ. ಡೀಪ್ ಬ್ಲೂ ಸಂಸ್ಥೆಯು ₹1.75 ಕೋಟಿ ದರದ ಟಿಕೆಟ್ ನಿಗದಿಪಡಿಸಿದೆ. ಈಗಾಗಲೇ ಎರಡು ಟಿಕೆಟ್‌ಗಳು ಮಾರಾಟವಾಗಿವೆ ಎನ್ನಲಾಗಿದೆ.

ಆದರೆ ಕಾರ್ಮನ್ ಲೈನ್ ದಾಟಿ, 400 ಕಿಲೋಮೀಟರ್ ದೂರದಲ್ಲಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳುವ ವೆಚ್ಚ ಅತ್ಯಂತ ದುಬಾರಿ. ಸ್ಪೇಸ್ ಎಕ್ಸ್‌ನ ಡ್ರ್ಯಾಗನ್ ರೀತಿಯ ಕ್ಯಾಪ್ಸೂಲ್‌ಗಳಲ್ಲಿ ತೆರಳುವ ಪ್ರತಿಯೊಬ್ಬರೂ ಸರಿಸುಮಾರು ₹450 ಕೋಟಿ ತೆರಬೇಕಿದೆ.

ಅನನುಕೂಲಗಳು

- ದುಬಾರಿ ಪ್ರಯಾಣ ವೆಚ್ಚವನ್ನು ತಗ್ಗಿಸಲು ಮರುಬಳಕೆಯ ರಾಕೆಟ್ ಹಾಗೂ ವಿಮಾನಗಳನ್ನು ಬಳಸಲಾಗುತ್ತಿದ್ದರೂ ದರ ಮಾತ್ರ ಇಳಿಕೆಯಾಗಿಲ್ಲ
- ನಾಸಾದಂತಹ ಸಂಸ್ಥೆಗಳು ಕೈಗೊಳ್ಳುವ ಅಂತರಿಕ್ಷ ಯೋಜನೆಗಳ ಹೊರತಾಗಿ, ಖಾಸಗಿ ಕಂಪನಿಗಳು ಪ್ರವಾಸಕ್ಕೆಂದು ಜನರನ್ನು ಕರೆದೊಯ್ಯುವ ಕಾರ್ಯಕ್ರಮಗಳಿಂದ ಸಂಶೋಧನೆ ಹಾಗೂ ವಿಜ್ಞಾನಕ್ಕೆ ಅಂತಹ ಲಾಭವಿಲ್ಲ
- ಬಾಹ್ಯಾಕಾಶದಲ್ಲಿ ನೌಕೆಗಳು ಹೊರಸೂಸುವ ಅನಿಲಗಳು ಹಾಗೂ ಕಣಗಳು ದೀರ್ಘಕಾಲ ಅಲ್ಲಿಯೇ ಉಳಿಯಲಿದ್ದು, ಪರಿಸರದ ದೃಷ್ಟಿಯಿಂದ ಕಳವಳಕಾರಿ
- ವರ್ಜಿನ್ ಗೆಲಾಕ್ಟಿಕ್‌ನಲ್ಲಿ ಪ್ರತಿ ಪ್ರಯಾಣಿಕನ ಪ್ರತಿ ಮೈಲು ಪ್ರಯಾಣದ ಹಾದಿಯಲ್ಲಿ 12 ಕೆ.ಜಿ ಕಾರ್ಬನ್ ಡೈಆಕ್ಸೈಡ್ ಬಿಡುಗಡೆಯಾಗತ್ತದೆ ಎಂದು ಅಂದಾಜಿಸಲಾಗಿದೆ. ಸಾಮಾನ್ಯ ವಿಮಾನ ಪ್ರಯಾಣದಲ್ಲಿ ಈ ಪ್ರಮಾಣ 0.2 ಕೆ.ಜಿ. ಮಾತ್ರ
- ಕಾರ್ಬನ್ ಡೈಆಕ್ಸೈಡ್ ಬದಲಿಗೆ ವಾಟರ್ ವೇಪರ್ ಹೊರಸೂಸುವುದಾಗಿ ಬ್ಲೂ ಒರಿಜಿನ್ ಹೇಳಿದ್ದರೂ, ಅದೂ ಸಹ ಹಸಿರುಮನೆ ಅನಿಲ ಎಂದು ತಜ್ಞರು ಎಚ್ಚರಿಸಿದ್ದಾರೆ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ


2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

‘ಸಿಂಗಪುರದಲ್ಲಿ ಎರಡನೇ ಭಾಷೆಯಾಗಿ ತೆಲುಗು ಕಲಿಸಿ’


ಚಂದ್ರಬಾಬು ನಾಯ್ಡು

ಸಿಂಗಪುರ (ಪಿಟಿಐ): ಸಿಂಗಪುರದ ಶಾಲೆಗಳಲ್ಲಿ ತೆಲುಗನ್ನು ಎರಡನೇ ಭಾಷೆಯಾಗಿ ಕಲಿಸಬೇಕೆಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಕರೆ ನೀಡಿದರು. ಇಲ್ಲಿನ ಒನ್ ವರ್ಲ್ಡ್ ಇಂಟರ್‌ನ್ಯಾಷನಲ್ ಸ್ಕೂಲ್ ಡಿಜಿಟಲ್ ಕ್ಯಾಂಪಸ್‌ನಲ್ಲಿ ಸುಮಾರು 2 ಸಾವಿರ ಅನಿವಾಸಿ ಭಾರತೀಯರೊಂದಿಗೆ ಅವರು ಮಾತನಾಡುತ್ತಿದ್ದರು.

ಆಂಧ್ರಪ್ರದೇಶಕ್ಕೆ ಹೂಡಿಕೆಗಳನ್ನು ಆಕರ್ಷಿಸಲು ಐದು ದಿನಗಳ ಅಧಿಕೃತ ಭೇಟಿಗಾಗಿ ಅವರು ಸಿಂಗಪುರಕ್ಕೆ ಬಂದಿದ್ದಾರೆ.

ಸಿಂಗಪುರದಲ್ಲಿ ತೆಲುಗು ಮೂಲದ ಸುಮಾರು 40 ಸಾವಿರ ಜನರಿದ್ದಾರೆ ಎಂದು ಸಮುದಾಯದ ನಾಯಕರೊಬ್ಬರು ಹೇಳಿದ್ದಾರೆ. ಸಿಂಗಪುರದ ನಾಲ್ಕು ಅಧಿಕೃತ ಭಾಷೆಗಳಲ್ಲಿ ತಮಿಳು ಕೂಡ ಒಂದು.

ಇಲ್ಲಿನ ಶಾಲೆಗಳಲ್ಲಿ ಮಾತೃಭಾಷೆಯಾಗಿ ಹಿಂದಿ, ಪಂಜಾಬಿ ಆಯ್ಕೆ ಮಾಡಿಕೊಳ್ಳಲೂ ಅವಕಾಶವಿದೆ ಎಂದು ಹೇಳಿದರು.

‘ತೆಲುಗು ಭಾಷೆಯನ್ನು ಎರಡನೆಯ ಭಾಷೆಯಾಗಿ ಕಲಿಸುವಂತೆ ಸಿಂಗಪುರ ಸರ್ಕಾರದ ಜೊತೆಗೆ ಚರ್ಚಿಸುವಂತೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ನನ್ನನ್ನು ಕೇಳಿಕೊಂಡರು’ ಎಂದು ಭಾರತೀಯ ಹೈಕಮಿಷನರ್ ಡಾ. ಶಿಲ್ಪಕ್ ಅಂಬುಲೆ ತಿಳಿಸಿದರು.

ಮಹುವಾ ಕ್ಷೇತ್ರದಿಂದ ತೇಜ್ ಪ್ರತಾಪ್ ಸ್ಪರ್ಧೆ


ತೇಜ್ ಪ್ರತಾಪ್ ಯಾದವ್

ಪಾಟ್ನಾ (ಪಿಟಿಐ): ಆರ್‌ಜೆಡಿ ಪಕ್ಷದಿಂದ ಉಚ್ಚಾಟಿತರಾದ ಬಿಹಾರದ ಮಾಜಿ ಸಚಿವ ತೇಜ್ ಪ್ರತಾಪ್ ಯಾದವ್ ಅವರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವೈಶಾಲಿ ಜಿಲ್ಲೆಯ ಮಹುವಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಘೋಷಿಸಿದ್ದಾರೆ.

ತೇಜ್ ಪ್ರತಾಪ್ ಅವರು ಸದ್ಯ, ಸಮಷ್ಟಿಪುರ ಜಿಲ್ಲೆಯ ಹಸನ್‌ಪುರ ಕ್ಷೇತ್ರದ ಶಾಸಕರಾಗಿದ್ದಾರೆ.

‘ನಾನು ಈ ಸಲ ಮಹುವಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದೇನೆ. ಇದರಿಂದ ನನ್ನ ವಿರೋಧಿಗಳಿಗೆ ತುರಿಕೆ ಶುರುವಾಗಿದೆ’ ಎಂದು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉಪರಾಷ್ಟ್ರಪತಿ ಹುದ್ದೆಗೆ ಇತ್ತೀಚೆಗೆ ರಾಜೀನಾಮೆ ನೀಡಿದ ಜಗದೀಪ್ ಧನಕರ್ ಅವರ ಒಂದು ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಡಿಯೊ ಇದೇ ಜುಲೈ 23ರ ಸಂಸತ್ ಅಧಿವೇಶನದ್ದು ಎಂದೂ, ‘ನಾನು ರೈತನ ಮಗನಾಗಿದ್ದು, ರೈತರ ಮಕ್ಕಳು ಯಾರಿಗೂ ಹೆದರುವುದಿಲ್ಲ’ ಎಂಬುದಾಗಿ ಅವರು ತಮ್ಮ ರಾಜೀನಾಮೆಯ ಹಿಂದಿನ ದಿನ ಹೇಳಿದ್ದಾರೆ ಎಂದೂ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದ ಕೀಫ್ರೇಮ್ ಇನ್‌ವಿಡ್ ಟೂಲ್‌ನಿಂದ ಪ್ರತ್ಯೇಕಿಸಿ, ಅದನ್ನು ಗೂಗಲ್ ಲೆನ್ಸ್‌ನಿಂದ ಪರಿಶೀಲನೆ ಮಾಡಿದಾಗ, ಅದೇ ವಿಡಿಯೊ ಅನ್ನು ಹಲವರು, ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಪತ್ತೆಯಾಯಿತು. ಈ ಬಗ್ಗೆ ಮತ್ತಷ್ಟು ಹುಡುಕಿದಾಗ, ಧನಕರ್ ಅವರು ಈ ಮಾತನ್ನು ಹೇಳಿರುವುದಾಗಿ ‘ಎನ್‌ಡಿಟಿವಿ’ಯ ಎಕ್ಸ್ ಖಾತೆಯಲ್ಲಿ 2025ರ ಏ.4ರ ಪೋಸ್ಟ್ ಕಂಡಿತು. ಇದೇ ವಿಡಿಯೊ ಸಿಎನ್‌ಎನ್ ನ್ಯೂಸ್18 ಯೂ ಟ್ಯೂಬ್ ಚಾನೆಲ್‌ನಲ್ಲಿ 2025ರ ಏ.3ರಂದು ಲೈವ್ ಆಗಿ ಪ್ರಸಾರವಾಗಿದ್ದೂ ಕಂಡಿತು. ರಾಜ್ಯಸಭೆಯ ಬಜೆಟ್ ಮೇಲಿನ ಚರ್ಚೆಯ ವಿಡಿಯೊ ಅನ್ನು ಇತ್ತೀಚಿನ ವಿಡಿಯೊ ಎಂದು ಸುಳ್ಳು ಪ್ರತಿಪಾದನೆಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ತಾಯಿಯ ಪಾದದಡಿಯೇ ಸ್ವರ್ಗ


ದಾದಾಪೀರ್ ನವಿಲೇಹಾಳ್

ಪ್ರವಾದಿಯವರು ಸಮಾಜದ ಓರೆಕೋರೆಗಳನ್ನು ತಿದ್ದುವ ತಮ್ಮ ನಿತ್ಯದ ಕಾಯಕದಲ್ಲಿ ತೊಡಗಿದ್ದರು. ಅವರೊಂದಿಗೆ ನೂರಾರು ಜನ ಕೈಜೋಡಿಸುತ್ತಿದ್ದರು. ನಿನ್ನೆ ಬಂದವರು ಇಂದು ಬರುತ್ತಿರಲಿಲ್ಲ. ಇಂದು ಬಂದವರು ನಾಳೆ ಬರುತ್ತಿರಲಿಲ್ಲ. ಪ್ರವಾದಿಯವರು ಬಂದವರನ್ನೆಲ್ಲಾ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ಅವರ ಮನೆಯಲ್ಲಿ ಯಾರು ಯಾರು ಇದ್ದಾರೆ, ಅವರ ವಯಸ್ಸು, ಆದಾಯ ಮುಂತಾದುವನ್ನು ಸೂಕ್ಷ್ಮವಾಗಿ ಕೇಳಿ ಅವರ ಅಗತ್ಯ ತಮಗಿಂತ ಸಂಸಾರಕ್ಕಿದೆ ಎಂಬುದನ್ನು ಗ್ರಹಿಸುತ್ತಿದ್ದರು. ಸಂಸಾರದೊಂದಿಗೆ ಅವರ ಉಪಸ್ಥಿತಿಯ ಮಹತ್ವವನ್ನು ಮನವರಿಕೆ ಮಾಡಿಕೊಡುತ್ತಿದ್ದರು. ಹಾಗಾಗಿ ಪ್ರವಾದಿಯವರ ಸಮಾಜಮುಖಿ ಚಟುವಟಿಕೆಗಳಲ್ಲಿ ದಿನದಿನವೂ ಹೊಸಬರು ಬಂದು ಸೇರಿಕೊಳ್ಳುತ್ತಿದ್ದರು. ಇದು ಕಾಲ ಋತುಗಳ ಭೇದವಿಲ್ಲದೆ ನಿರಂತರವಾಗಿ ನಡೆಯುತ್ತಿತ್ತು.

ಹೀಗೆ ಒಂದು ದಿನ ಹದಿಹರೆಯದ ತರುಣನೊಬ್ಬ ಪ್ರವಾದಿಯವರ ಪ್ರಭಾವಕ್ಕೆ ಒಳಗಾಗಿ ಅವರ ಬಳಿಗೆ ಬಂದ. ಎಂದಿನಂತೆ ಮುಗುಳ್ನಗುತ್ತ ಪ್ರಸನ್ನವದನರಾಗಿ ಆ ಯುವಕನನ್ನು ಬರಮಾಡಿಕೊಂಡರು. ಅವನ ಪೂರ್ವಾಪರ ವಿಚಾರಿಸಿದರು. ಅವನ ಮನೆಯಲ್ಲಿ ವಯಸ್ಸಾದ ತಾಯಿ ತಂದೆ ಇದ್ದರು. ದಿನನಿತ್ಯದ ಹೊಟ್ಟೆಪಾಡಿಗೆ ಅವರು ತಮ್ಮ ಮಗನ ದುಡಿಮೆ ಮತ್ತು ಆರೈಕೆಯನ್ನು ಅವಲಂಬಿಸಿದ್ದರು. ಈ ಹುಡುಗನೂ ಸಾಕಷ್ಟು ಮುತುವರ್ಜಿಯಿಂದ ತಾಯಿ ತಂದೆಯ ಆರೈಕೆಯ ಹೊಣೆ ಹೊತ್ತಿದ್ದ. ಈ ನಡುವೆ ಯಾರೋ ದೊಡ್ಡವರು ಸಿಕ್ಕರು. ಹುಡುಗನಿಗೆ ಧರ್ಮ, ದೇವರು, ಸ್ವರ್ಗ ಮುಂತಾಗಿ ಪ್ರವಚನ ನೀಡಿದರು. ‘ಬೆಟ್ಟದ ಮೇಲೆ ಹುಟ್ಟಿದ ಮರಕ್ಕೆ ಯಾರು ನೀರೆರೆಯುತ್ತಾರೆ? ಬಂಡೆಗಳ ಸಂದಿಗೊಂದಿಯಲ್ಲಿರುವ ಕಪ್ಪೆಗಳಿಗೆ ಆಹಾರ ತಂದಿಕ್ಕುವವರಾರು? ತನ್ನ ಸೃಷ್ಟಿಯನ್ನು ದೇವರು ಹಸಿವು ನೀರಡಿಕೆ ಬಾಧಿಸದ ಹಾಗೆ ನೋಡಿಕೊಳ್ಳುತ್ತಾನೆ. ಆ ದೇವರ ಕೆಲಸ ಮಾಡುತ್ತಾ ಭಕ್ತಿ ಕಾರ್ಯಗಳಲ್ಲಿ ತೊಡಗಿದರೆ ನಿನ್ನ ತಾಯಿ ತಂದೆಗೆ ದೇವರು ಸ್ವರ್ಗದಲ್ಲಿ ಜಾಗ ಕಲ್ಪಿಸುತ್ತಾನೆ’ ಎಂದೆಲ್ಲ ಹೇಳಿದರು. ಹುಡುಗ ಇದರಿಂದ ಪ್ರಭಾವಿತನಾದ. ಪ್ರವಾದಿಯವರ ಬಳಿ ಬಂದು ಅವರ ಧರ್ಮಕಾರ್ಯಗಳಲ್ಲಿ ಇನ್ನು ಮುಂದೆ ತಾನೂ ಜೊತೆಗೂಡುವುದಾಗಿ ನಿವೇದಿಸಿಕೊಂಡ.

ಪ್ರವಾದಿಯವರು ತರುಣನ ಮೈದಡವಿ ಹೇಳಿದರು: ‘ನಮ್ಮೊಂದಿಗೆ ಧರ್ಮದ ಕೆಲಸಕ್ಕೆ ನೂರಾರು ಜನ ಬಂದು ಸೇರುತ್ತಾರೆ. ಅವರಿಗೆ ಸಂಸಾರಗಳಿವೆ. ತಾಯಿ ತಂದೆ, ಹೆಂಡತಿ ಮಕ್ಕಳು ಇದ್ದಾರೆ. ತಾನಿಲ್ಲದಿದ್ದರೂ ಸಂಸಾರ ಸುಸೂತ್ರವಾಗಿ ನಡೆಯುತ್ತದೆ ಅನ್ನುವ ವಿಶ್ವಾಸವಿದ್ದವರನ್ನು ಮಾತ್ರ ನಾವು ಈ ಕಾರ್ಯಕ್ಕೆ ಒಪ್ಪಿಸಿಕೊಳ್ಳುತ್ತೇವೆ. ನಿನ್ನ ಮನೆಗೆ, ನಿನ್ನ ತಂದೆ ತಾಯಿಗೆ ನಿನ್ನ ಅವಶ್ಯಕತೆ ಇದೆ. ಹೆತ್ತವರನ್ನು ಕಡೆಯವರೆಗೂ ಕಣ್ಣರೆಪ್ಪೆಯ ಹಾಗೆ ನೋಡಿಕೊಳ್ಳುವುದು ನಿನ್ನ ಧರ್ಮ. ನಿನ್ನಿಂದ ಮಾತ್ರ ಇದು ಸಾಧ್ಯ. ಬೇರೆ ಯಾರೂ ನಿನ್ನ ಸ್ಥಾನವನ್ನು ತುಂಬಲಾರರು. ನೀನು ಮನೆಗೆ ಹೊರಡು’. ಹೀಗೆ ಹೇಳಿ ತರುಣನನ್ನು ಮನೆಗೆ ಕಳಿಸಿಕೊಡುತ್ತಾರೆ.

ಇವತ್ತು ನಾವೇನು ಕಾಣುತ್ತಿದ್ದೇವೆ? ಒಂದೋ ಅತಿಯಾದ ಲೌಕಿಕ ವ್ಯಾಮೋಹ ಅಥವಾ ಹುಸಿ ಧಾರ್ಮಿಕ ಅತಿರೇಕಗಳು ನಮ್ಮನ್ನು ಆವರಿಸಿವೆ. ಬೆಳಗಾದರೆ ಸಿರಿವಂತನಾಗಬೇಕು, ಒಳ್ಳೆಯದೆಲ್ಲವೂ ನನಗೇ ಬೇಕು ಎನ್ನುವ ಧಾವಂತ ಒಂದು ಕಡೆ. ತಾನೇ ಮೇಲು, ತನ್ನ ಧರ್ಮವೇ ಶ್ರೇಷ್ಠ ಎಂಬ ಅಹಮಿಕೆ ಇನ್ನೊಂದು ಕಡೆ. ಇದರಿಂದ ನಿಜವಾದ ಧರ್ಮದ ತಿಳಿವಳಿಕೆ ಮರೆಯಾಗುತ್ತಿದೆ. ನಮ್ಮ ಜೀವ, ನಮ್ಮ ಬದುಕು ಭುವನದ ಭಾಗ್ಯ. ಇದಕ್ಕೆ ಕಾರಣಕರ್ತರಾದ ತಂದೆ ತಾಯಿ ಸ್ವರ್ಗದ ಸ್ವಾರ್ಥಿಗಳಾಗದೇ ಮಕ್ಕಳನ್ನು ಉಳಿಸಿ ಬೆಳೆಸಿದ್ದಾರೆ. ಅವರ ಮುಪ್ಪು ಹರೆಯದ ಮಕ್ಕಳ ಅವಗಣನೆಗೆ ತುತ್ತಾಗಿ ಸವೆಯುತ್ತಿದೆ. ಹೆತ್ತವರ ಪಾಲನೆಯ ಹೊಣೆಗಾರಿಕೆಯು ಧರ್ಮ ತಿಳಿವಳಿಕೆಗಾಗಿ ಗುಂಪು ಕಟ್ಟಿಕೊಂಡು ಊರೂರು ದೇಶದೇಶಗಳನ್ನು ಅಲೆಯುವುದಕ್ಕಿಂತ ದೊಡ್ಡದು. ಮರಣಾನಂತರದ ಸ್ವರ್ಗದ ಬಯಕೆ ಜೀವಿತಾವಧಿಯ ಯಾರ ನರಕಕ್ಕೂ ಕಾರಣವಾಗಬಾರದು. ತಾಯಿಯ ಪಾದದಡಿಯಲ್ಲಿ ಸ್ವರ್ಗವಿದೆ, ಗಡುಸಾದ ದನಿಯಲ್ಲಿ ತಂದೆ ತಾಯಿಗೆ ಉತ್ತರಿಸುವಷ್ಟೂ ಕಠೋರವಾಗಬಾರದು. ಪ್ರವಾದಿಯವರ ಈ ನುಡಿಹಣತೆ ಧರ್ಮದಾರಿಯಲ್ಲಿ ನಡೆಯುವ ಪ್ರತಿ ಹೆಜ್ಜೆಗೂ ಬೆಳಕಾಗಬೇಕು.

ಗುಂಡಣ್ಣ



ಪದಬಂಧ 6117

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ತಿಂಗಳ ಕೊನೆಗೆ ಒಂದಾಗಿ ಸೇರಿಸಿದುದು (3)
3. ಅವಸರದಲ್ಲಿರುವ ರಾಜ (3)
6. ಈತ ಕರುಣಾಳು (3)
7. ಮಣಿ ಧರಿಸಿರುವ ನಲ್ಲೆ (3)
8. ಟಾರ ರಸ್ತೆ ಬದಿಯಲ್ಲಿನ ಚರಂಡಿ (3)
10. ಮುದ್ದು ಮಾಡುತ್ತಾ ಕುಡಿಸಿದ ಔಷಧ (2)
11. ಕನ್ನ ಕೊರೆದಾಗ ಕಾಣಿಸಿರುವ ದರ್ಪಣ (3)
13. ಹಣವೆಂದಾಗ ಬಾಯ್ಬಿಡುವ ಶವ! (2)
15. ಧನ ಕನಕಗಳಿಗಾಗಿ ನಡೆದ ಯುದ್ಧ (3)
16. ಗೆಲವು ಹೀಗೆ ದೊರಕಿದೆ (3)
17. ಹಾರ ಧರಿಸಿರುವ ಬ್ರಾಹ್ಮಣ (3)
18. ಈ ರೀತಿ ಕೆಳಕ್ಕೆ ಬೀಳಿಸು (3)
19. ತಿರುಗಿಸಿದರೂ ಇದು ಹೊಸದು (3)

ಮೇಲಿಂದ ಕೆಳಕ್ಕೆ

1. ಮಧುರವಾದ ಸ್ವಪ್ನ (5)
2. ಸರ ಕೊಟ್ಟದ್ದಕ್ಕೇ ಈ ಸಲಿಗೆ! (3)
3. ಅಗಲು ನುಂಗುವಾಗ ಬಂದಿರುವ ದುಃಖ (2)
4. ಹದ್ದು ಕುಳಿತಿರುವ ಜಾಗವೇ ಎಲ್ಲೆ! (4)
5. ಪ್ರಾಚೀನ ಭಾರತದ ಸಂಸ್ಕೃತ ಭಾಷಾ ವ್ಯಾಕರಣಕಾರ (3)
9. ಮದುವೆಯಲ್ಲಿ ಮುಂಗೈಗೆ ಕಟ್ಟುವ ರಕ್ಷಾ ಸೂತ್ರ (3)
10. ಉಡಿ ಅಥವಾ ಆಶ್ರಯ (3)
12. ಲೋಹದ ಹಕ್ಕಿಯಲ್ಲಿನ ಪಯಣ (5)
13. ಮಹತ್ವಾಕಾಂಕ್ಷೆಯಿದು (4)
14. ಕುಪ್ಪಸವನ್ನು ಹೀಗೂ ಹೇಳುತ್ತಾರೆ (3)
15. ವನದ ಬಗ್ಗೆ ಬರೆದಿರುವ ಪದ್ಯ (3)
16. ಹಾವುಗೆ ಇರುವ ಜಾಗದಲ್ಲಿ ಕಾಣಿಸಿದ ಉರಗ (2)



6116ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಿಭವ 3.ಬುದ್ಧಿವಾದ 5.ನೆಮ್ಮದಿ 6.ತವಕ 8.ಪಾಮರ 9.ವಿಯೋಗ 10.ಗುಲಾಮ 12.ಕುಣಿಕೆ 14.ಕರವೀರ 15.ಕಚಗುಳಿ

ಮೇಲಿಂದ ಕೆಳಕ್ಕೆ: 1.ಅಭಿಜಾತ 2.ವರ್ತನೆ 3.ಬುನಾದಿ 4.ದವಳಾರ 7.ಕದಗ 8.ಪಾರಾಗು 9.ವಿನಾಯಕ 11.ಮರೆಗುಳಿ 12.ಕುಠಾರ 13.ಕೆಡುಕ

ಸುಡೊಕು 6501

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6	3			9		1		8
	1			3			6	
		7	4			3		9
2	9				4	6		
1	4			5				2
			1				9	4
3		9			5		7	
	8			1		9		3
4		1	3		9		8	

6500 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

28 ಜುಲೈ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಚತುರ್ಥಿ ಗಂ. 23-25 **ನಕ್ಷತ್ರ:** ಪೂರ್ವ ಫಾಲ್ಗುಣಿ ಗಂ. 17-36 **ಯೋಗ:** ಪರಿಘ ಗಂ. 26-54 **ಕರಣ:** ವಣಿಜ ಗಂ. 10-59, ಕರ್ಕಾಟಕ ಮಾಸದ 12 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 09-00, **ಸೂರ್ಯೋದಯ:** 06-18 **ಸೂರ್ಯಾಸ್ತ:** 06-56, **ಮುಸ್ಲಿಂ ದಿನಾಂಕ:** 02 ಸಫರ್, **ದಿನ ವಿಶೇಷ:** ಶ್ರಾವಣ ಸೋಮವಾರ, **ಅದೃಷ್ಟ ಸಂಖ್ಯೆ:** 6, 7

ಮೇಷ: ಭವಿಷ್ಯದ ಬಗ್ಗೆ ಕೆಲವು ಗಂಭೀರ ಹಾಗೂ ಅರ್ಥಪೂರ್ಣ ಪ್ರಶ್ನೆಗಳು ಕಾಡಲಿವೆ. ಗಂಭೀರ ಆಲೋಚನೆ ನೈತಿಕತೆ ಮೇಲೆ ಪರಿಣಾಮ ಬೀರುವುದು. ಒಳಾಂಗಣ ವಿನ್ಯಾಸಕಾರರು, ಆರ್ಕಿಟೆಕ್ಟ್‌ಗಳು ಹೊಸರೀತಿಯಲ್ಲಿ ಆಲೋಚಿಸಿ.

ವೃಷಭ: ಆಫೀಸಿನಲ್ಲಿಂದು ಸಮರ್ಥಿಸಿಕೊಳ್ಳುವುದು ಕಷ್ಟ ಎನಿಸಿದರೂ ಜಯ ಸಿಗಲಿದೆ. ಬರಹಗಾರರಿಗೆ ಹಾಗೂ ಚಲನಚಿತ್ರರಂಗದವರಿಗೆ ಹಣದ ಜತೆಗೆ ಖ್ಯಾತಿಯೂ ದೊರೆಯುವುದು.

ಮಿಥುನ: ಮುಂದಿನ ಕೆಲಸಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುವುದು ವಿಜಯಕ್ಕೆ ಮುಖ್ಯ ಕಾರಣವಾಗುವುದು. ಹೂಡಿಕೆಯ ವಿಷಯದಲ್ಲಿ ನಿಶ್ಚಿಂತೆಯಿಂದ ಇರಿ. ಹೊಸ ವಿಷಯಗಳನ್ನು ಪತ್ತೆ ಮಾಡುವ ಬಗ್ಗೆ ಕುತೂಹಲ ಹೆಚ್ಚಾಗಲಿದೆ.

ಕರ್ಕಾಟಕ: ಹಿಂದಿನ ಸಣ್ಣ ಹೂಡಿಕೆಯೂ ಭಾರಿ ಲಾಭ ತರುವ ಸಾಧ್ಯತೆ ಇದೆ. ಆಪ್ತಸ್ನೇಹಿತರನ್ನು ಪ್ರೋತ್ಸಾಹಿಸುವ ಜವಾಬ್ದಾರಿ ನಿಮ್ಮದಾಗಿದೆ. ಲವಲವಿಕೆಯಿಂದ ಕೆಲಸಗಳನ್ನು ಮಾಡುವಿರಿ.

ಸಿಂಹ: ಕಠಿಣ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸುವಲ್ಲಿ ಯಶಸ್ವಿ ಆಗುವಿರಿ. ಗುರುಗಳಿಂದ ವಿದ್ಯಾರ್ಥಿಗಳಿಗೆ ಪ್ರಶಂಸೆ ಸಿಗಲಿದೆ. ವೈದ್ಯಕೀಯ ಕ್ಷೇತ್ರದವರಿಗೆ ಕ್ಲಿಷ್ಟಕರ ಕೆಲಸಗಳು ಎದುರಾಗಲಿವೆ.

ಕನ್ಯಾ: ವೃತ್ತಿ ಮತ್ತು ಪ್ರವೃತ್ತಿಯಂಥ ಎರಡು ದೋಣಿಗೆ ಕಾಲುಹಾಕಿದ ಸ್ಥಿತಿಯಿಂದ ಹೊರಬಂದು, ವೃತ್ತಿಯ ಬಗ್ಗೆ ಸಂಪೂರ್ಣವಾಗಿ ಗಮನ ವಹಿಸಿ. ಸಗಟು ವ್ಯಾಪಾರವನ್ನು ಪ್ರಾರಂಭಿಸಲು ಸಕಾಲ.

ತುಲಾ: ರಾಜಕೀಯ ವ್ಯಕ್ತಿಗಳು ಪಕ್ಷದ ವರಿಷ್ಠರಲ್ಲಿ ಇಟ್ಟಂತಹ ಬೇಡಿಕೆಗಳು ಈಡೇರಲಿವೆ. ಆರೋಗ್ಯದ ದೃಷ್ಟಿಯಿಂದ ಧ್ಯಾನ ಮತ್ತು ವ್ಯಾಯಾಮ ಆರಂಭಿಸುವುದು ಫಲಕಾರಿಯಾಗಲಿದೆ.

ವೃಶ್ಚಿಕ: ಅಂದುಕೊಂಡ ಕಾರ್ಯಗಳು ನಿಧಾನಗತಿಯಲ್ಲಿ ಇದ್ದರೂ, ಪ್ರಗತಿಯತ್ತ ಸಾಗುವುದು ಸಂತೋಷವನ್ನು ತರಲಿದೆ. ನಿವೇಶನ ಮಾರಾಟದಲ್ಲಿ ಲಾಭವನ್ನು ಹೊಂದುವಿರಿ. ಪ್ರಾಮಾಣಿಕತೆಯಿಂದ ದೇವರ ಕೃಪೆಗೆ ಪಾತ್ರರಾಗುವಿರಿ.

ಧನು: ಅರಣ್ಯ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿದೆ. ಕೌಟುಂಬಿಕವಾಗಿ ಇದ್ದಂತಹ ಎಲ್ಲಾ ತೊಂದರೆಗಳು ನಿವಾರಣೆ ಆಗಲಿವೆ. ಬರುವ ಅವಕಾಶಗಳನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಳ್ಳಿರಿ.

ಮಕರ: ಕೆಲಸವನ್ನು ಬೇರೆಯವರು ತನ್ನದೆಂದು ಹೇಳಿಕೊಳ್ಳುವುದನ್ನು ನೋಡಬೇಕಾಗಬಹುದು. ಪ್ರಭಾವಿ ವ್ಯಕ್ತಿಗಳ ಮೇಲೆ ದ್ವೇಷ ಇಟ್ಟುಕೊಂಡು ಅದನ್ನು ಸಾಧಿಸುವುದರಲ್ಲಿ ಹುರುಳಿಲ್ಲ. ದೃಢ ನಿರ್ಧಾರ ತೆಗೆದುಕೊಳ್ಳಿರಿ.

ಕುಂಭ: ಭೂಖರೀದಿಗೆ ಮುಂದಾಗಿರುವ ಆಯ-ವ್ಯಯದ ಬಗ್ಗೆ ವಾಸ್ತು ವಿಚಾರದ ಬಗ್ಗೆ ಗಮನಹರಿಸುವುದು ಒಳ್ಳೆಯದು. ಮಂಗಳಕರ ಕಾರ್ಯಕ್ರಮ-ಕ್ಕೆ ಉಡುಗೆ ತೊಡುಗೆಗಳು ಸಾಂಪ್ರದಾಯಿಕವಾಗಿರಲಿ

ಮೀನ: ಕೆಲವು ವಿಚಾರಗಳು ಭ್ರಾಂತಿಯ ಕಾರಣದಿಂದ ಅನಿಶ್ಚಿತತೆಯನ್ನು ಉಂಟುಮಾಡಬಹುದು. ಕಾರ್ಯಗಳ ನಿರ್ವಹಣೆಯನ್ನು ಇತರರಿಗೆ ಕೊಟ್ಟರೆ ಮಂದಗತಿಯಲ್ಲಿ ಸಾಗುವ ಸಾಧ್ಯತೆ ಇರುತ್ತದೆ.

ಚಿಟಿಕೆ ಸುದ್ದಿ

'ಭಾರತದ ಆರ್ಥಿಕತೆ ಸದೃಢ'

ನವದೆಹಲಿ (ಪಿಟಿಐ): 'ದೇಶದ ಆರ್ಥಿಕತೆಯು ಸದೃಢವಾಗಿ ಬೆಳೆಯುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 6.5ಕ್ಕೂ ಹೆಚ್ಚು ಇರಲಿದೆ' ಎಂದು ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸದಸ್ಯ ನಾಗೇಶ್ ಕುಮಾರ್ ಭಾನುವಾರ ಹೇಳಿದ್ದಾರೆ.

ಜಗತ್ತಿನ ಎಲ್ಲ ಆರ್ಥಿಕತೆಗಿಂತ ಭಾರತದ ಆರ್ಥಿಕತೆಯು ಉಜ್ವಲವಾಗಿದೆ. ಜಗತ್ತಿನ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ರಾಷ್ಟ್ರಗಳು ಸಾಲದ ಬಿಕ್ಕಟ್ಟಿನಲ್ಲಿವೆ. ಹೆಚ್ಚಿನ ಹಣದುಬ್ಬರ, ಆರ್ಥಿಕತೆಯ ಮಂದಗತಿಯನ್ನು ಎದುರಿಸುತ್ತಿವೆ. ಆದರೆ, ಭಾರತದ ಆರ್ಥಿಕತೆಯು ನಿರಂತರವಾಗಿ ಬೆಳವಣಿಗೆ ಕಾಣುತ್ತಿದೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಪ್ರಸಕ್ತ ಮತ್ತು ಮುಂದಿನ ಆರ್ಥಿಕ ವರ್ಷದಲ್ಲಿ ದೇಶವು ಶೇ 6.5ಕ್ಕೂ ಹೆಚ್ಚು ಬೆಳವಣಿಗೆಯನ್ನು ಸಾಧಿಸುವಲ್ಲಿ ಯಾವುದೇ ಸವಾಲುಗಳು ಕಾಣುತ್ತಿಲ್ಲ. ಮುಂಬರುವ ವರ್ಷಗಳಲ್ಲಿ ಆರ್ಥಿಕತೆಯು ಶೇ 7ರಿಂದ ಶೇ 7.5ರಷ್ಟು ಬೆಳವಣಿಗೆ ಆಗಲಿದೆ ಎಂದರು.

ಹಣದುಬ್ಬರ ಇಳಿಯುತ್ತಿದೆ. ಆರ್‌ಬಿಐ ರೆಪೊ ದರ ಮತ್ತೆ ಕಡಿತ ಮಾಡುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ನಾಗೇಶ್, ವಿವಿಧ ಮಾನದಂಡಗಳ ಆಧಾರದ ಮೇಲೆ ರೆಪೊ ದರ ನಿರ್ಣಯಿಸಲಾಗುತ್ತದೆ. ಹಣದುಬ್ಬರದ ದತ್ತಾಂಶವೊಂದೇ ಮಾನದಂಡವಲ್ಲ ಎಂದು ಹೇಳಿದ್ದಾರೆ.

ಆಗಸ್ಟ್‌ನಲ್ಲಿ ಆರ್‌ಬಿಐನ ಎಂಪಿಸಿ ಸಭೆ ನಡೆಯಲಿದೆ.


ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹495	100 ಕ್ಕೆ	₹490
12 ಕ್ಕೆ	₹70		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹205-580
ದ್ವಿತಳಿ (ಬಿ.ವಿ)	₹222-719

'ಸರ್ಕಾರಿ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಠೇವಣಿ ಬಡ್ಡಿ ದರ ಕಡಿಮೆ'



ಮುಂಬೈ (ಪಿಟಿಐ): ಸರ್ಕಾರಿ ವಲಯದ ಕೆಲವು ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆಯ ಠೇವಣಿ ಮೇಲೆ ನೀಡುವ ಬಡ್ಡಿದರದ ಪ್ರಮಾಣ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಜುಲೈ ತಿಂಗಳ ಬುಲೆಟಿನ್ ತಿಳಿಸಿದೆ.

2011ರ ಅಕ್ಟೋಬರ್‌ನಲ್ಲಿ ಆರ್‌ಬಿಐ ಉಳಿತಾಯ ಖಾತೆಯ ಠೇವಣಿ ಮೇಲಿನ ಬಡ್ಡಿದರದ ನಿಯಂತ್ರಣವನ್ನು ತೆಗೆದುಹಾಕಿ, ಬ್ಯಾಂಕ್‌ಗಳು ತಮ್ಮದೇ ಆದ ಬಡ್ಡಿ ದರವನ್ನು ನಿರ್ಧರಿಸಲು ಅನುಮತಿ ನೀಡಿತು. ಅಂದಿನಿಂದ ಉಳಿತಾಯ ಖಾತೆಯ ಠೇವಣಿ ಪ್ರಮಾಣ ಇಳಿಕೆ ಆಗುತ್ತಿದೆ ಎಂದು ತಿಳಿಸಿದೆ.

ಇದರಿಂದ ಸರ್ಕಾರಿ ಬ್ಯಾಂಕ್‌ಗಳು ಮಾತ್ರವಲ್ಲದೆ, ಖಾಸಗಿ ಬ್ಯಾಂಕ್‌ಗಳಲ್ಲೂ ಸಹ ಹೊಸ ಠೇವಣಿ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿಸಿದೆ.

ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಸೆಪ್ಟೆಂಬರ್ ತ್ರೈಮಾಸಿಕದಲ್ಲೂ ಸರ್ಕಾರ ಯಥಾಸ್ಥಿತಿಯಲ್ಲಿ ಇರಿಸಿದೆ.

ಪ್ರಸಕ್ತ ವರ್ಷದ ಫೆಬ್ರುವರಿಯಿಂದ ರೆಪೊ ದರವನ್ನು ಆರ್‌ಬಿಐ, ಶೇ 1ರಷ್ಟು ಕಡಿಮೆ ಮಾಡಿದೆ. ಬ್ಯಾಂಕ್‌ಗಳು ಸಹ ರೆಪೊ ಆಧಾರಿತ ಸಾಲದ ಬಡ್ಡಿ ದರವನ್ನು (ಆರ್‌ಎಲ್‌ಎಲ್‌ಆರ್) ಶೇ 1ರಷ್ಟು ಕಡಿಮೆ ಮಾಡಿವೆ.

ಕಮಲಾ ವಿರುದ್ಧ ಕಾನೂನು ಕ್ರಮಕ್ಕೆ ಟ್ರಂಪ್ ಒತ್ತಾಯ

ನ್ಯೂಯಾರ್ಕ್ (ಪಿಟಿಐ): 'ಕಳೆದ ವರ್ಷ ನಡೆದ ಅಧ್ಯಕ್ಷೀಯ ಚುನಾವಣೆ ವೇಳೆ ತಮ್ಮ ಪರ ಪ್ರಚಾರ ನಡೆಸಲು ಸೆಲೆಬ್ರಿಟಿ ಕಲಾವಿದರಿಗೆ ಆಗಿನ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ದೊಡ್ಡ ಮೊತ್ತದ ಹಣ ನೀಡಿದ್ದು, ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒತ್ತಾಯಿಸಿದ್ದಾರೆ.

'ನಿಮ್ಮ ಪರ ಪ್ರಚಾರ ನಡೆಸಲು ಹಣ ನೀಡಲು ಅವಕಾಶವಿಲ್ಲ. ಆ ರೀತಿ ಮಾಡುವುದು ಸಂಪೂರ್ಣವಾಗಿ ಕಾನೂನಿಗೆ ವಿರುದ್ಧವಾಗಿದೆ. ಒಂದೊಮ್ಮೆ ರಾಜಕಾರಣಿಗಳು ತಮ್ಮ ಪರ ಪ್ರಚಾರಕ್ಕೆ ಹಣ ಪಾವತಿಸಿದರೆ ಏನಾಗಬಹುದು ಎಂದು ಯೋಚಿಸಿ' ಎಂದು ಟ್ರಂಪ್ ಅವರು ಸಾಮಾಜಿಕ ಜಾಲತಾಣ 'ಟ್ರುತ್'ನಲ್ಲಿ ಬರೆದುಕೊಂಡಿದ್ದಾರೆ.

'ಕಮಲಾ ಹ್ಯಾರಿಸ್ ಬೆಂಬಲಿಸಲು ಸೆಲೆಬ್ರಿಟಿಗಳಾದ ಬಿಯಾನ್ಸ್, ಒಪ್ರಾ, ಅಲ್ ಶಾರ್ಪ್‌ಟನ್ ಅವರಿಗೆ ಹಣ


ಕಮಲಾ ಹ್ಯಾರಿಸ್ ಮತ್ತು ಡೊನಾಲ್ಡ್ ಟ್ರಂಪ್ —ಎಎಫ್‌ಪಿ ಚಿತ್ರ

ಪಾವತಿಸಲಾಗಿತ್ತು. ಆ ಮೂಲಕ ಕಾನೂನು ಮುರಿದಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಕಳೆದ ವರ್ಷ ನಡೆದ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಕಮಲಾ ಹ್ಯಾರಿಸ್ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದಿಂದ 79 ವರ್ಷದ ಡೊನಾಲ್ಡ್ ಟ್ರಂಪ್ ಗೆದ್ದು ಅಧ್ಯಕ್ಷರಾಗಿ, ಶ್ವೇತಭವನ ಪ್ರವೇಶಿಸಿದ್ದರು.

ಎಂ.ಎಫ್: ಹೂಡಿಕೆಗೆ ಎಷ್ಟು ಫಂಡ್ ಬೇಕು?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

'ಹೂಡಿಕೆಯಲ್ಲಿ ವೈವಿಧ್ಯತೆ ಕಾಯ್ದುಕೊಳ್ಳಬೇಕು, ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡಬಾರದು'. ಇದು ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳಿರುವ ಮಾತು. ಹೂಡಿಕೆಯ ವಿಷಯ ಬಂದಾಗ ಪೋರ್ಟ್‌ಫೋಲಿಯೋದಲ್ಲಿ ವೈವಿಧ್ಯತೆ ಬಹಳ ಮುಖ್ಯವಾದ ಅಂಶ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅತಿಯಾದ ವೈವಿಧ್ಯತೆ ಅಪಾಯಕಾರಿ ಎನ್ನುವ ಸತ್ಯ ನಮಗೆ ಗೊತ್ತಿರಬೇಕು. ಬೇರೆ ಬೇರೆ ಮಾದರಿಯ ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ನಾವು ತೊಡಗಿಸಬೇಕು ಎಂಬ ಲೆಕ್ಕಾಚಾರ ಇಟ್ಟುಕೊಂಡು ಅಳತೆ ಅಂದಾಜಿಲ್ಲದೆ ಹೆಚ್ಚೆಚ್ಚು ಫಂಡ್‌ಗಳ ಮೇಲೆ ತೊಡಗಿಸಿದಾಗ ಗೊಂದಲ ಉಂಟಾಗುತ್ತದೆ. ಅಷ್ಟೇ ಅಲ್ಲ, ಹೂಡಿಕೆಗಳ ಸರಿಯಾದ ನಿರ್ವಹಣೆ ಸಾಧ್ಯವಾಗದೆ ಗಳಿಕೆಯ ಪ್ರಮಾಣ ತಗ್ಗುವ ಸಾಧ್ಯತೆಯೂ ಇರುತ್ತದೆ. ಹಾಗಾದರೆ ನಿಮ್ಮ ಪೋರ್ಟ್‌ಫೋಲಿಯೋದಲ್ಲಿ ಮ್ಯೂಚುವಲ್ ಫಂಡ್‌ಗಳ ಸರಿಯಾದ ಮಿಶ್ರಣ ಕಾಯ್ದುಕೊಳ್ಳೋದು ಹೇಗೆ? ಬನ್ನಿ ತಿಳಿಯೋಣ.

ನೀವು ಎಷ್ಟು ಮ್ಯೂಚುವಲ್ ಫಂಡ್‌ಗಳ ಮೇಲೆ ಹೂಡಿಕೆ ಮಾಡಬೇಕು?: ಯಾವುದೇ ಮ್ಯೂಚುವಲ್ ಫಂಡ್ ಹೂಡಿಕೆದಾರನಿಗೆ ಎಷ್ಟು ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು ಎನ್ನುವ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಸರಳ ಉತ್ತರ ಒಂದು ಮ್ಯೂಚುವಲ್ ಫಂಡ್ ಸಾಲುವುದಿಲ್ಲ ಒಂದಕ್ಕಿಂತ ಹೆಚ್ಚಿನ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು ಎನ್ನುವುದು. ಹೌದು, ಸಾಮಾನ್ಯವಾಗಿ ಪ್ರತಿಯೊಂದು ಮ್ಯೂಚುವಲ್ ಫಂಡ್ ಹೂಡಿಕೆಯೂ ಕೂಡ ವೈವಿಧ್ಯತೆಯಿಂದ ಕೂಡಿರುತ್ತದೆ. ಉದಾಹರಣೆಗೆ ಒಂದು ಮ್ಯೂಚುವಲ್ ಫಂಡ್ ಮೇಲೆ ನೀವು ಹಣ ತೊಡಗಿಸಿದರೆ ಆ ಮೊತ್ತ ಅಂದಾಜು 50ರಿಂದ 100 ಕಂಪನಿಗಳ ಮೇಲೆ ಹೂಡಿಕೆಯಾಗುತ್ತದೆ. ಹೀಗಿದ್ದರೂ ಸಹಿತ ಒಂದೇ ಮ್ಯೂಚುವಲ್ ಫಂಡ್ ನೆಚ್ಚಿಕೊಂಡು ಹೂಡಿಕೆ ಮಾಡಬಾರದು. ಒಂದೇ ಮ್ಯೂಚುವಲ್ ಫಂಡ್ ಮೇಲೆ ಭರವಸೆ ಇಡುವುದೆಂದರೆ ಒಬ್ಬ ಮ್ಯೂಚುವಲ್ ಫಂಡ್ ಮ್ಯಾನೇಜರ್‌ನ ಹಣಕಾಸು ನಿರ್ವಹಣೆ ಶೈಲಿಯ ಮೇಲೆ ಅತಿಯಾದ ವಿಶ್ವಾಸ ಇಟ್ಟಂತೆ. ಫಂಡ್ ಮ್ಯಾನೇಜರ್ ತೆಗೆದುಕೊಳ್ಳುವ ಹೂಡಿಕೆ ನಿರ್ಧಾರಗಳು ಕೂಡ ತಪ್ಪಾಗಬಹುದು ಎಂಬ ಲೆಕ್ಕಾಚಾರ ಇಲ್ಲಿ ನಮಗಿರಬೇಕು.

ಎಷ್ಟು ಮ್ಯೂಚುವಲ್ ಫಂಡ್‌ಗಳು ಸಾಕು?: ನಿಮ್ಮ ಹೂಡಿಕೆ ಪೋರ್ಟ್‌ಫೋಲಿಯೋದಲ್ಲಿ ಸಾಕಷ್ಟು ಫಂಡ್‌ಗಳಿವೆ ಎಂದಾಕ್ಷಣ ನೀವು ಹೂಡಿಕೆಯಲ್ಲಿ ವೈವಿಧ್ಯತೆ ಸಾಧಿಸಿದ್ದೀರಿ ಎಂದಲ್ಲ. ಒಂದು ಪೋರ್ಟ್‌ಫೋಲಿಯೋದಲ್ಲಿ ಹತ್ತರಿಂದ ಹದಿನೈದು ಫಂಡ್‌ಗಳಿದ್ದು ಒಂದಕ್ಕೊಂದು ಫಂಡ್‌ನ ಮಾದರಿ ಹೋಲಿಕೆಯಾಗುತ್ತಿದ್ದರೆ ಅಲ್ಲಿ ಹೂಡಿಕೆ ವೈವಿಧ್ಯತೆ ಸಾಧಿಸಲು ಸಾಧ್ಯವಾಗುವುದಿಲ್ಲ. ಅಸಲಿಗೆ ಒಂದು ಪೋರ್ಟ್‌ಫೋಲಿಯೋಗೆ 4 ಫಂಡ್‌ಗಳು ಸಾಕು ಎನ್ನುವುದು ತಜ್ಞರ ಅಭಿಮತ. ಅದಕ್ಕಿಂತ ಹೆಚ್ಚು ಫಂಡ್‌ಗಳ ಮೇಲೆ ನೀವು ಹೂಡಿಕೆ ಮಾಡಿದ್ದರೆ ಹೂಡಿಕೆಯ ನಕಲಾಗುತ್ತಿರುತ್ತದೆ. ವಿವಿಧ ಮ್ಯೂಚುವಲ್ ಫಂಡ್‌ಗಳು ಷೇರು ಮಾರುಕಟ್ಟೆಯಲ್ಲಿರುವ ಒಂದಷ್ಟು ಪ್ರಮುಖ ಕಂಪನಿಗಳ ಮೇಲೆಯೇ ಹೂಡಿಕೆ ಮಾಡುತ್ತಿರುತ್ತವೆ. ವಾಸ್ತವಿಕ ಲೆಕ್ಕಾಚಾರ ಹೀಗಿರುವಾಗ ನಾಲ್ಕಕ್ಕಿಂತ ಹೆಚ್ಚಿನ ಫಂಡ್‌ಗಳಲ್ಲಿ ತೊಡಗಿಸುವುದರಲ್ಲಿ ಯಾವುದೇ ಹೆಚ್ಚುಗಾರಿಕೆ ಇಲ್ಲ.

ವಿವಿಧ ವಲಯಗಳ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಬೇಕೇ, ಬೇಡವೇ?: ವಾಸ್ತವದಲ್ಲಿ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳುವಾಗ ವಿವಿಧ ಮಾದರಿಗಳನ್ನು ಪರಿಗಣಿಸಬೇಕು. ವಿವಿಧ ವಲಯಗಳ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಂಡಾಗ ವೈವಿಧ್ಯತೆ ಸಾಧ್ಯವಾಗುವ ಜೊತಗೆ ಮಾರುಕಟ್ಟೆಯ ಏರಿಳಿತದ ರಿಸ್ಕ್ ಅನ್ನು ನಿಭಾಯಿಸಲು ಸಾಧ್ಯವಾಗುತ್ತದೆ. ನಾನಾ ಮಾದರಿಯ ಕಂಪನಿಗಳು ಬೇರೆ ಬೇರೆ ಸಂದರ್ಭದಲ್ಲಿ ಸಕಾರಾತ್ಮಕ ಮತ್ತು ಸಕಾರಾತ್ಮಕವಾಗಿ ವರ್ತಿಸುವುದರಿಂದ ನಿಮ್ಮ ಪೋರ್ಟ್‌ಫೋಲಿಯೋ ಸುರಕ್ಷತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಹಾಗಾದರೆ ಯಾವೆಲ್ಲಾ ಫಂಡ್‌ಗಳನ್ನು ಪರಿಗಣಿಸಬೇಕು? ಬನ್ನಿ ತಿಳಿಯೋಣ.

• **ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್:** ಇಎಲ್‌ಎಸ್‌ಎಸ್ ಫಂಡ್ ಅಂದರೆ ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಂ ಅಂತ. ಈ ಫಂಡ್ ಅನ್ನು ಟ್ಯಾಕ್ಸ್ ಸೇವರ್ ಫಂಡ್ ಅಂತಲೂ ಕರೆಯುತ್ತಾರೆ. ಇಎಲ್‌ಎಸ್‌ಎಸ್ ಫಂಡ್‌ಗಳಲ್ಲಿ ಹಾಕಿದ ಶೇ 80ರಷ್ಟು ದುಡ್ಡನ್ನು ಷೇರು ಮಾರುಕಟ್ಟೆ ಮತ್ತು ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ತೊಡಗಿಸಲಾಗುತ್ತದೆ. ಮೂರು ವರ್ಷಗಳ ಲಾಕಿನ್ ಅವಧಿ ಇರುವ ಈ ಫಂಡ್‌ನಲ್ಲಿ ಹೂಡಿದರೆ ಆದಾಯ ತೆರಿಗೆಯ ಸೆಕ್ಷನ್ 80 ಸಿ ಅಡಿಯಲ್ಲಿ ವಾರ್ಷಿಕ ₹1.5 ಲಕ್ಷದ ವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಸಣ್ಣ ಮೊತ್ತ (ಎಸ್‌ಐಪಿ) ಅಥವಾ ದೊಡ್ಡ ಮೊತ್ತ ಹೂಡಿಕೆಗೆ ಅವಕಾಶವಿದೆ. ದೊಡ್ಡ ಗಾತ್ರ (ಲಾರ್ಜ್ ಕ್ಯಾಪ್), ಮಧ್ಯಮ ಗಾತ್ರ (ಮಿಡ್ ಕ್ಯಾಪ್) ಮತ್ತು ಸಣ್ಣ ಗಾತ್ರದ (ಸ್ಮಾಲ್ ಕ್ಯಾಪ್) ಕಂಪನಿಗಳ ಮೇಲೆ ಹೂಡಿಕೆ ಮಾಡಲು ಇಎಲ್‌ಎಸ್‌ಎಸ್ ಫಂಡ್‌ಗಳಲ್ಲಿ ಅವಕಾಶವಿರುವ ಕಾರಣ ಹೂಡಿಕೆ ವೈವಿಧ್ಯತೆ ಕಾಯ್ದುಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಮ್ಯೂಚುವಲ್ ಫಂಡ್‌ಗೆ ಈಗಷ್ಟೇ ಪ್ರವೇಶ ಮಾಡುತ್ತಿದ್ದೇವೆ, ಹೆಚ್ಚು ರಿಸ್ಕ್ ಇರಬಾರದು, ತೆರಿಗೆಯೂ ಉಳಿಯಬೇಕು ಎನ್ನುವವರಿಗೆ ಇದು ಸೂಕ್ತ.

• **ಅಗ್ರೆಸಿವ್ ಹೈಬ್ರೀಡ್ ಮ್ಯೂಚುವಲ್ ಫಂಡ್:** ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳು ಮತ್ತು ಡೆಟ್ (ಬಾಂಡ್ ಮಾದರಿಯ ಸುರಕ್ಷಿತ ಹೂಡಿಕೆ) ಹೂಡಿಕೆಗಳ ಮಿಶ್ರಣ ಹೊಂದಿರುವ ಫಂಡ್‌ಗಳನ್ನು ಅಗ್ರೆಸಿವ್ ಹೈಬ್ರೀಡ್ ಫಂಡ್ ಎನ್ನಲಾಗುತ್ತದೆ. ಅಗ್ರೆಸಿವ್ ಹೈಬ್ರೀಡ್ ಮ್ಯೂಚುವಲ್ ಫಂಡ್‌ಗಳನ್ನು ಈ ಮೊದಲು ಬ್ಯಾಲೆನ್ಸ್ಡ್ ಫಂಡ್ ಎಂದು ಕರೆಯಲಾಗುತ್ತಿತ್ತು. ಈ ಫಂಡ್‌ನಲ್ಲಿ ಹೂಡಿಕೆದಾರರ ಶೇ 20ರಿಂದ ಶೇ 35ರಷ್ಟು ಮೊತ್ತವನ್ನು ಡೆಟ್ ಹೂಡಿಕೆಗಳಲ್ಲಿ ತೊಡಗಿಸಲು ಅವಕಾಶವಿದ್ದು ಶೇ 65ರಿಂದ ಶೇ 80ರಷ್ಟು ಮೊತ್ತವನ್ನು ಷೇರು ಮಾರುಕಟ್ಟೆ ಆಧಾರಿತ ಉತ್ಪನ್ನಗಳಲ್ಲಿ ತೊಡಗಿಸಲು ಅವಕಾಶವಿರುತ್ತದೆ. ಇಲ್ಲಿ ಸುರಕ್ಷಿತ ಮತ್ತು ಮಾರುಕಟ್ಟೆ ಆಧಾರಿತ ಹೂಡಿಕೆಯ ಮಿಶ್ರಣವಿರುವ ಕಾರಣ ವೈವಿಧ್ಯತೆ ಸಾಧ್ಯವಾಗುವ ಜೊತೆಗೆ ರಿಸ್ಕ್ ಕೂಡ ಕೊಂಚ ಕಡಿಮೆ ಅನ್ನಬಹುದು. ಮೂರರಿಂದ ಐದು ವರ್ಷ ಹೂಡಿಕೆ ಮಾಡುತ್ತೇವೆ ಎನ್ನುವವರಿಗೆ ಇದು ಸರಿ ಹೊಂದುತ್ತದೆ.

• **ಲಾರ್ಜ್ ಮತ್ತು ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು:** ಷೇರು ಮಾರುಕಟ್ಟೆಯಲ್ಲಿರುವ ಅಗ್ರಮಾನ್ಯ 250 ಕಂಪನಿಗಳ ಮೇಲೆ ಲಾರ್ಜ್ ಆ್ಯಂಡ್ ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆ ಮಾಡುತ್ತವೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿಯ) ನಿಯಮದ ಪ್ರಕಾರ ಈ ಮಾದರಿಯ ಮ್ಯೂಚುವಲ್ ಫಂಡ್‌ಗಳು ಕನಿಷ್ಠ ಶೇ 35ರಷ್ಟು ಹಣವನ್ನು ಲಾರ್ಜ್‌ಕ್ಯಾಪ್ ಕಂಪನಿಗಳ ಮೇಲೆ ಮತ್ತು ಶೇ 35ರಷ್ಟು ಮೊತ್ತವನ್ನು ಮಿಡ್ ಕ್ಯಾಪ್ ಕಂಪನಿಗಳ ಮೇಲೆ ಹೂಡಿಕೆ ಮಾಡಬೇಕಾಗುತ್ತದೆ. ಈ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ ಲಾರ್ಜ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಕಂಪನಿಗಳ ಮೇಲೆ ಹೂಡಿಕೆ ಸಾಧ್ಯವಾಗುತ್ತದೆ. ಲಾರ್ಜ್‌ಕ್ಯಾಪ್ ಫಂಡ್‌ಗಳು ಮಾರುಕಟ್ಟೆ ಅನಿಶ್ಚಿತತೆಯ ಸಂದರ್ಭದಲ್ಲಿ ಸ್ಥಿರತೆ ತಂದುಕೊಟ್ಟರೆ, ಮಿಡ್ ಕ್ಯಾಪ್ ಫಂಡ್‌ಗಳು ದೀರ್ಘಾವಧಿಯಲ್ಲಿ ಉತ್ತಮ ಬೆಳವಣಿಗೆ ತಂದುಕೊಡುತ್ತವೆ. 5 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಹೂಡಿಕೆ ಮಾಡಲು ಈ ಫಂಡ್ ಸೂಕ್ತ.

ಮಲ್ಟಿಕ್ಯಾಪ್ ಮ್ಯೂಚುವಲ್ ಫಂಡ್‌ಗಳು

ಷೇರು ಮಾರುಕಟ್ಟೆಯಲ್ಲಿರುವ ಎಲ್ಲಾ ವಲಯಗಳ ಎಲ್ಲಾ ಗಾತ್ರದ ಕಂಪನಿಗಳ ಮೇಲೆ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳನ್ನು ಮಲ್ಟಿಕ್ಯಾಪ್ ಮ್ಯೂಚುವಲ್ ಫಂಡ್ ಎಂದು ಕರೆಯಲಾಗುತ್ತದೆ. ಹೂಡಿಕೆ ವೈವಿಧ್ಯತೆ ಸಾಧಿಸಲು ಈ ಫಂಡ್ ಒಂದು ಉತ್ತಮ ಆಯ್ಕೆ. ಸೆಬಿ ನಿಯಮದ ಪ್ರಕಾರ ಈ ಫಂಡ್‌ನಲ್ಲಿ ಶೇ 25ರಷ್ಟು ಮೊತ್ತವನ್ನು ಲಾರ್ಜ್ ಕ್ಯಾಪ್, ಶೇ 25ರಷ್ಟು ಮೊತ್ತವನ್ನು ಮಿಡ್ ಕ್ಯಾಪ್ ಮತ್ತು ಶೇ 25ರಷ್ಟು ಮೊತ್ತವನ್ನು ಸ್ಮಾಲ್ ಕ್ಯಾಪ್ ಕಂಪನಿಗಳ ಮೇಲೆ ತೊಡಗಿಸಬೇಕಾಗುತ್ತದೆ. ಮಾರುಕಟ್ಟೆಯ ಪರಿಸ್ಥಿತಿ ಆಧರಿಸಿ ಹೂಡಿಕೆ ಸೂತ್ರವನ್ನು ಬದಲಿಸುವ ಅವಕಾಶ ಫಂಡ್ ಮ್ಯಾನೇಜರ್‌ಗೆ ಇರುತ್ತದೆ. 5 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಹೂಡಿಕೆ ಮಾಡಬೇಕು ಎನ್ನುವವರಿಗೆ ಈ ಫಂಡ್‌ಗಳು ಸರಿಹೊಂದುತ್ತವೆ.

₹2.22 ಲಕ್ಷ ಕೋಟಿ ಕರಗಿದ ಎಂ–ಕ್ಯಾಪ್

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ದೇಶದ ಷೇರುಪೇಟೆಯ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಇಳಿಕೆಯಿಂದ ಪ್ರಮುಖ 10 ಕಂಪನಿಗಳ ಪೈಕಿ ಆರು ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹2.22 ಲಕ್ಷ ಕೋಟಿ ಕರಗಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಮೌಲ್ಯ ₹1.14 ಲಕ್ಷ ಕೋಟಿಯಷ್ಟು ಕರಗಿದ್ದು, ಒಟ್ಟು ಎಂ–ಕ್ಯಾಪ್ ₹18.83 ಲಕ್ಷ ಕೋಟಿಗೆ ಇಳಿದಿದೆ. ಇನ್ಫೊಸಿಸ್ ₹29,474 ಕೋಟಿ, ಎಲ್‌ಐಸಿ ₹23,086 ಕೋಟಿ, ಟಿಸಿಎಸ್ ₹20,080 ಕೋಟಿ, ಬಜಾಜ್ ಫೈನಾನ್ಸ್ ₹17,524 ಕೋಟಿ ಮತ್ತು ಹಿಂದೂಸ್ತಾನ್ ಯೂನಿಲಿವರ್ ಎಂ–ಕ್ಯಾಪ್ ₹17,339 ಕೋಟಿಗೆ ಇಳಿದಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ₹37,161 ಕೋಟಿ, ಐಸಿಐಸಿಐ ಬ್ಯಾಂಕ್ ₹35,814 ಕೋಟಿ, ಭಾರ್ತಿ ಏರ್‌ಟೆಲ್ ₹20,841 ಕೋಟಿ ಮತ್ತು ಎಸ್‌ಬಿಐ ಮಾರುಕಟ್ಟೆ ಮೌಲ್ಯಕ್ಕೆ ₹9,685 ಕೋಟಿ ಸೇರ್ಪಡೆ ಆಗಿದೆ.

12 ಸಾವಿರ ಸಿಬ್ಬಂದಿ ವಜಾಕ್ಕೆ ಟಿಸಿಎಸ್ ನಿರ್ಧಾರ

ಒಂದನೇ ಪುಟದಿಂದ...

ಈ ಕಡಿತವು ಗ್ರಾಹಕರಿಗೆ ಒದಗಿಸುವ ಸೇವೆಗಳ ಮೇಲೆ ಯಾವುದೇ ಪರಿಣಾಮ ಬೀರದಂತೆ ಪುನರ್‌ರಚನೆ ಮಾಡಲಾಗುವುದು. ಉದ್ಯೋಗ ಕಳೆದುಕೊಳ್ಳುವವರಿಗೆ ಸೂಕ್ತ ನೆರವು ನೀಡಲಾಗುವುದು ಎಂದು ತಿಳಿಸಿದೆ.

ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಯೋಜನೆಗಳ ಆರಂಭದಲ್ಲಿ ವಿಳಂಬವಾಗುತ್ತಿದೆ. ಜಾಗತಿಕ ಅರ್ಥ ವ್ಯವಸ್ಥೆಯಲ್ಲಿರುವ ಅನಿಶ್ಚಿತ ಸ್ಥಿತಿ ಹಾಗೂ ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳ ಕಾರಣದಿಂದಾಗಿ ಬೇಡಿಕೆ ತಗ್ಗಿದೆ ಎಂದು ಟಿಸಿಎಸ್‌ನ ಸಿಇಒ ಕೆ.ಕೃತಿವಾಸನ್ ಇತ್ತೀಚೆಗೆ ಹೇಳಿದ್ದರು.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ವಲಯದ ಮೇಲೆ ಪರಿಣಾಮ ಬೀರಿದೆ. ಇದೇ ಉದ್ಯೋಗ ಕಡಿತಕ್ಕೆ ಕಾರಣವಾಗಿದೆ' ಎಂದು ಐ.ಟಿ ಸಲಹಾ ಸಂಸ್ಥೆ ಎಚ್‌ಎಫ್‌ಎಸ್ ರಿಸರ್ಚ್‌ನ ಸಿಇಒ ಫಿಲ್ ಫರ್ಶ್ಟ್ ಹೇಳಿದ್ದಾರೆ.

ಬೇಡಿಕೆಯಲ್ಲಿ ಇಳಿಕೆ, ನಿರಂತರ ಹಣದುಬ್ಬರ ಮತ್ತು ಅಮೆರಿಕದ ವ್ಯಾಪಾರ ನೀತಿಗಳ ಮೇಲಿನ ಮುಂದುವರಿದ ಅನಿಶ್ಚಿತ ಸ್ಥಿತಿಯೂ ಮಾಹಿತಿ ತಂತ್ರಜ್ಞಾನ ವಲಯದ ಮೇಲೆ ಪರಿಣಾಮ ಬೀರುತ್ತಿದೆ.

ಎತ್ತುಗಳ ಓಟದ ಸ್ಪರ್ಧೆ

ಪಿಟಿಐ ಚಿತ್ರ


ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಭಾನುವಾರ ಎತ್ತುಗಳ ಓಟದ ಸ್ಪರ್ಧೆ ನಡೆಯಿತು

ಚರ್ಚ್ ಮೇಲೆ ದಾಳಿ: 38 ಸಾವು

ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ (ರಾಯಿಟರ್ಸ್): ಪೂರ್ವ ಕಾಂಗೊದ ಚರ್ಚ್‌ವೊಂದರ ಮೇಲೆ 'ಇಸ್ಲಾಮಿಕ್ ಸ್ಟೇಟ್' ಬೆಂಬಲಿತ ಬಂಡುಕೋರರು ದಾಳಿ ನಡೆಸಿದ್ದು, 38 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅಲೈಡ್ ಡೆಮಾಕ್ರಟಿಕ್ ಫೋರ್ಸ್‌ನ ಬಂಡುಕೋರರು ಕೋಮಾಂಡದ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುತ್ತಿದ್ದ ಜನರ ಮೇಲೆ ಭಾನುವಾರ ಮುಂಜಾನೆ ದಾಳಿ ನಡೆಸಿದ್ದಾರೆ. ದಾಳಿಯಲ್ಲಿ 15 ಮಂದಿ ಗಾಯಗೊಂಡಿದ್ದಾರೆ. ಘಟನೆ ನಂತರ ಅನೇಕರು ಕಾಣೆಯಾಗಿದ್ದಾರೆ' ಎಂದು ನಗರ ಆಡಳಿತದ ಅಧಿಕಾರಿ ಜೀನ್ ಕ್ಯಾಟೊ ತಿಳಿಸಿದ್ದಾರೆ.

ಹರಿದ್ವಾರದಲ್ಲಿ ಕಾಲ್ತುಳಿತ: 8 ಮಂದಿ ಸಾವು

ಒಂದನೇ ಪುಟದಿಂದ...

ಆರುಷ್ (12), ಸಕಲ್ ದೇವ್ (18), ವಿಕ್ಕಿ (18), ವಿಪಿನ್ (18), ವಕೀಲ್ ಪ್ರಸಾದ್ (45), ಶಾಂತಿ (60), ರಂಭಾರೋಸ್ (65) ಮತ್ತು ವಿಶಾಲ್ ಕುಮಾರ್ (19) ಮೃತರು. ಗಾಯಾಳುಗಳ ಪೈಕಿ ಐವರನ್ನು ಋಷಿಕೇಶದ ಏಮ್ಸ್ ಆಸ್ಪತ್ರೆಗೆ ದಾಖಲಿಸಲು ಶಿಫಾರಸು ಮಾಡಲಾಗಿದೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ ತಿಳಿಸಿದೆ.

ರಾಜ್ಯ ವಿಪತ್ತು ನಿರ್ವಹಣೆ ಪಡೆ, ಸ್ಥಳೀಯ ಪೊಲೀಸರು ಮತ್ತು ಇತರರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ.

> **ಇದು ಕೇವಲ ಅವಘಡ ಅಲ್ಲ; ವ್ಯವಸ್ಥೆಯ ವೈಫಲ್ಯ. ಧಾರ್ಮಿಕ ಕ್ಷೇತ್ರದಲ್ಲಿ ಇಂಥ ದುರಂತ ಸಂಭವಿಸಿರುವುದು ಆಡಳಿತ ಮಂಡಳಿಯ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿ**
> **ಅರವಿಂದ ಕೇಜ್ರಿವಾಲ್,** ಎಎಪಿ ಸಂಚಾಲಕ

ತನಿಖೆಗೆ ಆದೇಶ

ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು, ಘಟನೆ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ.

ಮಾನಸಾದೇವಿ ದೇಗುಲದಲ್ಲಿ ವದಂತಿಯಿಂದಾಗಿ ಕಾಲ್ತುಳಿತ ಸಂಭವಿಸಿದೆ. ವದಂತಿ ಹರಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಧಾಮಿ ಹೇಳಿದ್ದಾರೆ.

ಮೃತರ ಕುಟುಂಬಸ್ಥರಿಗೆ ತಲಾ ₹2 ಲಕ್ಷ ಮತ್ತು ಗಾಯಾಳುಗಳಿಗೆ ತಲಾ ₹50,000 ಆರ್ಥಿಕ ನೆರವು ನೀಡಲಾಗುವುದು ಎಂದು ಘೋಷಿಸಿದರು. ಹರಿದ್ವಾರ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯವನ್ನು ಅವರು ವಿಚಾರಿಸಿದರು.

2024–2025ರಲ್ಲಿ ನಡೆದ ಪ್ರಮುಖ ಕಾಲ್ತುಳಿತ ಪ್ರಕರಣಗಳು

- **ಜೂನ್ 4, 2025:** ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು, ಅನೇಕರು ಗಾಯಗೊಂಡಿದ್ದರು.
- **ಮೇ 3, 2025:** ಉತ್ತರ ಗೋವಾದ ಶಿರ್ಗೊ ಗ್ರಾಮದ ದೇವಸ್ಥಾನದ ಉತ್ಸವ ಸಮಾರಂಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 6 ಜನರು ಮೃತಪಟ್ಟು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು
- **ಫೆಬ್ರುವರಿ 15, 2025:** ಪ್ರಯಾಗರಾಜ್ ಕುಂಭಮೇಳಕ್ಕೆ ಹೋಗಲು ದೆಹಲಿ ರೈಲು ನಿಲ್ದಾಣದಲ್ಲಿ ಪ್ರಯಾಣಿಕರು ಅಪಾರ ಸಂಖ್ಯೆಯಲ್ಲಿ ಸೇರಿದ್ದ ವೇಳೆ ಉಂಟಾದ ಕಾಲ್ತುಳಿತದಲ್ಲಿ ಮಹಿಳೆ, ಮಗು ಸೇರಿ 18 ಮಂದಿ ಮೃತಪಟ್ಟಿದ್ದರು
- **ಜನವರಿ 29, 2025:** ಮಹಾ ಕುಂಭಮೇಳದಲ್ಲಿ 'ಅಮೃತ ಸ್ನಾನ'ಕ್ಕಾಗಿ ಅಪಾರ ಸಂಖ್ಯೆಯ ಭಕ್ತರು ಸೇರಿದ್ದ ವೇಳೆ ಉಂಟಾದ ಕಾಲ್ತುಳಿತದಲ್ಲಿ 30 ಜನರು ಮೃತಪಟ್ಟು, 60ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿದ್ದರು
- **ಜನವರಿ 8, 2025:** ತಿರುಮಲ ಬೆಟ್ಟದ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ದ್ವಾರ ದರ್ಶನದ ಟಿಕೆಟ್‌ಗಾಗಿ ಉಂಟಾದ ನೂಕುನುಗ್ಗಲು, ಕಾಲ್ತುಳಿತದಲ್ಲಿ 6 ಮಂದಿ ಮೃತಪಟ್ಟು, 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು
- **ಡಿಸೆಂಬರ್ 4, 2024:** ಅಲ್ಲು ಅರ್ಜುನ್ ನಟನೆಯ 'ಪುಷ್ಪಾ–2' ಚಿತ್ರದ ವೀಕ್ಷಣೆಗಾಗಿ ಹೈದರಾಬಾದ್‌ನ ಸಂಧ್ಯಾ ಥಿಯೇಟರ್ ಬಳಿ ಉಂಟಾದ ಕಾಲ್ತುಳಿತದಲ್ಲಿ 35 ವರ್ಷದ ಮಹಿಳೆ ಮೃತಪಟ್ಟು, ಬಾಲಕನೊಬ್ಬ ಗಾಯಗೊಂಡಿದ್ದ
- **ಜುಲೈ 2, 2024:** ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಸ್ವಯಂ ಘೋಷಿತ ದೇವಮಾನವ ಭೋಲೆ ಬಾಬಾ ಆಯೋಜಿಸಿದ್ದ ಸತ್ಸಂಗದಲ್ಲಿ ಭಕ್ತರ ದಟ್ಟಣೆಯಿಂದ ಉಂಟಾದ ಕಾಲ್ತುಳಿತದಲ್ಲಿ 100ರಿಂದ 120 ಮಂದಿ ಮೃತಪಟ್ಟಿದ್ದರು

'ಅಂಗವೈಕಲ್ಯ: ಸಿಎಪಿಎಫ್ ಸಿಬ್ಬಂದಿಗೂ ಬಡ್ತಿ'


ನವದೆಹಲಿ (ಪಿಟಿಐ): ಸೇನಾ ಕಾರ್ಯಾಚರಣೆ ವೇಳೆ ಕೈಕಾಲುಗಳನ್ನು ಕಳೆದುಕೊಂಡ ಅಥವಾ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದ ಸಿಎಪಿಎಫ್‌ನ ಅಧಿಕಾರಿಗಳು ಮತ್ತು ಯೋಧರು ಅವರ ಸೇವೆಯಲ್ಲಿ ಮುಂದುವರಿಯಲಿದ್ದಾರೆ ಎಂದು ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಭಾನುವಾರ ತಿಳಿಸಿದ್ದಾರೆ.

ಒಂದು ಬಾರಿಯ ಮೂಲ ಆರ್ಥಿಕ ಪ್ಯಾಕೇಜ್ ಜೊತೆಗೆ ತಮ್ಮ ಬಡ್ತಿ ಮತ್ತು ವೇತನವನ್ನು ಕೂಡ ಅವರು ಪಡೆಯಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) 87ನೇ ಸ್ಥಾಪನಾ ದಿನಾಚರಣೆಯ ಸಂದರ್ಭದ ಇಲ್ಲಿ ಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಿಆರ್‌ಪಿಎಫ್ ಮಹಾನಿರ್ದೇಶಕ ಜ್ಞಾನೇಂದ್ರ ಪ್ರತಾಪ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿ ರಚಿಸಲಾಗಿದ್ದು, ಮುಂದಿನ ಕೆಲವು ತಿಂಗಳುಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ಶಿಫಾರಸುಗಳು ಮತ್ತು ವಿಧಾನಗಳನ್ನು ಅಂತಿಮಗೊಳಿಸುವ ನಿರೀಕ್ಷೆಯಿದೆ' ಎಂದು ಹೇಳಿದ್ದಾರೆ.

ಕಳೆದ ದಶಕಗಳಲ್ಲಿ ನಡೆದ ಕಾರ್ಯಾಚರಣೆಯ ವೇಳೆ ಕಚ್ಚಾ ಬಾಂಬ್ ಸ್ಫೋಟದಂತಹ ಘಟನೆಗಳಿಂದಾಗಿ ಸಿಎಪಿಎಫ್‌ನ ನೂರಾರು ಸಿಬ್ಬಂದಿ ತಮ್ಮ ಕೈ–ಕಾಲುಗಳು ಅಥವಾ ಕಣ್ಣುಗಳನ್ನು ಕಳೆದುಕೊಂಡಿದ್ದಾರೆ ಎಂದು ಅವರು ತಿಳಿಸಿದರು.











ಲಕ್ಷ್ಮಿ ಚಂದ್ರಶೇಖರ್

'ಬ್ರ್ಯಾಟ್'ನೊಂದಿಗೆ ಬಂದ ಡಾರ್ಲಿಂಗ್ ಕೃಷ್ಣ



ಡಾರ್ಲಿಂಗ್ ಕೃಷ್ಣ, ಮನೀಶಾ

ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿರುವ 'ಬ್ರ್ಯಾಟ್' ಚಿತ್ರದ 'ನಾನೇ ನೀನಂತೆ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಶಾಂಕ್ ನಿರ್ದೇಶನದ ಚಿತ್ರವಿದು. 'ಕೌಸಲ್ಯಾ ಸುಪ್ರಜಾ ರಾಮ' ಚಿತ್ರದ ಬಳಿಕ ಈ ಜೋಡಿ ಮತ್ತೆ ಒಂದಾಗಿದೆ.

ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಹಾಡಿಗೆ ಸಿದ್ ಶ್ರೀರಾಮ್ ಧ್ವನಿಯಾಗಿದ್ದಾರೆ. ಶಶಾಂಕ್ ಅವರದ್ದೇ ಸಾಹಿತ್ಯವಿದೆ. 'ಯಾವುದೇ ಪ್ರಕ್ರಿಯೆಯಾದರೂ ಮೊದಲು ನಮಗೆ ಇಷ್ಟವಾಗಬೇಕು ಎಂಬುದು ನನ್ನ ವಾದ. ಸಿನಿಮಾ ಕೂಡ ಅದೇ ರೀತಿ. ನಮಗೆ ಇಷ್ಟವಾದರೆ, ಬೇರೆಯವರಿಗೆ ಇಷ್ಟವಾಗುತ್ತದೆ. ನಮ್ಮಿಷ್ಟದ್ದನ್ನು ನಾವು ಮಾಡಿದಾಗ ಅದೇ ರೀತಿಯ ಮನಸ್ಥಿತಿ ಇರುವವರು ಇಷ್ಟಪಡುತ್ತಾರೆ ಎಂಬುದು ನನ್ನ ನಂಬಿಕೆ. ನನ್ನ ವೃತ್ತಿ ಜೀವನದಲ್ಲಿ ಈ ಹಾಡಿಗೆ ತೆಗೆದುಕೊಂಡಷ್ಟು ಸಮಯವನ್ನು ಬೇರೆ ಹಾಡುಗಳಿಗೆ ತೆಗೆದುಕೊಂಡಿರಲಿಲ್ಲ. ಈ ಹಾಡಿಗಾಗಿ ಆರು ತಿಂಗಳು ಕೆಲಸ ಮಾಡಿದ್ದೇವೆ. ಅರ್ಜುನ್ ಜನ್ಯ ನನ್ನ ಚಿತ್ರಗಳಿಗೆ ಸಾಕಷ್ಟು ಜನಪ್ರಿಯ ಹಾಡುಗಳನ್ನು ನೀಡಿದವರು. ತಕ್ಷಣ ಟ್ಯೂನ್ ಕೊಡುತ್ತಾರೆ. ಆದರೆ ಈ ಹಾಡಿಗಾಗಿ 15 ಟ್ಯೂನ್‌ಗಳನ್ನು ನೀಡಿದ್ದರು. ಅದರಲ್ಲಿ ಅಂತಿಮವಾಗಿದ್ದು ಈಗ ನಾವೆಲ್ಲ ಕೇಳುತ್ತಿರುವ ಈ ಹಾಡು. ಈ ಹಾಡಿಗೆ ಆಗಿರುವ ಖರ್ಚು ನೋಡಿ ನಾನೇ ಗಾಬರಿಯಾದೆ. ಈ ಬಜೆಟ್‌ನಲ್ಲಿ ಒಂದು ಸಿನಿಮಾ ಮಾಡಬಹುದಿತ್ತು. ನಾನು ಮತ್ತು ಅರ್ಜುನ್ ಜನ್ಯ, ನಮ್ಮ ಹಿಂದಿನ ಹಾಡುಗಳ ದಾಖಲೆಯನ್ನು ಈ ಹಾಡು ಮುರಿಯಬೇಕು ಎಂಬ ನಿಟ್ಟಿನಲ್ಲಿ ಕೆಲಸ ಮಾಡಿದ್ದೇವೆ. ಗುಣಮಟ್ಟದಿಂದಾಗಿ ಬಜೆಟ್ ಹೆಚ್ಚಾಯಿತು. ಈ ಹಾಡನ್ನು ಐದು ದಿನ ಚಿತ್ರೀಕರಣ ಮಾಡಿದ್ದೇವೆ. ಇಬ್ಬರ ಪ್ರೀತಿಯ ಪಯಣ ಇದರಲ್ಲಿದೆ. ಚಿತ್ರದಲ್ಲಿ ನಾಯಕ–ನಾಯಕಿ ಸುಂದರವಾಗಿ ಕಾಣಿಸಬೇಕು ಎಂಬುದು ನನ್ನ ಆಲೋಚನೆ. ಈ ಜೋಡಿ ಹಾಗೆ ಕಾಣಿಸಿದೆ ಅಂದುಕೊಂಡಿರುವೆ' ಎಂದು ಹಾಡಿನ ಕುರಿತು ಮಾಹಿತಿ ನೀಡಿದರು ಶಶಾಂಕ್.



ಶಶಾಂಕ್

'ಶಶಾಂಕ್ ಅವರು ಹೊಸ ಹೊಸ ಪಾತ್ರ ನೀಡುತ್ತಾರೆ. ಈ ಸಲ ಬ್ರಾಟ್ ಪಾತ್ರ ನೀಡಿದ್ದಾರೆ. ಅದೇ ರೀತಿ ಹೇರ್‌ಸ್ಟೈಲ್ ಕೂಡ ನನಗಿದೆ. ನನ್ನ ಸ್ವಭಾವಕ್ಕೆ ತದ್ವಿರುದ್ಧವಾದ ಪಾತ್ರವಿದು. ಆದರೆ ನಿರ್ದೇಶಕರು ಬಹಳ ನಂಬಿಕೆಯಿಂದ ಈ ರೀತಿ ಪಾತ್ರ ಬರೆದಿದ್ದಾರೆ. ಕ್ರಿಸ್ಟಿಯಾಗಿ ಕಾಣಿಸಿಕೊಂಡಿರುವೆ. ಈ ಹಾಡು ತುಂಬ ಸುಂದರವಾಗಿದೆ. ದೃಶ್ಯಗಳು ಕೂಡ ಸುಂದರವಾಗಿವೆ. ತುಂಬ ಶ್ರೀಮಂತವಾಗಿ ಚಿತ್ರೀಕರಿಸಲಾಗಿದೆ. ಚಿತ್ರದಲ್ಲಿ ನನ್ನ ವೇಷ ಭೂಷಣಗಳಿಗೂ ನಿರ್ದೇಶಕರು ಹೆಚ್ಚು ಆದ್ಯತೆ ನೀಡಿದ್ದಾರೆ. ನಿರ್ಮಾಪಕರು ತುಂಬ ಶ್ರದ್ಧೆಯಿಂದ ಚಿತ್ರ ಮಾಡಿದ್ದಾರೆ. ಐದು ಭಾಷೆಗಳಲ್ಲಿ ಸಿನಿಮಾ ಮೂಡಿಬರುತ್ತಿದೆ. ಚಿತ್ರದಲ್ಲಿ ಇನ್ನೊಂದು ಹಾಡಿದೆ. ಅದು ನನ್ನ ಮಗಳಿಗೆ ಇಷ್ಟವಾಗಿದೆ. ಇದು ಈ ವರ್ಷದ ಅದ್ಭುತವಾದ ಚಿತ್ರವಾಗಲಿದೆ ಎಂಬ ನಂಬಿಕೆ ಇದೆ' ಎಂದರು ಡಾರ್ಲಿಂಗ್ ಕೃಷ್ಣ.

ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಚಿತ್ರ ಮೂಡಿಬರುತ್ತಿದೆ. 'ಫಸ್ಟ್ ರ‍್ಯಾಂಕ್ ರಾಜು' ಸಿನಿಮಾ ನಿರ್ಮಿಸಿದ್ದ ಮಂಜುನಾಥ್ ಕಂದಕೂರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಮನೀಶಾ ಕಂದಕೂರ್ ಚಿತ್ರದ ನಾಯಕಿ.

'ಮನೀಶಾ ಎಂಬ ಪಾತ್ರ ಮಾಡಿದ್ದೇನೆ. ಸರಳವಾದ ಮಿಡಲ್‌ಕ್ಲಾಸ್ ಹುಡುಗಿ ಪಾತ್ರ. ಜಾಸ್ತಿ ಮಾತಾಡುವುದಿಲ್ಲ. ತುಂಬ ಭಿನ್ನವಾದ ಪಾತ್ರ. ನಟನೆ ವರ್ಕ್‌ಶಾಪ್ ಮಾಡಿದ್ದೆ. ಹೈದ್ರಾಬಾದ್‌ನಲ್ಲಿಯೂ ನಟನೆ ತರಬೇತಿ ಪಡೆದಿರುವೆ. ಜತೆಗೆ ಸ್ವಂತವಾಗಿ ಕೂಡ ನಟನೆ ಕಲಿತಿರುವೆ. ಈಗ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ' ಎಂದರು ಮನೀಶಾ. ಅಭಿಷೇಕ್ ಕಲ್ಲತ್ತಿ ಛಾಯಾಚಿತ್ರಗ್ರಹಣವಿದೆ. ಚಿಕ್ಕಮಗಳೂರು, ಕಳಸ ಮುಂತಾದೆಡೆ ಚಿತ್ರೀಕರಣಗೊಂಡಿದೆ.

ಆ.29ಕ್ಕೆ 'ರಿಪ್ಪನ್ ಸ್ವಾಮಿ'

ವಿಜಯ್ ರಾಘವೇಂದ್ರ ನಾಯಕನಾಗಿ ನಟಿಸಿರುವ 'ರಿಪ್ಪನ್ ಸ್ವಾಮಿ' ಚಿತ್ರ ಆಗಸ್ಟ್ 29ಕ್ಕೆ ತೆರೆಗೆ ಬರಲಿದೆ. ಕಿಶೋರ್ ಮೂಡುಬಿದ್ರೆ ನಿರ್ದೇಶನದ ಚಿತ್ರವಿದು.

'ಗ್ರಾಮೀಣ ಭಾಗದ ಸಸ್ಪೆನ್ಸ್, ಥ್ರಿಲ್ಲರ್ ಕಥೆ. ಸ್ವಲ್ಪ ಆ್ಯಕ್ಷನ್ ಕೂಡ ಇದೆ. ರಿಪ್ಪನ್ ಸ್ವಾಮಿ ಪಾತ್ರದಲ್ಲಿ ವಿಜಯ್ ರಾಘವೇಂದ್ರ ಕಾಣಿಸಿಕೊಂಡಿದ್ದಾರೆ. ರಗಡ್ ಪಾತ್ರ ಅವರದ್ದು. ಅವರ ಎಸ್ಟೇಟ್, ಕುಟುಂಬ ಮುಂತಾದ ವಿಷಯಗಳ ಸುತ್ತ ಕಥೆ ಸಾಗುತ್ತದೆ. ತಣ್ಣನೆಯ, ಸುಂದರ ಮಲೆನಾಡನ್ನು ತಲ್ಲಣಗೊಳಿಸುವ ಅಪರಾಧವೇ ಚಿತ್ರಕಥೆ. ಸದ್ಯದಲ್ಲಿಯೇ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಬಿಡುಗಡೆ ಮಾಡುತ್ತೇವೆ. ಸೆನ್ಸಾರ್ ಮುಗಿದಿದ್ದು ಯು/ಎ ಪ್ರಮಾಣ ಪತ್ರ ಲಭಿಸಿದೆ' ಎನ್ನುತ್ತಾರೆ ನಿರ್ದೇಶಕರು.

ವಿಜಯ್ ರಾಘವೇಂದ್ರ ಪತ್ನಿಯಾಗಿ ಅಶ್ವಿನಿ ಚಂದ್ರಶೇಖರ್ ಕಾಣಿಸಿಕೊಂಡಿದ್ದಾರೆ. ಪ್ರಕಾಶ್ ತೂಮಿನಾಡು, ವಜ್ರದೀರ್ ಜೈನ್, ಯಮುನಾ ಶ್ರೀನಿಧಿ, ಮೋಹನ್ ಶೇಣಿ, ಕೃಷ್ಣಮೂರ್ತಿ ಕವತ್ತಾರ್, ಪ್ರಭಾಕರ್ ಕುಂದಾರ್ ಮುಂತಾದವರು ಚಿತ್ರದಲ್ಲಿದ್ದಾರೆ.

ಪಂಚಾನನ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ. ಕೊಪ್ಪ, ಕಳಸ, ಬಾಳೆಹೊನ್ನೂರು ಸುತ್ತಮುತ್ತ ಚಿತ್ರೀಕರಿಸಲಾಗಿದೆ. ಚಿತ್ರಕ್ಕೆ ಮಲಯಾಳದ ಖ್ಯಾತ ಸಂಗೀತ ನಿರ್ದೇಶಕ ಸ್ಯಾಮ್ಯುಯೆಲ್ ಅಭಿ ಸಂಗೀತವನ್ನು ನೀಡಿದ್ದಾರೆ. ರಂಗನಾಥ್ ಸಿ.ಎಂ. ಛಾಯಾಚಿತ್ರಗ್ರಹಣ, ಶಶಾಂಕ್ ನಾರಾಯಣ ಸಂಕಲನವಿದೆ.



ವಿಜಯ್ ರಾಘವೇಂದ್ರ

ತೆರೆಗೆ ಬರಲು ಸಿದ್ಧವಾಯ್ತು ಓಮೆನ್



ಅಜಯ್ ಕುಮಾರ್

ಬಹುತೇಕ ಹೊಸಬರಿಂದಲೇ ಕೂಡಿರುವ 'ಓಮೆನ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಬಿನ್.ಎಸ್. ಸಂತೋಷ್ ನಿರ್ದೇಶನದ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ.

'ಓಮೆನ್' ಎಂದರೆ ಶಕುನ ಎಂಬ ಅರ್ಥವಿದೆ. ಇದು ನಮ್ಮ ಕಥೆಗೂ ಒಂದು ರೀತಿಯ ಬೇರೆ ಅರ್ಥವನ್ನು ನೀಡುತ್ತಿದೆ. ಇದೊಂದು ಫೌಂಡ್ ಫುಟೇಜ್‌ನಲ್ಲಿ ಚಿತ್ರೀಕರಣಗೊಂಡಿರುವ ಸಿನಿಮಾ. ಒಂದು ಮನೆಯ ಸುತ್ತ ನಡೆಯುವಂತಹ ಘಟನೆ. ಭೂತ ಬಂಗಲೆಗೆ ಇಬ್ಬರು ಪ್ರವೇಶ ಮಾಡುತ್ತಾರೆ. ಅದರಲ್ಲಿ ನಾಯಕ ಅಜಯ್ ಕುಮಾರ್ ಯೂಟ್ಯೂಬರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕಿ ನೀಶ್ಮಾ ಶೆಟ್ಟಿ ಪ್ಯಾರಾನಾರ್ಮಲ್ ರಿಸರ್ಚರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆನೇಕಲ್ ಸಮೀಪದಲ್ಲಿರುವ ಹಳೆಯ ಕಟ್ಟಡದಲ್ಲಿ ನಮಗೆ ಬೇಕಾದ ರೀತಿ ಸೆಟ್‌ಗಳನ್ನು ಹಾಕಿಕೊಂಡು ಚಿತ್ರೀಕರಿಸಿದ್ದೇವೆ. ವಿಎಫ್‌ಎಕ್ಸ್, ಸಂಕಲನಗಳನ್ನು ನಾನೇ ನಿಭಾಯಿಸಿರುವೆ' ಎಂದರು ನಿರ್ದೇಶಕರು.

ಅಜಯ್ ಕುಮಾರ್ ಮತ್ತು ವಿ.ಮಿರುನಳಿನಿ ಬಂಡವಾಳ ಹೂಡಿದ್ದಾರೆ. 'ನಾನು ಚಿತ್ರರಂಗದಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ನಟ, ನಿರ್ದೇಶಕ ಕಾಶಿನಾಥ್ ಅವರ ಕೊನೆಯ ಚಿತ್ರದಲ್ಲಿ ಕೆಲಸ ಮಾಡಿದ್ದೆ. ಆ ಅನುಭವದಿಂದ ಚಿತ್ರ ನಿರ್ಮಾಣದ ಜತೆ ನಾಯಕನಾಗಿ ಅಭಿನಯಿಸಿದ್ದೇನೆ. ಮುಂದಿನ ತಿಂಗಳು ಚಿತ್ರ ಬಿಡುಗಡೆ ಯೋಜನೆಯಿದೆ' ಎಂದರು ಅಜಯ್.

ಭುವನ್ ಶಂಕರ್ ಹಾಗೂ ಸನ್‌ಸ್ಕಾರ್ ಸಂಗೀತವಿದೆ.

ಬಾಹ್ಯಾಕಾಶ ಕ್ಷೇತ್ರ: ನವೋದ್ಯಮ ಹೆಚ್ಚಳ

'ಮನದ ಮಾತು' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಬಾಹ್ಯಾಕಾಶದಿಂದ ಹಿಂತಿರುಗಿ ಬಂದಿರುವುದನ್ನು ಶ್ಲಾಘಿಸಿರುವ ಪ್ರಧಾನಿ ನರೇಂದ್ರ ಮೋದಿ, 'ದೇಶದಾದ್ಯಂತ ಮಕ್ಕಳಲ್ಲಿ ಬಾಹ್ಯಾಕಾಶ ಕುರಿತಂತೆ ಕುತೂಹಲ ಹೆಚ್ಚಿಸಿದೆ. ಬಾಹ್ಯಾಕಾಶ ಕ್ಷೇತ್ರವೊಂದರಲ್ಲೇ 200ಕ್ಕೂ ಅಧಿಕ ನವೋದ್ಯಮಗಳು ಆರಂಭಗೊಳ್ಳುತ್ತಿವೆ' ಎಂದು ತಿಳಿಸಿದರು.

124ನೇ 'ಮನದ ಮಾತು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಕಸಿತ ಭಾರತವು ಸ್ವಾವಲಂಬನೆಯ ಮೂಲಕ ಹಾದು ಹೋಗುತ್ತದೆ. ಆತ್ಮನಿರ್ಭರ ಭಾರತಕ್ಕೆ 'ವೋಕಲ್ ಫಾರ್ ಲೋಕಲ್' (ದೇಸಿ ಅಭಿವೃದ್ಧಿಗೆ ಉತ್ತೇಜನ) ಅತ್ಯಂತ ಬಲವಾದ ಅಡಿಪಾಯವಾಗಿದೆ' ಎಂದು ತಿಳಿಸಿದರು.

'ಶುಭಾಂಶು ಶುಕ್ಲಾ ಅವರು ಬಾಹ್ಯಾಕಾಶದಿಂದ ಸುರಕ್ಷಿತವಾಗಿ ಭೂಮಿಗೆ ಬಂದಿಳಿದಿರುವುದು ಸಾಕಷ್ಟು ಚರ್ಚೆ ಹುಟ್ಟುಹಾಕಿದ್ದು, ಜನರು ಸಂತಸ ವ್ಯಕ್ತಪಡಿಸಿದರು. ಪ್ರತಿ ಹೃದಯದಲ್ಲಿಯೂ ಸಂತಸದ ಅಲೆ ಹರಿಯಿತು. ಇಡೀ ದೇಶವೇ ಹೆಮ್ಮೆಯಿಂದ ಕೊಂಡಾಡಿತು' ಎಂದು ಮೋದಿ ಹೇಳಿದರು.

ವೇಗವಾಗಿ ನವೋದ್ಯಮ: 'ಐದು ವರ್ಷಗಳ ಹಿಂದೆ 50 ನವೋದ್ಯಮಗಳು ದೇಶದಲ್ಲಿ ಇದ್ದವು. ಈಗ ಬಾಹ್ಯಾಕಾಶ ಕ್ಷೇತ್ರವೊಂದರಲ್ಲಿಯೇ 200ಕ್ಕೂ ಅಧಿಕ ನವೋದ್ಯಮಗಳು ಆರಂಭಗೊಂಡಿವೆ. ಇದೇ ಆಗಸ್ಟ್ 23ರಂದು 'ರಾಷ್ಟ್ರೀಯ ಬಾಹ್ಯಾಕಾಶ ದಿನ' ನಡೆಯಲಿದ್ದು, ಕಾರ್ಯಕ್ರಮದ ಸ್ವರೂಪದ ಕುರಿತು ಸಲಹೆಗಳನ್ನು ನೀಡಬಹುದು' ಎಂದು ಕರೆ ನೀಡಿದರು.

'2023ರಲ್ಲಿ ಚಂದ್ರಯಾನ–3 ಯಶಸ್ವಿಯಾದ ಸಂದರ್ಭದಲ್ಲಿ ಇಡೀ ದೇಶದಲ್ಲಿ ಹೊಸ ವಾತಾವರಣ ನಿರ್ಮಾಣವಾಗಿರುವುದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಮಕ್ಕಳಲ್ಲಿಯೂ ವಿಜ್ಞಾನ, ಬಾಹ್ಯಾಕಾಶ ಕ್ಷೇತ್ರದ ಕುರಿತಂತೆ ಆಸಕ್ತಿ ಸೃಷ್ಟಿಯಾಗಿದೆ. ಸಣ್ಣ ಮಕ್ಕಳು ಕೂಡ ಚಂದ್ರನಲ್ಲಿ ಇಳಿಯುವುದಾಗಿ, ಬಾಹ್ಯಾಕಾಶ ವಿಜ್ಞಾನಿಯಾಗುವುದಾಗಿ ಹೇಳುತ್ತಿದ್ದಾರೆ' ಎಂದು ನೆನಪಿಸಿಕೊಂಡರು.

ಮಕ್ಕಳಲ್ಲಿ ಹೊಸತನ ಉತ್ತೇಜಿಸುವ ಅಭಿಯಾನದ ಅಂಗವಾಗಿ 'ಇನ್‌ಸ್ಪೈರ್–ಮಾನಕ್' ಆರಂಭಿಸಲಾಗಿದ್ದು, ಪ್ರತಿ ಶಾಲೆಯಿಂದಲೂ ಐದು ಮಂದಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಇದುವರೆಗೂ ಲಕ್ಷಾಂತರ ಮಕ್ಕಳು ಅಭಿಯಾನದಡಿಯಲ್ಲಿ ಸೇರ್ಪಡೆಯಾಗಿದ್ದು, ಚಂದ್ರಯಾನ–3 ಯಶಸ್ವಿ ಬಳಿಕ ಈ ಸಂಖ್ಯೆಯೂ ದ್ವಿಗುಣಗೊಂಡಿದೆ' ಎಂದು ಮೋದಿ ಮಾಹಿತಿ ನೀಡಿದರು.

'ಮುಂದಿನ ತಿಂಗಳು ಮುಂಬೈನಲ್ಲಿ ಖಗೋಳ ವಿಜ್ಞಾನ, ಖಗೋಳ ಭೌತವಿಜ್ಞಾನ ಕುರಿತಾದ ಒಲಿಂಪಿಯಾಡ್ ಸ್ಪರ್ಧೆ ನಡೆಯಲಿದ್ದು, ಇದು ದೇಶದಲ್ಲಿ ಇದುವರೆಗೂ ನಡೆದ ಅತಿ ದೊಡ್ಡ ಒಲಿಂಪಿಯಾಡ್ ಆಗಿದೆ' ಎಂದು ಮೋದಿ ಹೇಳಿದರು.

ಮುಖ್ಯಾಂಶಗಳು

- ಆಗಸ್ಟ್ ತಿಂಗಳು ಕ್ರಾಂತಿಗೆ ಹೆಸರಾಗಿದೆ
- ದೇಶದಾದ್ಯಂತ 3 ಸಾವಿರ ಜವಳಿ ನವೋದ್ಯಮಗಳು ಸಕ್ರಿಯ

ಪ್ರಮುಖಾಂಶಗಳು

- ಯುನೆಸ್ಕೋ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ 12 ಮರಾಠಿ ಕೋಟೆಗಳ ಸೇರ್ಪಡೆಯಾಗಿರುವುದು ದೇಶಕ್ಕೆ ಹೆಮ್ಮೆಯ ವಿಚಾರ
- ಖಂಡೇರಿ ಕೋಟೆಯು ಸಮುದ್ರದ ಮಧ್ಯಭಾಗದಲ್ಲಿ ನಿರ್ಮಿಸಿದ ಅದ್ಭುತ ಕೋಟೆಯಾಗಿದೆ
- ಒಡಿಶಾದ ಮಯೂರ್‌ಭಂಜ್ ಜಿಲ್ಲೆಯ ಬುಡಕಟ್ಟು ಮಹಿಳೆಯರು ಸಂಥಾಲಿ ಸೀರೆ ಉತ್ಪಾದನೆಗೆ ಮರುಜೀವ ನೀಡಿರುವುದು ಶ್ಲಾಘನೀಯ
- ಜಾರ್ಖಂಡ್‌ನ ಗುಮ್ಲಾದಲ್ಲಿ ಮಾಜಿ ನಕ್ಸಲರಿಂದ ಮೀನುಗಾರಿಕೆ ಕೃಷಿ
- ನಕ್ಸಲ್‌ಪೀಡಿತ ಪ್ರದೇಶಗಳಲ್ಲಿ ಸ್ವಾವಲಂಬನೆಯ ಬದುಕು

ತ್ಯಾಜ್ಯ ನಿರ್ವಹಣೆ ಉಲ್ಲೇಖ

ಪಣಜಿ (ಪಿಟಿಐ): ಪಣಜಿಯಲ್ಲಿ ಮಹಿಳೆಯರ ನೇತೃತ್ವದಲ್ಲಿ ತ್ಯಾಜ್ಯದ ಸಮರ್ಪಕ ನಿರ್ವಹಣೆ ವ್ಯವಸ್ಥೆಯನ್ನು ಪ್ರಧಾನಿ ಮೋದಿ ಈ ವೇಳೆ ಪ್ರಶಂಸಿಸಿದರು. ರಾಜ್ಯದ ಕೆಲಸ ಮೆಚ್ಚಿ ಉಲ್ಲೇಖಿಸಿದ್ದಕ್ಕೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಧನ್ಯವಾದ ಸಲ್ಲಿಸಿದ್ದಾರೆ. 'ಪಣಜಿಯಲ್ಲಿ ಮಹಿಳೆಯರ ನೇತೃತ್ವದಲ್ಲಿ 16 ವಿವಿಧ ಭಾಗಗಳಲ್ಲಿ ತ್ಯಾಜ್ಯ ನಿರ್ವಹಿಸಲಾಗುತ್ತಿದೆ. ಇದಕ್ಕಾಗಿ ರಾಷ್ಟ್ರಪತಿಗಳ ಪುರಸ್ಕಾರವು ದೊರೆತಿದೆ. ಸ್ವಚ್ಛತೆಯು ಒಂದು ಸಲ, ಒಂದು ದಿನಕ್ಕೆ ಸೀಮಿತವಾಗಿಲ್ಲ. ಸ್ವಚ್ಛತೆಯನ್ನು ಪ್ರತಿ ನಿತ್ಯವೂ ಮುಂದುವರಿಸಿದರೆ, ಇಡೀ ದೇಶವೇ ಸ್ವಚ್ಛವಾಗಿರಲಿದೆ' ಎಂದು ಹೇಳಿದರು.

'ಆಪರೇಷನ್ ಸಿಂಧೂರ ಭಾರತದ ಶಕ್ತಿ ಅನಾವರಣ'



ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿನ ಗಂಗೈಕೊಂಡ ಚೋಳಪುರಂನಲ್ಲಿರುವ ಬೃಹದೀಶ್ವರ ದೇಗುಲಕ್ಕೆ ಭಾನುವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಗಂಗೈಕೊಂಡ ಚೋಳಪುರಂ (ಪಿಟಿಐ): 'ಭಾರತದ ಭದ್ರತೆ ಮತ್ತು ಸಾರ್ವಭೌಮತ್ವದ ಮೇಲೆ ದಾಳಿ ನಡೆಸಿದಲ್ಲಿ ದೇಶದ ಪ್ರತ್ಯುತ್ತರ ಹೇಗಿರುತ್ತದೆ ಎಂಬುದನ್ನು 'ಆಪರೇಷನ್ ಸಿಂಧೂರ'ದ ಮೂಲಕ ಜಗತ್ತಿಗೆ ತೋರಿಸಿದ್ದೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಎರಡು ದಿನ ತಮಿಳುನಾಡು ಪ್ರವಾಸ ಆರಂಭಿಸಿರುವ ನರೇಂದ್ರ ಮೋದಿ ಅವರು, ಚೋಳ ಸಾಮ್ರಾಜ್ಯದ ರಾಜ ರಾಜೇಂದ್ರ ಚೋಳ–1 ಅವರ ಜನ್ಮದಿನದ ಗೌರವಾರ್ಥವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತವನ್ನು ಗುರಿಯಾಗಿಸಿ ದಾಳಿ ನಡೆಸಿ ಸುರಕ್ಷಿತವಾಗಿ ಅಡಗಿ ಕೂರುವ ಜಾಗ ಈ ಭೂಮಿಯ ಮೇಲೆಯೇ ಇಲ್ಲ ಎಂಬುದನ್ನು ಈ ಕಾರ್ಯಾಚರಣೆಯು ಸಾಬೀತುಪಡಿಸಿದೆ ಎಂದರು.

'ಆಪರೇಷನ್ ಸಿಂಧೂರ ಕಾರ್ಯಾಚರಣೆಯು ದೇಶದಾದ್ಯಂತ ಹೊಸ ಆತ್ಮವಿಶ್ವಾಸವನ್ನು ನೀಡಿದೆ. ಇದರಿಂದ ಭಾರತದ ಸಾಮರ್ಥ್ಯವು ಜಗತ್ತಿನ ಎದುರು ಅನಾವರಣಗೊಂಡಿದೆ' ಎಂದು ಅಭಿಪ್ರಾಯಪಟ್ಟರು.

ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾ ಹಲವರು ಬ್ರಿಟನ್ನಿನ 'ಮ್ಯಾಗ್ನಾ ಕಾರ್ಟಾ' ವ್ಯವಸ್ಥೆಯನ್ನು ನೆನೆಯುತ್ತಾರೆ. ಆದರೆ ಚೋಳರ ಕಾಲದ ಕುದವೋಳೈ ವ್ಯವಸ್ಥೆಯು 'ಮ್ಯಾಗ್ನಾ ಕಾರ್ಟಾ' ವ್ಯವಸ್ಥೆಗೂ ಹಳೆಯದಾದದ್ದು ಎಂದು ಹೇಳಿದರು.

ಕುದವೋಳೈ ಎಂಬುದು ಚೋಳರ ಕಾಲ ಚುನಾವಣಾ ವ್ಯವಸ್ಥೆ.

7 ಗಂಟೆ ವಿಚಾರಣೆ

ಒಂದನೇ ಪುಟದಿಂದ...

ಸಂಜೆ 5 ಗಂಟೆವರೆಗೂ ಪ್ರವಾಸಿ ಬಂಗಲೆಯಲ್ಲೇ ಇದ್ದ ಮೊಹಾಂತಿ ಮುಂದಿನ ತನಿಖೆಯ ಬಗ್ಗೆ ತಂಡದ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದರು.

ಎಸ್‌ಐಟಿಯಲ್ಲಿರುವ ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್. ಅನುಚೇತ್, ಆಂತರಿಕ ಭದ್ರತಾ ವಿಭಾಗದ ಎಸ್.ಪಿ ಜಿತೇಂದ್ರ ಕುಮಾರ್ ದಯಾಮ ಹಾಗೂ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮಂಗಳೂರು ವಲಯದ ಪೊಲೀಸ್ ವರಿಷ್ಠಾಧಿಕಾರಿ ಸಿ.ಎ. ಸೈಮನ್ ಅವರು ಸಾಕ್ಷಿ ದೂರುದಾರನಿಂದ ಹೇಳಿಕೆ ದಾಖಲಿಸಿಕೊಳ್ಳುವ ವೇಳೆ ಹಾಜರಿದ್ದರು.

ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ಅವರು ಪ್ರಣವ್ ಮೊಹಾಂತಿ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಸಾಕ್ಷಿ ದೂರುದಾರ ಹಾಗೂ ಆತನ ಜೊತೆಗೆ ಬಂದಿದ್ದ ವಕೀಲರು ಬಂದ ಕಾರಿನಲ್ಲೇ ಅಜ್ಞಾತ ಸ್ಥಳಕ್ಕೆ ಸಂಜೆ ನಿರ್ಗಮಿಸಿದರು.

ನಕಲಿ ರಾಯಭಾರಿ ಕಚೇರಿ: ₹300 ಕೋಟಿಯಷ್ಟು ವಂಚನೆ?

ಲಖನೌ: ಸಣ್ಣ ರಾಷ್ಟ್ರಗಳ ಹೆಸರಿನಲ್ಲಿ ನಕಲಿ ರಾಯಭಾರಿ ಕಚೇರಿ ನಿರ್ವಹಿಸುತ್ತಿದ್ದ ವ್ಯಕ್ತಿಯನ್ನು ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆಯು (ಎಸ್‌ಟಿಎಫ್) ಬಂಧಿಸಿರುವ ಪ್ರಕರಣದ ತನಿಖೆಯು ಕುತೂಹಲಕಾರಿ ಮಾಹಿತಿಯನ್ನು ಅನಾವರಣಗೊಳಿಸುತ್ತಿದೆ.

ಹರ್ಷವರ್ಧನ್ ಜೈನ್ ಬಂಧಿತ. ಈತ ಸ್ವಿಟ್ಜರ್ಲೆಂಡ್‌ನಲ್ಲಿ ಎಹ್ಸಾನ್ ಅಲಿ ಸಯೀದ್ ಜೊತೆ ₹300 ಕೋಟಿ ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎಂಬ ಆಯಾಮದಲ್ಲೂ ಪೊಲೀಸರು ತನಿಖೆ ನಡೆಸಿದ್ದಾರೆ.

ಗಾಜಿಯಾಬಾದ್‌ನಲ್ಲಿ ಬಂಧನಕ್ಕೊಳಗಾದ ಜೈನ್, ಯಾವೊಂದು ದೇಶವೂ ಮನ್ನಣೆ ನೀಡದ ಅಂಟಾರ್ಕ್ಟಿಕಾದ ಸಣ್ಣ ರಾಷ್ಟ್ರ ವೆಸ್ಟಾರ್ಕ್ಟಿಕಾದ ರಾಯಭಾರಿ ಎಂದು ಹೇಳಿಕೊಂಡಿದ್ದಾನೆ. ಇಲ್ಲಿನ ಕವಿ ನಗರ ಪ್ರದೇಶದಲ್ಲಿರುವ ಅರಮನೆಯಂತಹ ಭವ್ಯ ಬಂಗಲೆಯೊಂದರಲ್ಲಿ ಈ ರಾಯಭಾರಿ ಕಚೇರಿಯನ್ನು ನಿರ್ವಹಿಸುತ್ತಿದ್ದ.

ರಾಜಕಾರಣಿಗಳು, ಅಧಿಕಾರಿಗಳೊಟ್ಟಿಗೆ ತನಗೆ ಸಂಪರ್ಕವಿದೆ ಎಂದು ಬಿಂಬಿಸಿಕೊಳ್ಳಲು ನಕಲಿ ಫೋಟೊಗಳನ್ನು ಜನರಿಗೆ ತೋರಿಸಿ ವಂಚಿಸುತ್ತಿದ್ದ ಎನ್ನಲಾಗಿದೆ. ಸಾಗರೋತ್ತರ ಉದ್ಯೋಗ ಹಗರಣ, ಹವಾಲಾ ಜಾಲ ಹಾಗೂ ಗೂಢಚಾರ ಚಟುವಟಿಕೆಗಳಲ್ಲಿ ಭಾಗಿಯಾಗಿರಬಹುದು ಎಂಬುದರ ಬಗ್ಗೆಯೂ ಪೊಲೀಸರ ತನಿಖೆ ನಡೆದಿದೆ.

10 ವರ್ಷಗಳಲ್ಲಿ 162 ಬಾರಿ ವಿದೇಶ ಯಾತ್ರೆ ನಡೆಸಿರುವ ಜೈನ್, ವಿವಾದಾತ್ಮಕ ಆಧ್ಯಾತ್ಮಿಕ ಗುರು ಚಂದ್ರಸ್ವಾಮಿ ಹಾಗೂ ಅಂತರರಾಷ್ಟ್ರೀಯ ಶಸ್ತ್ರಾಸ್ತ್ರ ವ್ಯಾಪಾರಿ ಅದ್ನಾನ್ ಖಶೋಗಿ ಜೊತೆಯೂ ನಿಕಟ ಸಂಪರ್ಕ ಹೊಂದಿದ್ದಾನೆ.

ಚಂದ್ರಸ್ವಾಮಿ ಮತ್ತು ಅಲಿ ಅವರೊಟ್ಟಿಗಿನ ವ್ಯವಹಾರಗಳನ್ನು ಹೊಂದಿದ್ದ ಡೈರಿಯನ್ನು ಹರ್ಷವರ್ಧನ್ ಕಚೇರಿಯಿಂದ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗಾಜಿನ ಸೇತುವೆ...

ಪಿಟಿಐ ಚಿತ್ರ



ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ವೈಭವವಾಡಿ ಸಮೀಪದ ನಾಪನೆ ಜಲಪಾತದ ಬಳಿ ನಿರ್ಮಿಸಿರುವ 'ಗಾಜಿನ ಸೇತುವೆ' ಮೇಲೆ ಪ್ರವಾಸಿಗರು ಹೆಜ್ಜೆ ಹಾಕಿ ಸಂಭ್ರಮಿಸಿದರು

ಸಂಕ್ಷಿಪ್ತ ಸುದ್ದಿ

ವರದಕ್ಷಿಣೆಗಾಗಿ ಮಹಿಳೆಯನ್ನು ಥಳಿಸಿ ಕೊಲೆ

ಮುಜಾಫರ್ ನಗರ (ಯುಪಿ) (ಪಿಟಿಐ): ವರದಕ್ಷಿಣೆಗಾಗಿ 28 ವರ್ಷದ ಮಹಿಳೆಯನ್ನು ಅತ್ತೆ–ಮಾವಂದಿರು ಥಳಿಸಿ ಕೊಂದಿರುವ ಘಟನೆ ಇಲ್ಲಿನ ಫುಲತ್ ಗ್ರಾಮದಲ್ಲಿ ನಡೆದಿದೆ.

ಶಮಾ ಕೊಲೆಗೀಡಾದ ಮಹಿಳೆ. ಮಹಿಳೆಯ ಪತಿ ಅನಸ್ ಸೇರಿದಂತೆ ಐವರ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ ಎಂದು ರತ್ನಪುರಿ ಠಾಣಾಧಿಕಾರಿ ತೇಜ್ ಪ್ರಪಾತ್ ಹೇಳಿದ್ದಾರೆ.

ಮಹಿಳೆಯು ಅನಸ್‌ನನ್ನು ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದರು. ಅಂದಿನಿಂದ ಅವರ ಅತ್ತೆ–ಮಾವಂದಿರು ₹5 ಲಕ್ಷ ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಎಂದು ಮಹಿಳೆಯ ಸಹೋದರ ದೂರು ನೀಡಿದ್ದಾರೆ.

ಬಿಎಂಡಬ್ಲ್ಯು ಕಾರು ಡಿಕ್ಕಿ–ಬಾಲಕಿ ಸಾವು

ನೋಯ್ಡಾ (ಪಿಟಿಐ): ವೇಗವಾಗಿ ಬಂದ ಬಿಎಂಡಬ್ಲ್ಯು ಕಾರೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ 5 ವರ್ಷದ ಬಾಲಕಿ ಮೃತಪಟ್ಟಿದ್ದು, ಇತರ ಇಬ್ಬರು ಗಾಯಗೊಂಡಿರುವ ಘಟನೆ ನೋಯ್ಡಾದ ಸೆಕ್ಟರ್ 20ರಲ್ಲಿ ನಡೆದಿದೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಶನಿವಾರ ತಡರಾತ್ರಿ ಬಾಲಕಿಯು ತನ್ನ ತಂದೆ ಮತ್ತು ಚಿಕ್ಕಪ್ಪನೊಂದಿಗೆ ಮಕ್ಕಳ ಆಸ್ಪತ್ರೆಯಿಂದ ಹೊರಬರುತ್ತಿದ್ದಂತೆ ಘಟನೆ ಸಂಭವಿಸಿದೆ. ಆಯಾತ್ ಮೃತ ಬಾಲಕಿ, ಮೊಹಮ್ಮದ್ ಮತ್ತು ರಾಜಾ ಗಾಯಗೊಂಡವರು.

ಘಟನೆ ಸಂಬಂಧ ಪೊಲೀಸರು ಯಶ್ ಶರ್ಮಾ (22) ಮತ್ತು ಅಭಿಷೇಕ್ ರಾವತ್ (22) ಎಂಬವರನ್ನು ಬಂಧಿಸಲಾಗಿದೆ

ಕೂಲಿ ಕಾರ್ಮಿಕ ತಾಯಿಯ ಮೂವರೂ ಹೆಣ್ಣುಮಕ್ಕಳು ಎನ್‌ಇಟಿಯಲ್ಲಿ ತೇರ್ಗಡೆ

ಯುಜಿಸಿ–ನೆಟ್: ಸಹೋದರಿಯರ ಸಾಧನೆ

ಬಠಿಂಡಾ (ಪಿಟಿಐ): ತಾಯಿ ದಿನಗೂಲಿ ಕಾರ್ಮಿಕರು. ತಂದೆ ಗುರುದ್ವಾರದಲ್ಲಿ 'ಗ್ರಂಥಿ'. ಇವರ ಮೂವರು ಪುತ್ರಿಯರು ಪಿಎಚ್.ಡಿ ಪ್ರವೇಶ, ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್) ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ಅರ್ಹತೆಗಾಗಿ ನಡೆಯುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (ಎನ್‌ಇಟಿ) ತೇರ್ಗಡೆಯಾಗಿದ್ದಾರೆ.

ಕನಿಷ್ಠ ಸಾಕ್ಷರತೆ ಹೊಂದಿರುವ ಪಂಜಾಬ್‌ನ ಮಾನಸಾ ಜಿಲ್ಲೆಯ ಬುಧ್‌ಲಾಡಾದ ರಿಂಪಿ ಕೌರ್ (28), ಬಿಯಾಂತ್ ಕೌರ್ (26) ಹಾಗೂ ಹರ್ದೀಪ್ ಕೌರ್ (23) ಸಾಧಕ ಸಹೋದರಿಯರು.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಎನ್‌ಇಟಿ ಫಲಿತಾಂಶವನ್ನು ಈಚೆಗೆ ಪ್ರಕಟಿಸಿದ್ದು, ಈ ಮೂವರೂ ವಿವಿಧ ವಿಷಯಗಳಲ್ಲಿ ತೇರ್ಗಡೆಯಾಗಿದ್ದಾರೆ.

'ನನ್ನ ಅಕ್ಕ ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕಿಯಾಗಲು ಬಯಸಿದ್ದಾರೆ. ನಾನು ಮತ್ತು ನನ್ನ ತಂಗಿ ಜೆಆರ್‌ಎಫ್‌ಗಾಗಿ ಶ್ರಮಿಸುತ್ತಿದ್ದು, ನಾವು ಅದನ್ನು ಪಡೆಯುತ್ತೇವೆ ಎಂಬ ವಿಶ್ವಾಸ ನಮಗಿದೆ' ಎಂದು ಬಿಯಾಂತ್ ಕೌರ್ ಹೇಳಿದರು.

'ಅಧ್ಯಯನ ಮಾತ್ರ ನಮ್ಮನ್ನು ಬಡತನದಿಂದ ಹೊರಗೆ ಕರೆತರಬಲ್ಲದು. ಯಶಸ್ಸಿಗೆ ದೃಢ ನಿರ್ಧಾರ ಹಾಗೂ ಕಠಿಣ ಪರಿಶ್ರಮ ಬೇಕು ಎಂಬುದನ್ನು ನಾವು ಕಂಡುಕೊಂಡಿದ್ದೆವು' ಎಂದು ಅವರು ತಿಳಿಸಿದರು.

ಮೂವರು ಸಹೋದರಿಯರಿಗೆ ಸಹೋದರನೊಬ್ಬನಿದ್ದು, ಆತ ಬಹುಕಾಲದಿಂದ ಅನಾರೋಗ್ಯದ ಸಮಸ್ಯೆ ಎದುರಿಸುತ್ತಿದ್ದಾನೆ.

ಹರ್ದೀಪ್ ಎರಡನೇ ಬಾರಿಗೆ ಯುಜಿಸಿ–ನೆಟ್‌ನಲ್ಲಿ ಅರ್ಹತೆ ಗಳಿಸಿದ್ದು, ಜೆಆರ್‌ಎಫ್ ಪಡೆಯಲಿಕ್ಕಾಗಿ ಕಠಿಣ ಪರಿಶ್ರಮ ಹಾಕುತ್ತಿದ್ದಾರೆ.

'ಮೂವರು ಹೆಣ್ಣುಮಕ್ಕಳು ನನಗೆ ಹೆಮ್ಮೆ. ಅವರ ಕಠಿಣ ಪರಿಶ್ರಮಕ್ಕೆ ಯಶಸ್ಸು ಸಿಕ್ಕಿದೆ. ತಮ್ಮ ಖರ್ಚನ್ನು ನಿಭಾಯಿಸಿಕೊಳ್ಳಲು ಕೆಲವು ದಿನ ಖಾಸಗಿ ಶಾಲೆಗಳಲ್ಲಿ ಕೆಲಸವನ್ನು ಮಾಡಿದ್ದರು. ಈಗ ತಮಗೆ ಬೇಕಾದುದನ್ನು ಪಡೆಯಲು ಸಮರ್ಥರಾಗಿರುವುದು ನನಗೆ ಸಂತಸ ತಂದಿದೆ' ಎಂದು ಇವರ ತಂದೆ ಬಿಕ್ಕರ್ ಸಿಂಗ್ ಹೇಳಿದರು.

ಮುಖ್ಯಾಂಶಗಳು

- ಪಂಜಾಬ್‌ನ ಮಾನಸಾ ಜಿಲ್ಲೆಯ ಬುಧ್‌ಲಾಡಾದ ಯುವತಿಯರ ಸಾಧನೆ
- 2ನೇ ಬಾರಿ ಯುಜಿಸಿ–ನೆಟ್‌ನಲ್ಲಿ ಅರ್ಹತೆ ಗಳಿಸಿದ ಹರ್ದೀಪ್
- ಅಕ್ಕನಿಗೆ ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕಿ ಆಗುವ ಬಯಕೆ

ಗ್ರೆನೇಡ್ ದಾಳಿ: ಬಂಧನ

ನವದೆಹಲಿ (ಪಿಟಿಐ): ಪಂಜಾಬ್ ಪೊಲೀಸ್ ಠಾಣೆಯೊಂದರ ಮೇಲೆ ನಡೆದ ಗ್ರೆನೇಡ್ ದಾಳಿ ಮತ್ತು ಶಸ್ತ್ರಾಸ್ತ್ರಗಳ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ 22 ವರ್ಷದ ವ್ಯಕ್ತಿಯೊಬ್ಬರನ್ನು ದೆಹಲಿಯಲ್ಲಿ ವಿಶೇಷ ಘಟಕದ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಗ್ಯಾರಂಟಿ'ಗೆ ಪರಿಶಿಷ್ಟರ ಹಣ

ಒಂದನೇ ಪುಟದಿಂದ...

ಎಸ್‌ಸಿ ಫಲಾನುಭವಿಗಳಿಗೆ ₹942.88 ಕೋಟಿ, ಎಸ್‌ಟಿ ಫಲಾನುಭವಿಗಳಿಗೆ ₹420.77 ಕೋಟಿ ಅನುದಾನ ಅಗತ್ಯವಿದೆ. ಹಿಂದಿನ ಸಾಲಿನಲ್ಲಿ ಎಸ್‌ಸಿಎಸ್‌ಪಿ ಅಡಿ ₹162.91 ಕೋಟಿ ಮತ್ತು ಟಿಎಸ್‌ಪಿ ಅಡಿ ₹67.94 ಕೋಟಿ ಸೇರಿ ಒಟ್ಟು ₹230.85 ಕೋಟಿ ಉಳಿದಿದೆ. ಪ್ರಸಕ್ತ ಸಾಲಿನಲ್ಲಿ ಡಿಬಿಟಿ ಯೋಜನೆಗೆ ಒದಗಿಸಿದ ಹಣದಲ್ಲಿ ₹537.96 ಕೋಟಿ (ಎಸ್‌ಸಿಎಸ್‌ಪಿ ₹376.71 ಕೋಟಿ, ಟಿಎಸ್‌ಪಿ ₹160.25 ಕೋಟಿ) ಉಳಿಕೆ ಆಗಬಹುದು ಎಂದೂ ಅಂದಾಜಿಸಲಾಗಿದೆ.

'ಗ್ಯಾರಂಟಿ'ಗಳ ಪೈಕಿ 'ಯುವ ನಿಧಿ' ಯೋಜನೆಗೆ ಎಸ್‌ಸಿಎಸ್‌ಪಿ ಅಡಿ ₹114 ಕೋಟಿ, ಟಿಎಸ್‌ಪಿ ಅಡಿ ₹48 ಕೋಟಿ ಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿ 2024–25ನೇ ಸಾಲಿನಲ್ಲಿ 28,234 ಎಸ್‌ಸಿ, 12,308 ಎಸ್‌ಟಿ ಫಲಾನುಭವಿಗಳು ಹಣ ಪಡೆದಿದ್ದಾರೆ. ಕೌಶಲ ಅಭಿವೃದ್ಧಿ ಇಲಾಖೆ ನೀಡಿರುವ ಫಲಾನುಭವಿಗಳ ವಿವರದ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಎಸ್‌ಸಿಎಸ್‌ಪಿ ಅಡಿ ₹101 ಕೋಟಿ, ಟಿಎಸ್‌ಪಿ ಅಡಿ ₹44 ಕೋಟಿ ಅನುದಾನ ಅಗತ್ಯವಿದೆ. ಉಳಿಕೆ ಮೊತ್ತವನ್ನು ಹಿಂಪಡೆದು, ಬೇಡಿಕೆ ಇರುವ ಕಾರ್ಯಕ್ರಮಗಳಿಗೆ ಮರುಹಂಚಿಕೆ ಮಾಡಬಹುದು ಎಂದೂ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗಲಿಲ್ಲ.

ವಾಷಿಂಗ್ಟನ್, ಜಡೇಜ ವೀರೋಚಿತ ಆಟ

ಶುಭಮನ್ ಗಿಲ್, ರವೀಂದ್ರ, ಸುಂದರ್ ಶತಕ: ಸೋಲಿನಿಂದ ಪಾರಾಗಿ ಡ್ರಾ ಸಾಧಿಸಿದ ಭಾರತ

• ಸಿದ್ನಿ ಕಿರಣ್

ಮ್ಯಾಂಚೆಸ್ಟರ್: ಸ್ಪಿನ್ ಆಲ್‌ರೌಂಡರ್‌ಗಳಾದ ರವೀಂದ್ರ ಜಡೇಜ ಮತ್ತು ವಾಷಿಂಗ್ಟನ್ ಸುಂದರ್ ಅವರು ಅಜೇಯ ಶತಕದೊಡನೆ ಭಾರತದ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಪರೂಪ ಎನ್ನಬಹುದಾದ ಪ್ರತಿಹೋರಾಟ ಪ್ರದರ್ಶಿಸಿದರು. ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾನುವಾರ ಒಂದು ಹಂತದಲ್ಲಿ ಕಠಿಣವಾಗಿ ಕಂಡಿದ್ದ ಡ್ರಾ ಸಾಧಿಸಲು ಇವರಿಬ್ಬರ ವೀರೋಚಿತ ಆಟ ನೆರವಾಯಿತು.

ಭಾರತದ 358 ರನ್‌ಗಳಿಗೆ ಉತ್ತರವಾಗಿ ಇಂಗ್ಲೆಂಡ್ 669 ರನ್‌ಗಳ ಭಾರಿ ಮೊತ್ತ ಪೇರಿಸಿತ್ತು. ನಂತರ ಭಾರತ ನಾಲ್ಕೇ ಎಸೆತಗಳಲ್ಲಿ 2 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ತಂಡವನ್ನು ಕುಸಿತದಿಂದ ಕಾಪಾಡಿದ್ದ ಕೆ.ಎಲ್.ರಾಹುಲ್ ಮತ್ತು ಶುಭಮನ್ ಗಿಲ್ ಅವರು ಎಷ್ಟು ಹೊತ್ತು ಕಳೆಯಬಹುದೆಂಬುದರ ಮೇಲೆ ಪಂದ್ಯದ ಭವಿಷ್ಯ ಅಡಗಿತ್ತು. 2 ವಿಕೆಟ್‌ಗೆ 174 ರನ್ ಗಳಿಸಿದ್ದ ಭಾರತ ಇನಿಂಗ್ಸ್ ಸೋಲು ತಪ್ಪಿಸಲು 137 ರನ್ ದೂರದಲ್ಲಿತ್ತು. ಈ ಹಂತದಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿದ ರಾಹುಲ್ ಮತ್ತು ಗಿಲ್ ಮೂರನೇ ವಿಕೆಟ್‌ಗೆ 188 ರನ್ ಸೇರಿಸಿದರು.

ಬೆನ್ ಸ್ಟೋಕ್ಸ್ ಅವರು ದಿನದ ಏಳನೇ ಓವರಿನಲ್ಲಿ ಇನ್‌ಸ್ವಿಂಗರ್ ಮೂಲಕ ಕೆ.ಎಲ್.ರಾಹುಲ್ (90) ವಿಕೆಟ್ ಪಡೆದಾಗ ಆತಂಕ ಎದುರಾಯಿತು. ಆಕರ್ಷಕ 103 ರನ್ ಗಳಿಸಿದ್ದ ನಾಯಕ ಶುಭಮನ್ ಗಿಲ್ ಅವರ ವಿಕೆಟ್ ಅನ್ನು ಊಟಕ್ಕೆ 6 ನಿಮಿಷಗಳಿರುವಾಗ ಜೋಫ್ರಾ ಆರ್ಚರ್ ಪಡೆದು ಪ್ರವಾಸಿ ತಂಡದ ಮೇಲಿನ ಒತ್ತಡ ಹೆಚ್ಚಿಸಿದರು.

ಆದರೆ ಸುಂದರ್ (ಔಟಾಗದೇ 101, 206ಎ) ಮತ್ತು ಜಡೇಜ (ಔಟಾಗದೇ 107, 185ಎ) ಅವರು ಮುರಿಯದ ಐದನೇ ವಿಕೆಟ್‌ಗೆ 203 ರನ್ ಜೊತೆಯಾಟದಲ್ಲಿ ಭಾಗಿಯಾಗಿ ಇಂಗ್ಲೆಂಡ್‌ನ ಲೆಕ್ಕಾಚಾರಗಳನ್ನು ಬುಡಮೇಲು ಗೊಳಿಸಿದರು. ಮೊದಲು ಎಚ್ಚರಿಕೆಯಿಂದ ಆಡಿದ ಇವರಿಬ್ಬರು ನಂತರ ಆತ್ಮವಿಶ್ವಾಸದಿಂದ ಆಡಿ ಪ್ರತ್ಯಾಕ್ರಮಣ ನಡೆಸಿದರು. ಪರಿವರ್ತನೆಯ ಹಾದಿಯಲ್ಲಿರುವ ತಂಡ ಗೌರವದ ಡ್ರಾ ಸಾಧಿಸಿತು. ಒಮ್ಮೊಮ್ಮೆ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಡ್ರಾ ಸಾಧಿಸುವುದೂ ಸಹ ವಿಜಯದಷ್ಟೇ ಸಂತೃಪ್ತಿ ನೀಡುತ್ತದೆ. ಭಾರತ ಡ್ರಾ ಆದಾಗ 143 ಓವರುಗಳನ್ನು ನಿಭಾಯಿಸಿ 4 ವಿಕೆಟ್‌ಗೆ 425 ರನ್ ಗಳಿಸಿತ್ತು.

ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಸರಣಿಯ ಎರಡನೇ ಟೆಸ್ಟ್ ತಂಡಕ್ಕೆ ಸುಂದರ್ ಅವರನ್ನು ಆಯ್ಕೆ ಮಾಡಿದ್ದು, ಆರಂಭದಿಂದಲೇ ಚರ್ಚೆಗೆ ಆಹಾರವಾಗಿತ್ತು. ಕೆಲವರು ಇದನ್ನು ಪ್ರಶ್ನಿಸಿದ್ದರು ಕೂಡ. ಬ್ಯಾಟಿಂಗಿಗೆ ನೆರವಾಗುವ ಪಿಚ್‌ಗಳಲ್ಲಿ ಕುಲದೀಪ್ ಅವರನ್ನು ತಂಡದ ಚಿಂತಕರ ಚಾವಡಿ ಆಯ್ಕೆ ಮಾಡಬೇಕೆಂಬುದು ಟೀಕಾಕಾರರ ಇಂಗಿತವಾಗಿತ್ತು. ಆದರೆ ಗಿಲ್ ಇದನ್ನು ನಿರ್ಲಕ್ಷಿಸಿ ಸುಂದರ್ ಬ್ಯಾಟಿಂಗ್ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟಿದ್ದರು.

ನಾಯಕ ತಮ್ಮ ಮೇಲಿಟ್ಟ ಭರವಸೆಯನ್ನು ವಾಷಿಂಗ್ಟನ್ ಅವರು ಹುಸಿಗೊಳಿಸಲಿಲ್ಲ. ನಿಷ್ಕಳಂಕ ಇನಿಂಗ್ಸ್ ಆಡಿದ ಅವರು ರಾಹುಲ್ ಅವರಷ್ಟೇ ಉತ್ತಮವಾಗಿ ಕಂಡರು. ಸಾಮಾನ್ಯವಾಗಿ ಎಂಟನೇ ಕ್ರಮಾಂಕದಲ್ಲಿ ಇಳಿಯುವ ಅವರನ್ನು ಅನುಭವಿ ಜಡೇಜ ಅವರಿಗಿಂತ ಮೊದಲೇ ಐದನೇ ಕ್ರಮಾಂಕಕ್ಕೆ ಬಡ್ತಿ ನೀಡಲಾಯಿತು.

ಆದರೆ ಒತ್ತಡ ಜೋರಾಗಿತ್ತು. ಸ್ಟೋಕ್ಸ್ ಆಕ್ರಮಣಕಾರಿಯಾಗಿದ್ದರು. ಪ್ರತಿ ಎಸೆತವೂ ಕುತೂಹಲಕ್ಕೆ ಕಾರಣವಾಗುತಿತ್ತು. ಒಂದು ಎಸೆತ ಗಿಲ್ ಅವರ ಕೈಗೆ ತಾಗಿದ ಮೇಲೆ ಹೆಲ್ಮೆಟ್‌ಗೆ ಬಡಿದಿತ್ತು ಕೂಡ. ಎಡಗೈ ಆಟಗಾರರ ವಿರುದ್ಧ ಉತ್ತಮ ದಾಖಲೆ ಹೊಂದಿರುವ ಜೋಫ್ರಾ ಆರ್ಚರ್ ಅವರನ್ನೂ ಇನ್ನೊಂದು ಕಡೆಯಿಂದ ಅವರು ದಾಳಿಗಿಳಿಸಿದರು.

ಆದರೆ 25 ವರ್ಷ ವಯಸ್ಸಿನ ಸುಂದರ್ ವಿಚಲಿತರಾಗಲಿಲ್ಲ. ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ದಾಖಲಿಸಿದ ಅವರು ಉತ್ತಮ ರಕ್ಷಣೆಯ ಆಟ ಪ್ರದರ್ಶಿಸಿದರು. ಚೆಂಡಿನ ಚಲನೆಯನ್ನು ಚೆನ್ನಾಗಿ ಗ್ರಹಿಸಿದರು. ಆದರೆ ರನ್ ಗಳಿಸುವ ಅವಕಾಶ ತಪ್ಪಿಸಲಿಲ್ಲ. ಹೀಗಾಗಿ ಸ್ಕೋರ್ ವೇಗ ಆಮೆಗತಿಯಲ್ಲಿರಲಿಲ್ಲ. ಸುಂದರ್ ಅವರಿಗೆ ಇನ್ನೊಂದು ಕಡೆಯಿಂದ ಜಡೇಜ ನೆರವು ನೀಡಿದರು. ಸ್ಲಿಪ್‌ನಲ್ಲಿ ಜೋ ರೂಟ್ ಅವರಿಂದ ಜೀವದಾನ ಪಡೆದಿದ್ದ ಜಡೇಜ ಅದಕ್ಕೆ ಆತಿಥೇಯರು ತಕ್ಕ ಬೆಲೆ ತೆರುವಂತೆ ಆಡಿದರು. ರಕ್ಷಣೆಯ ಜೊತೆಗೆ ಆಕ್ರಮಣವನ್ನೂ ಬೆರೆಸಿ ಆಡಿ, ಟೆಸ್ಟ್ ಕ್ರಿಕೆಟ್‌ನಲ್ಲಿ ಐದನೇ ಶತಕ ದಾಖಲಿಸಿದರು.

ಸರಣಿಯಲ್ಲಿ ಇಂಗ್ಲೆಂಡ್ 2–1 ಮುನ್ನಡೆ ಉಳಿಸಿಕೊಂಡಿದ್ದು, ಅಂತಿಮ ಪಂದ್ಯ ಆಗಸ್ಟ್ 31ರಂದು ಲಂಡನ್‌ನ ಕೆನ್ನಿಂಗ್ಟನ್ ಓವಲ್‌ನಲ್ಲಿ ನಡೆಯಲಿದೆ.



ರವೀಂದ್ರ ಜಡೇಜ
ಶುಭಮನ್ ಗಿಲ್
ವಾಷಿಂಗ್ಟನ್ ಸುಂದರ್
ಎಎಫ್‌ಪಿ / ಪಿಟಿಐ ಚಿತ್ರಗಳು

ಗಿಲ್ ದಾಖಲೆ

ಶುಭಮನ್ ಗಿಲ್ ಅವರು ಒಂದೇ ಸರಣಿಯಲ್ಲಿ ನಾಲ್ಕು ಶತಕ ದಾಖಲಿಸಿದ ಮೂರನೇ ನಾಯಕ ಎಂಬ ಹಿರಿಮೆಗೆ ಪಾತ್ರರಾದರು. ಕ್ರಿಕೆಟ್ ದಂತಕಥೆಗಳಾದ ಡಾನ್ ಬ್ರಾಡ್ಮನ್ ಮತ್ತು ಸುನಿಲ್ ಗಾವಸ್ಕರ್ ಈ ಸಾಧನೆ ಮಾಡಿದ್ದರು. ಗಿಲ್ ಟೆಸ್ಟ್‌ನಲ್ಲಿ ಒಂಬತ್ತನೇ ಶತಕ ಸಿಡಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 358 (114.1 ಓವರ್‌ಗಳಲ್ಲಿ)
ಇಂಗ್ಲೆಂಡ್ 669 (157.1 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ 4 ವಿಕೆಟ್‌ಗೆ 425 (143 ಓವರ್‌ಗಳಲ್ಲಿ) (ಶನಿವಾರ 2 ವಿಕೆಟ್‌ಗೆ 174)
ರಾಹುಲ್ ಎಲ್‌ಬಿಡಬ್ಲ್ಯು ಬಿ ಸ್ಟೋಕ್ಸ್ 90 (230ಎ, 4x8)
ಶುಭಮನ್ ಸಿ ಜೆಮಿ ಬಿ ಆರ್ಚರ್ 103 (238ಎ, 4x12)
ವಾಷಿಂಗ್ಟನ್ ಸುಂದರ್ ಔಟಾಗದೇ 101 (206ಎ, 4x9, 6x1)
ರವೀಂದ್ರ ಜಡೇಜ ಔಟಾಗದೇ 107 (185ಎ, 4x13, 6x1)
ಇತರೆ: 24 (ಬೈ 14, ಲೆಗ್‌ಬೈ 2, ವೈಡ್ 2, ನೋಬಾಲ್ 6)
ವಿಕೆಟ್ ಪತನ: 188-3 (ಕೆ.ಎಲ್.ರಾಹುಲ್, 70.2), 222-4 (ಶುಭಮನ್ ಗಿಲ್, 87.4)
ಬೌಲಿಂಗ್: ಕ್ರಿಸ್ ವೋಕ್ಸ್ 23-4-67-2, ಜೋಫ್ರಾ ಆರ್ಚರ್ 23–3–78-1, ಬ್ರೈಡನ್ ಕಾರ್ಸ್ 17-3-44-0, ಲಿಯಾಮ್ ಡಾಸನ್ 47-11-95-0, ಜೋ ರೂಟ್ 19-2-68-0, ಬೆನ್ ಸ್ಟೋಕ್ಸ್ 11-2-33–1, ಹ್ಯಾರಿ ಬ್ರೂಕ್ 3–0–24–0

ಫಲಿತಾಂಶ: ಪಂದ್ಯ ಡ್ರಾ, ಸರಣಿಯಲ್ಲಿ ಇಂಗ್ಲೆಂಡ್‌ಗೆ 2–1 ಮುನ್ನಡೆ

ಪೆಚ್ಚಾದ ಬೆನ್ ಸ್ಟೋಕ್ಸ್

ಸಾಕಷ್ಟು ನಾಟಕೀಯ ಘಟನೆಗಳನ್ನು ಕಂಡಿರುವ ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿ ಸರಣಿ ಭಾನುವಾರ ಅಂತಹದ್ದೇ ಇನ್ನೊಂದು ಪ್ರಸಂಗಕ್ಕೆ ಸಾಕ್ಷಿಯಾಯಿತು. ಈ ಪ್ರಕರಣದಲ್ಲಿ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಪೆಚ್ಚಾದರು.

ವಾಷಿಂಗ್ಟನ್ ಸುಂದರ್ - ರವೀಂದ್ರ ಜಡೇಜ ಜೊತೆಯಾಟ ಮುರಿಯಲು ಅವರು ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾಗಿದ್ದವು. ಕೊನೆಯ ಅವಧಿಯ ಡ್ರಿಂಕ್ಸ್ ವೇಳೆಗೆ ಸ್ಟೋಕ್ಸ್ ಅವರು ಡ್ರಾ ಪ್ರಸ್ತಾವವನ್ನು ಭಾರತದ ಮುಂದಿಟ್ಟರು. ಆ ವೇಳೆಗೆ ದಿನದಾಟ ಮುಗಿಯಲು 15 ಓವರ್‌ಗಳು ಬಾಕಿ ಇದ್ದವು.

ಆದರೆ, ಆ ಪ್ರಸ್ತಾವವನ್ನು ನಾಯಕ ಶುಭಮನ್ ಗಿಲ್ ತಿರಸ್ಕರಿಸಿ, ಶತಕದ ಹೊಸ್ತಿಲಲ್ಲಿದ್ದ ವಾಷಿಂಗ್ಟನ್ (ಔಟಾಗದೇ 80) ಮತ್ತು ಜಡೇಜ (ಔಟಾಗದೇ 89) ಅವರಿಗೆ ಬ್ಯಾಟಿಂಗ್ ಮುಂದುವರಿಸಲು ಅವಕಾಶ ಮಾಡಿಕೊಟ್ಟರು. ಹೀಗಾಗಿ, ಇಂಗ್ಲೆಂಡ್ ಬೌಲರ್‌ಗಳು ಅನಿವಾರ್ಯವಾಗಿ ಬೌಲಿಂಗ್ ಮಾಡಬೇಕಾಯಿತು.

ಆಟ ಮುಂದುವರಿಸಿದ ಜಡೇಜ, ಟೆಸ್ಟ್ ಕ್ರಿಕೆಟ್‌ನಲ್ಲಿ ಐದನೇ ಶತಕ ದಾಖಲಿಸಿದರೆ, ವಾಷಿಂಗ್ಟನ್ ಚೊಚ್ಚಲ ಟೆಸ್ಟ್ ಶತಕ ಪೂರೈಸಿ ಸಂಭ್ರಮಿಸಿದರು. ನಂತರದಲ್ಲಿ ಡ್ರಾ ಮಾಡಲು ಉಭಯ ತಂಡಗಳು ಒಪ್ಪಿದವು.

ಐದನೇ ಟೆಸ್ಟ್‌ಗೆ ಪಂತ್ ಅಲಭ್ಯ

ಮಾಂಚೆಸ್ಟರ್ (ಪಿಟಿಐ): ನಾಲ್ಕನೇ ಟೆಸ್ಟ್ ಪಂದ್ಯದ ಮೊದಲ ದಿನ ಕಾಲ್ಬೆರಳು ಮುರಿತಕ್ಕೊಳಗಾದ ಭಾರತದ ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಅವರು ಇಂಗ್ಲೆಂಡ್ ವಿರುದ್ಧದ ಐದನೇ ಮತ್ತು ಅಂತಿಮ ಟೆಸ್ಟ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ತಮಿಳುನಾಡಿನ ಬ್ಯಾಟರ್ ಎನ್. ಜಗದೀಶನ್ ಅವರು ಬದಲಿ ಆಟಗಾರನಾಗಿ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಇಂಗ್ಲೆಂಡ್ ವೇಗಿ ಕ್ರಿಸ್ ವೋಕ್ಸ್ ಎಸೆತವನ್ನು ರಿವರ್ಸ್ ಸ್ವೀಪ್ ಮಾಡಲು ಪ್ರಯತ್ನಿಸುವಾಗ ಪಂತ್ ಅವರ ಬಲಗಾಲಿಗೆ ಪೆಟ್ಟಾಗಿತ್ತು.



ದಿವ್ಯಾ ದೇಶಮುಖ್ (ಎಡಗಡೆ) ಮತ್ತು ಹಂಪಿ ಆಟದ ಆರಂಭಕ್ಕೆ ಮೊದಲು ಹಸ್ತಲಾಘವ ನೀಡಿದರು ಫಿಡೆ ಚಿತ್ರ

ವಿಶ್ವಕಪ್: ಹಂಪಿ–ದಿವ್ಯಾ ಫೈನಲ್ ಟೈಬ್ರೇಕರ್‌ಗೆ

ಬಟುಮಿ (ಜಾರ್ಜಿಯಾ), (ಪಿಟಿಐ): ಇಂಟರ್‌ನ್ಯಾಷನಲ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ಫಿಡೆ ಮಹಿಳಾ ಚೆಸ್ ವಿಶ್ವಕಪ್ ಫೈನಲ್ ಪಂದ್ಯದ ಎರಡನೇ ಕ್ಲಾಸಿಕಲ್ ಆಟದಲ್ಲಿ ಅಪಾಯಕ್ಕೆ ಆಹ್ವಾನ ನೀಡದೇ ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಜೊತೆ ಭಾನುವಾರ ಸುಲಭವಾಗಿ ಡ್ರಾ ಮಾಡಿಕೊಂಡರು. ಇದರಿಂದ ಎರಡು ಕ್ಲಾಸಿಕಲ್ ಪಂದ್ಯಗಳ ನಂತರ ಸ್ಕೋರ್ 1–1 ಸಮಬಲವಾಗಿದ್ದು, ಸೋಮವಾರ ನಡೆಯುವ ಟೈಬ್ರೇಕರ್ ಮೂಲಕ ವಿಜೇತರ ನಿರ್ಧಾರವಾಗಲಿದೆ.

ಭಾರತೀಯ ಆಟಗಾರ್ತಿಯರ ನಡುವೆ ಮೊದಲ ಬಾರಿ ನಡೆಯುತ್ತಿರುವ ಈ ಫೈನಲ್‌ನ ಮೊದಲ ಆಟದಲ್ಲಿ (ಶನಿವಾರ) ದಿವ್ಯಾ ತನಗೆ ದೊರಕಿದ್ ಭರವಸೆಯ ಆರಂಭವನ್ನು ಮೇಲುಗೈಯಾಗಿ ಪರಿವರ್ತಿಸಲು ವಿಫಲರಾಗಿದ್ದರು. ಆ ಪಂದ್ಯ ಡ್ರಾ ಆಗಿತ್ತು. ಆದರೆ ಎರಡನೇ ದಿನ ಕಪ್ಪು ಕಾಯಿಗಳಲ್ಲಿ ಆಡಿದ ದಿವ್ಯಾ, ‘ಕ್ವೀನ್ ಪಾನ್ ಓಪನಿಂಗ್’ ಕಂಡ ಎರಡನೇ ಆಟದಲ್ಲಿ ಹೆಚ್ಚಿನ ತೊಂದರೆ ಎದುರಿಸಲಿಲ್ಲ.

ಆಟ ಮಧ್ಯಮ ಹಂತ ತಲುಪಿದಾಗ ಹಂಪಿ ಬಳಿ ಜೋಡಿ ಬಿಷಪ್‌ಗಳಿದ್ದವು. ಆದರೆ ಇದಕ್ಕೆ ಬದಲಿಯಾಗಿ ನೈಟ್‌ಗಳನ್ನು (ಕುದುರೆಗಳನ್ನು) ಹೊಂದಿದ್ದ ದಿವ್ಯಾ ಅವರಿಗೆ ಅವುಗಳನ್ನು ಕರಾರುವಾಕ್ ಆಗಿ ನಡೆಸಿದರೆ ಹಂಪಿ ಅವರಿಂದ ತೊಂದರೆ ಎದುರಾಗದು ಎಂಬುದು ಮನವರಿಕೆಯಾಗಿತ್ತು. ಅವುಗಳನ್ನು ಪರಿಪೂರ್ಣ ನಡೆಸಿದರು. ಕೆಲವು ‘ಎಕ್ಸ್‌ಚೇಂಜ್’ಗಳೂ ನಡೆದವು. 34 ನಡೆಗಳ ನಂತರ ‘ನಡೆಗಳ ಪುನರಾವರ್ತನೆ’ (ಫೋಟೊಗ್ರಾಫಿಕ್ ಪೊಸಿಷನ್) ಆಧಾರದಲ್ಲಿ ಆಟ ಡ್ರಾ ಆಯಿತು.

ಟೈಬ್ರೇಕರ್‌ನಲ್ಲಿ 15 ನಿಮಿಷಗಳ ತಲಾ ಎರಡು ಆಟಗಳಿರುತ್ತವೆ. ಪ್ರತಿ ನಡೆಗೆ 10 ಸೆಕೆಂಡುಗಳ ‘ಇಂಕ್ರಿಮೆಂಟ್’ ನೀಡಲಾಗುತ್ತದೆ. ನಂತರವೂ ಸ್ಕೋರ್ ಸಮನಾದಲ್ಲಿ 10 ನಿಮಿಷಗಳ ಎರಡು ಆಟಗಳು ನಡೆಯುತ್ತವೆ. ಬಳಿಕವೂ ವಿಜೇತರ ಇತ್ಯರ್ಥವಾಗದಿದ್ದಲ್ಲಿ ಐದು ನಿಮಿಷಗಳ ತಲಾ ಎರಡು ಪಂದ್ಯಗಳು ನಡೆಯಲಿವೆ.

ಝೊಂಗ್‌ಯಿಗೆ ಮೂರನೇ ಸ್ಥಾನ

ಮಾಜಿ ವಿಶ್ವ ಚಾಂಪಿಯನ್, ಚೀನಾದ ತಾನ್ ಝೊಂಗ್‌ಯಿ ಅವರು ಎರಡನೇ ಕ್ಲಾಸಿಕಲ್ ಆಟದಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಹಾಗೂ ಸ್ವದೇಶದ ಟೀ ಲಿಂಗ್ಜಿ ಅವರನ್ನು 55 ನಡೆಗಳಲ್ಲಿ ಸೋಲಿಸಿದರು. ಮೊದಲ ಆಟ ಡ್ರಾ ಆಗಿದ್ದು, 1.5–0.5 ರಿಂದ ಗೆದ್ದ ತಾನ್ ಮೂರನೇ ಸ್ಥಾನ ಗಳಿಸಿ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆದರು.

ಈ ವಿಶ್ವಕಪ್‌ನಲ್ಲಿ ಫೈನಲ್ ತಲುಪಿರುವ ಭಾರತದ ಆಟಗಾರ್ತಿಯರು ಈ ಮೊದಲೇ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಸಂಪಾದಿಸಿದ್ದರು.

ದಕ್ಷಿಣ ವಲಯ ತಂಡಕ್ಕೆ ತಿಲಕ್ ಸಾರಥ್ಯ

ದುಲೀಪ್ ಟ್ರೋಫಿ: ತಂಡದಲ್ಲಿ ಪಡಿಕ್ಕಲ್, ವೈಶಾಖಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ತಂಡದ ಎಡಗೈ ಬ್ಯಾಟರ್ ಎನ್.ತಿಲಕ್ ವರ್ಮಾ ಅವರು ಇಲ್ಲಿ ಆಗಸ್ಟ್ 28ರಿಂದ ನಡೆಯಲಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ದಕ್ಷಿಣ ವಲಯ ತಂಡವನ್ನು ಮುನ್ನಡೆಸಲಿದ್ದಾರೆ. ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್, ವೇಗಿ ವೈಶಾಖ ವಿಜಯಕುಮಾರ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹೈದರಾಬಾದ್‌ನ 22 ವರ್ಷ ವಯಸ್ಸಿನ ತಿಲಕ್ ಅವರು ಭಾರತ ತಂಡಕ್ಕಾಗಿ ನಾಲ್ಕು ಏಕದಿನ ಮತ್ತು 25 ಟಿ20 ಪಂದ್ಯಗಳನ್ನು ಆಡಿದ್ದಾರೆ. ಈಚೆಗೆ ಕೌಂಟಿ ಕ್ರಿಕೆಟ್‌ನಲ್ಲಿ ಹ್ಯಾಂಪ್‌ಶೈರ್ ತಂಡಕ್ಕೆ ಆಡಿದ್ದ ಅವರು, ನಾಲ್ಕು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 100, 56, 47 ಮತ್ತು 112 ರನ್ ಗಳಿಸಿ ಗಮನ ಸೆಳೆದಿದ್ದರು.

ದುಲೀಪ್ ಟ್ರೋಫಿಗಾಗಿ ಭಾನುವಾರ 16 ಮಂದಿಯ ತಂಡವನ್ನು ಪ್ರಕಟಿಸಲಾಗಿದೆ. ಹಾಲಿ ರಣಜಿ ಟ್ರೋಫಿ ರನ್ನರ್ಸ್ ಅಪ್ ಕೇರಳ ತಂಡದಲ್ಲಿದ್ದ ನಾಲ್ವರಿಗೆ ಅವಕಾಶ ನೀಡಲಾಗಿದೆ. ಮೊಹಮ್ಮದ್ ಅಜರುದ್ದೀನ್ ಅವರನ್ನು ಉಪನಾಯಕನನ್ನಾಗಿ ನೇಮಕ ಮಾಡಲಾಗಿದೆ. ಎಂ.ಡಿ. ನಿಧೀಶ್, ಬಾಸಿಲ್ ಥಂಪಿ ಮತ್ತು ಸಲ್ಮಾನ್ ನಿಜಾರ್ ಅವರಿಗೂ ಮಣೆ ಹಾಕಲಾಗಿದೆ.



ತಿಲಕ್ ವರ್ಮಾ

ತಮಿಳುನಾಡಿನ ಸ್ಪಿನ್ನರ್ ಆರ್. ಸಾಯಿಕಿಶೋರ್, ಬ್ಯಾಟರ್ ನಾರಾಯಣ್ ಜಗದೀಶನ್ ಅವರೂ ತಂಡದಲ್ಲಿದ್ದಾರೆ. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ರಿಷಭ್ ಪಂತ್ ಗಾಯಗೊಂಡಿದ್ದರಿಂದ ಬದಲಿ ಆಟಗಾರನಾಗಿ ಜಗದೀಶನ್ ಭಾರತ ತಂಡಕ್ಕೆ ಆಯ್ಕೆಯಾಗಿದ್ದರು.

ರಣಜಿ ಟ್ರೋಫಿಯ ಕಳೆದ ಆವೃತ್ತಿಯಲ್ಲಿ ಕರ್ನಾಟಕದ ಪರ ಹೆಚ್ಚು ರನ್ ಗಳಿಸಿದ್ದ (516) ಆರ್. ಸ್ಮರಣ್ ಅವರು ಮೀಸಲು ಆಟಗಾರರ ಪಟ್ಟಿಯಲ್ಲಿದ್ದಾರೆ.

ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯು ಈ ವರ್ಷದಿಂದ ಮತ್ತೆ ಅಂತರ ವಲಯ ತಂಡಗಳ ಮಾದರಿಯಲ್ಲಿ ನಡೆಯಲಿದೆ. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಕೇಂದ್ರ ಮತ್ತು ಈಶಾನ್ಯ ವಲಯ ಸೇರಿದಂತೆ ಒಟ್ಟು ಆರು ತಂಡಗಳು ಸೆಣಸಾಟ ನಡೆಸಲಿವೆ. ನಾಲ್ಕು ದಿನಗಳ ಟೂರ್ನಿಯು ಇಲ್ಲಿನ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿ ನಡೆಯಲಿದೆ.

ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಉತ್ತರ ವಲಯವು ಪೂರ್ವ ವಲಯದ ವಿರುದ್ಧ; ಮಧ್ಯ ವಲಯವು ಈಶಾನ್ಯ ವಲಯದ ವಿರುದ್ಧ ಆಡಲಿವೆ. ದಕ್ಷಿಣ ವಲಯ ಮತ್ತು ಪಶ್ಚಿಮ ವಲಯಗಳು ನೇರ ಸೆಮಿಫೈನಲ್‌ಗೆ ಪ್ರವೇಶ ಪಡೆದಿವೆ.

ದಕ್ಷಿಣ ವಲಯ ತಂಡ ಹೀಗಿದೆ: ತಿಲಕ್ ವರ್ಮಾ (ನಾಯಕ), ಮೊಹಮ್ಮದ್ ಅಜರುದ್ದೀನ್ (ಉಪ ನಾಯಕ), ತನ್ಮಯ್ ಅಗರವಾಲ್, ದೇವದತ್ತ ಪಡಿಕ್ಕಲ್, ಮೋಹಿತ್ ಕಾಳೆ, ಸಲ್ಮಾನ್ ನಿಜಾರ್, ನಾರಾಯಣ್ ಜಗದೀಶನ್, ಟಿ.ವಿಜಯ್, ಆರ್. ಸಾಯಿ ಕಿಶೋರ್, ತನಯ್ ತ್ಯಾಗರಾಜನ್, ವೈಶಾಖ ವಿಜಯ್‌ಕುಮಾರ್, ಎಂ.ಡಿ. ನಿಧೀಶ್, ರಿಕಿ ಭುಯಿ, ಬಾಸಿಲ್ ಎನ್.ಪಿ, ಗುರ್ಜಪ್ನೀತ್ ಸಿಂಗ್, ಸ್ನೇಹಲ್ ಕೌತಂಕರ್.

ಅರ್ಣವ್, ಸಾಕ್ಷ್ಯಗೆ ಪ್ರಶಸ್ತಿ ‘ಡಬಲ್’

ಪ್ರಜಾವಾಣಿ ವಾರ್ತೆ

ಮೈಸೂರು: ಅರ್ಣವ್ ಮಿಥುನ್ ಹಾಗೂ ಸಾಕ್ಷ್ಯ ಸಂತೋಷ್ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ‘ಹೋಪ್ಸ್’ ಮತ್ತು 13 ವರ್ಷದ ಒಳಗಿನವರ ಬಾಲಕ–ಬಾಲಕಿಯರ ವಿಭಾಗಗಳೆಡರಲ್ಲೂ ಅಗ್ರ ಪ್ರಶಸ್ತಿ ಎತ್ತಿ ಹಿಡಿದರು.

ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದ ಜಿಮ್ನಾಷಿಯಂ ಹಾಲ್‌ನಲ್ಲಿ ಆಯೋಜಿಸಿದ್ದ ಟೂರ್ನಿಯ ಬಾಲಕರ ಹೋಪ್ಸ್ ವಿಭಾಗದ ಫೈನಲ್ಸ್‌ನಲ್ಲಿ ಅರ್ಣವ್ 11-6, 13-11, 11-6ರಿಂದ ಶರ್ವಿಲ್ ಕರಂಬೈಕರ್ ಅವರನ್ನು ಮಣಿಸಿದರು. ಸೆಮಿಫೈನಲ್ಸ್‌ನಲ್ಲಿ ಅರ್ಣವ್ 11- 2, 11-8, 11-2ರಿಂದ ಧ್ರುವ್ ಅವರನ್ನು ಹಾಗೂ ಶರ್ವಿಲ್ 11-5, 11-5, 11-9ರಿಂದ ಮುಕುಂದ್ ರಾವ್ ಎದುರು ಜಯ ಗಳಿಸಿದರು.

13 ವರ್ಷದ ಒಳಗಿನ ಬಾಲಕರ ವಿಭಾಗದ ಫೈನಲ್ಸ್‌ನಲ್ಲಿ ಅರ್ಣವ್ 11-6, 11-9, 11-13, 11-8ರಿಂದ ಶರ್ವಿಲ್ ಅವರನ್ನು ಮಣಿಸಿದರು.



ಪ್ರಶಸ್ತಿಯೊಂದಿಗೆ ಅರ್ಣವ್ ಮಿಥುನ್ ಹಾಗೂ ಸಾಕ್ಷ್ಯ ಸಂತೋಷ್

ಬಾಲಕಿಯರ ಹೋಪ್ಸ್ ವಿಭಾಗದ ಫೈನಲ್‌ನಲ್ಲಿ ಸಾಕ್ಷ್ಯ 11-7, 11-7, 11-5ರಿಂದ ಸಾನ್ವಿ ಹರಿಪ್ರಸಾದ್ ರಾವ್ ವಿರುದ್ಧ ಗೆದ್ದರು.

ಸೆಮಿಫೈನಲ್ಸ್‌ನಲ್ಲಿ ಸಾಕ್ಷ್ಯ 11-3, 13-11, 11-4ರಿಂದ ತಮನ್ನಾ ಹಾಗೂ ಸಾನ್ವಿ 6-11 , 11-7 , 12-10 , 11–9ರಿಂದ ನಂದನಾ ವಿರುದ್ಧ ಗೆದ್ದರು.

13 ವರ್ಷದ ಒಳಗಿನ ಬಾಲಕಿಯರ ಫೈನಲ್‌ನಲ್ಲಿ ಸಾಕ್ಷ್ಯ 7-11, 5-11, 11-9, 11-8, 11-7ರಿಂದ ಯುಕ್ತಾ ಹರ್ಷರನ್ನು ಮಣಿಸಿದರು.

ವಿಶ್ವ ವಿವಿ ಗೇಮ್ಸ್: ಭಾರತಕ್ಕೆ ಒಟ್ಟು 12 ಪದಕ

ಸ್ಟೀಪಲ್‌ಚೇಸರ್ ಅಂಕಿತಾಗೆ ಬೆಳ್ಳಿ

ಎಸ್ಸೆನ್ (ಜರ್ಮನಿ) (ಪಿಟಿಐ): ಭಾರತದ ಸ್ಟಿಪಲ್‌ಚೇಸರ್ ಅಂಕಿತಾ ಧ್ಯಾನಿ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ 3000 ಮೀಟರ್ ಓಟದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಬೆಳ್ಳಿ ಪದಕ ಜಯಿಸಿದರು. ಪುರುಷರ 4x100 ಮೀಟರ್ ರಿಲೆ ತಂಡವು ಕಂಚಿನ ಪದಕ ಗೆದ್ದುಕೊಂಡಿತು.

ಎರಡು ಚಿನ್ನ, ಐದು ಬೆಳ್ಳಿ ಮತ್ತು ಐದು ಕಂಚಿನ ಪದಕದೊಂದಿಗೆ ಭಾರತದ ಅಭಿಯಾನಕ್ಕೆ ತೆರೆಬಿತ್ತು. 12 ಪದಕ ಗೆದ್ದ ಭಾರತ, ಪದಕ ಪಟ್ಟಿಯಲ್ಲಿ 20ನೇ ಸ್ಥಾನ ಗಳಿಸಿತು. 79 ಪದಕ ಗೆದ್ದ ಜಪಾನ್ (34 ಚಿನ್ನ, 21 ಬೆಳ್ಳಿ, 24 ಕಂಚು) ಮತ್ತು 74 ಪದಕ ಜಯಿಸಿದ ಚೀನಾ (30 ಚಿನ್ನ, 27 ಬೆಳ್ಳಿ, 17 ಕಂಚು) ಕ್ರಮವಾಗಿ ಮೊದಲೆರಡು ಸ್ಥಾನ ಪಡೆಯಿತು.

ಟ್ರ್ಯಾಕ್ ವಿಭಾಗದಲ್ಲಿ ಭಾರತದ ಹಲವು ಸ್ಪರ್ಧಿಗಳು ಅಂತಿಮ ದಿನ ಕಣದಲ್ಲಿದ್ದರೂ ಕೇವಲ ಎರಡು ಪದಕ ಗೆಲ್ಲಲು ಸಾಧ್ಯವಾಯಿತು. 23 ವರ್ಷದ ಅಂಕಿತಾ 9 ನಿಮಿಷ 32.99 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಅವರು ತಮ್ಮ ಹಿಂದಿನ ಶ್ರೇಷ್ಠ ಸಮಯಕ್ಕಿಂತ ಏಳು ಸೆಕೆಂಡ್ ಬೇಗನೆ ದಡ ಸೇರಿದರು. ಫಿನ್‌ಲ್ಯಾಂಡ್‌ನ ಇಲೋನಾ ಮಾರಿಯಾ ಮೊನೊನೆನ್ (9:31.86) ಚಿನ್ನದ ಪದಕ ಗೆದ್ದುಕೊಂಡರು.



ಸ್ಟೀಪಲ್‌ಚೇಸರ್ ಅಂಕಿತಾ ಧ್ಯಾನಿ

ಅಂಕಿತಾ ಅವರು ಶುಕ್ರವಾರ ನಡೆದ ಹೀಟ್ ಒಂದರಲ್ಲಿ 9ನಿ. 54.79 ಸೆಕೆಂಡುಗಳಲ್ಲಿ ಗುರಿ ಮುಟ್ಟಿ, ಅಗ್ರಸ್ಥಾನದೊಂದಿಗೆ ಫೈನಲ್ ತಲುಪಿದ್ದರು. ಫೈನಲ್ ಸ್ಪರ್ಧೆಯಲ್ಲಿ ಆರಂಭದಿಂದಲೇ ಅಗ್ರ ಐದರಲ್ಲೇ ಉಳಿದಿದ್ದ ಭಾರತದ ಅಥ್ಲೀಟ್, ಕೊನೆಯ ಹಂತದಲ್ಲಿ ವೇಗವನ್ನು ಹೆಚ್ಚಿಸಿಕೊಂಡು, ಕೇವಲ 0.13 ಸೆಕೆಂಡ್‌ಗಳಿಂದ ಚಿನ್ನ ತಪ್ಪಿಸಿಕೊಂಡರು.

ಲಾಲು ಪ್ರಸಾದ್ ಭೋಯ್, ಅನಿಮೇಶ್ ಕುಜೂರ್, ಮಣಿಕಂಠ ಹೋಬಳಿಧರ ಮತ್ತು ಮೃತ್ಯುಂ ಜಯರಾಮ್ ಅವರನ್ನೊಳಗೊಂಡ ಪುರುಷರ ರಿಲೆ ತಂಡವು 38.89 ಸೆಕೆಂಡುಗಳಲ್ಲಿ ಗುರಿ ತಲುಪಿತು. ದಕ್ಷಿಣ ಕೊರಿಯಾ ತಂಡದ (38.50 ಸೆ.) ಚಿನ್ನ ಗೆದ್ದರೆ, ದಕ್ಷಿಣ ಆಫ್ರಿಕಾ (38.80 ಸೆ) ಬೆಳ್ಳಿ ತನ್ನದಾಗಿಸಿಕೊಂಡಿತು.

ತ್ರಿವಳಿ ಮಹಿಳೆಯರ 20 ಕಿ.ಮೀ. ರೇಸ್‌ವಾಕ್‌ನಲ್ಲಿ ಮುನಿತಾ ಪ್ರಜಾಪತಿ, ಮಾನ್ಸಿ ನೇಗಿ ಮತ್ತು ಸೇಜಲ್ ಸಿಂಗ್ ಕಂಚಿನ ಪದಕ ಗೆದ್ದರು.

ರ‍್ಯಾಲಿ: ಮಸ್ಕರೇನ್ಹಸ್-ಕರುಂಬಯ್ಯ ಜೋಡಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಡೀನ್ ಮಸ್ಕರೇನ್ಹಸ್ ಮತ್ತು ಸಹ ಚಾಲಕ ಕೆ.ಎಸ್. ಕರುಂಬಯ್ಯ ಜೋಡಿಯು ಎಫ್‌ಎಂಎಸ್‌ಸಿಐ ಇಂಡಿಯನ್ ನ್ಯಾಷನಲ್ ರ‍್ಯಾಲಿ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನಲ್ಲಿ ಕೊಯಮತ್ತೂರಿನ ಬ್ಲೂಬ್ಯಾಂಡ್ ರ‍್ಯಾಲಿಯನ್ನು ಗೆದ್ದುಕೊಂಡಿತು.

ಟೀಂ ಸಿಡ್ವಿನ್ ಇಂಡಿಯಾ ರೇಸಿಂಗ್ ತಂಡವನ್ನು ಪ್ರತಿನಿಧಿಸುತ್ತಿರುವ ಮಸ್ಕರೇನ್ಹಸ್- ಕರುಂಬಯ್ಯ ಜೋಡಿಗೆ ಬೆಂಗಳೂರಿನ ಅರ್ಕಾ ಮೋಟಾರ್ ಸ್ಪೋರ್ಟ್ಸ್‌ನ ಕರ್ಣ ಕಡೂರು ಮತ್ತು ಅನುಭವಿ ಮೂಸಾ ಷರೀಫ್ ಅವರಿಂದ ನಿಕಟ ಸ್ಪರ್ಧೆ ಎದುರಾಯಿತು. ಆದರೆ, ಮಂಗಳೂರು–ಕೊಡಗಿನ ಜೋಡಿಯು 1 ಗಂಟೆ 29 ನಿಮಿಷ ಮತ್ತು 9.4 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಜಯ ಸಾಧಿಸಿತು. ಈ ಮೂಲಕ ತಮ್ಮ ಚೊಚ್ಚಲ ಪ್ರವೇಶದಲ್ಲೇ ಗೆಲುವಿನ ಆರಂಭ ಪಡೆಯಿತು.

ಕರ್ಣ ಕಡೂರು ಮತ್ತು ಮೂಸಾ ಜೋಡಿಯು (01:29:37.1) ಕೇವಲ 1.1 ಸೆಕೆಂಡ್ ಅಂತರದಲ್ಲಿ ಟಿಎಸ್‌ಐ ರೇಸಿಂಗ್‌ನ ಸಿಡ್ವಿನ್‌ನ ಆದಿತ್ಯ ಠಾಕೂರ್ ಮತ್ತು ವೀರೇಂದ್ರ ಕಶ್ಯಪ್ (01:29:38.2) ಅವರನ್ನು ಹಿಂದಿಕ್ಕಿ ಎರಡನೇ ಸ್ಥಾನ ಪಡೆಯಿತು.



ಪ್ರಶಸ್ತಿ ಗೆದ್ದ ಡೀನ್ ಮಸ್ಕರೇನ್ಹಸ್ ಮತ್ತು ಸಹ ಚಾಲಕ ಕೆ.ಎಸ್. ಕರುಂಬಯ್ಯ



ಪ್ರತಿಭೆಯನ್ನು ಪ್ರದರ್ಶಿಸಲು ಸಿದ್ಧರಾಗಿದ್ದ ಕ್ರಿಕೆಟ್ ಆಟಗಾರ್ತಿಯರು

ಮಹಾರಾಣಿ ಟ್ರೋಫಿ ಕ್ರಿಕೆಟ್: ಆಟಗಾರ್ತಿಯರ ಪ್ರತಿಭಾನ್ವೇಷಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮೈಸೂರು ವಾರಿಯರ್ಸ್ ತಂಡವು ಮಹಾರಾಣಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗಾಗಿ ಇಟಗಲ್‌ಪುರ ಸಮೀಪದ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ಭಾನುವಾರ ಆಟಗಾರ್ತಿಯರ ಪ್ರತಿಭಾನ್ವೇಷಣೆ ನಡೆಸಿತು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು (ಕೆಎಸ್‌ಸಿಎ) ಇದೇ ಮೊದಲ ಬಾರಿಗೆ ಮಹಿಳಾ ಕ್ರಿಕೆಟಿಗರಿಗಾಗಿ ಟೂರ್ನಿ ಆಯೋಜಿಸುತ್ತಿದೆ. ಅದಕ್ಕಾಗಿ ಇದೇ 29ರಂದು ಕೆಎಸ್‌ಸಿಎಯಲ್ಲಿ ಕ್ರೀಡಾಪಟುಗಳ ಹರಾಜು ಪ್ರಕ್ರಿಯೆ ನಡೆಯಲಿದೆ.

ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಮೈಸೂರು ವಾರಿಯರ್ಸ್, ಮಂಗಳೂರು ಡ್ರಾಗನ್ಸ್, ಹುಬ್ಬಳ್ಳಿ ಟೈಗರ್ಸ್, ಶಿವಮೊಗ್ಗ ಲಯನ್ಸ್ ಸೇರಿ 5 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಆಲೂರು ಮೈದಾನದಲ್ಲಿ ಆಗಸ್ಟ್ 4ರಿಂದ ಟೂರ್ನಿ ನಡೆಯಲಿದೆ. 10ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಅಗರಬತ್ತಿ ತಯಾರಕರಾದ ಎನ್. ಆರ್. ಗ್ರೂಪ್ ಅಧೀನದ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡವು ಯುವ ಆಟಗಾರ್ತಿಯರನ್ನು ಗುರುತಿಸಲು ಪ್ರತಿಭಾನ್ವೇಷಣೆ ಹಮ್ಮಿಕೊಂಡಿತ್ತು. ಇಲ್ಲಿ ಗುರುತಿ ಸಲಾಗುವ 60 ರಿಂದ 70 ಮಂದಿಯನ್ನು ಹರಾಜು ಪ್ರಕ್ರಿಯೆಗೆ ಶಿಫಾರಸು ಮಾಡಲಿದೆ.

ಮೈಸೂರು ವಾರಿಯರ್ಸ್ ತಂಡದ ಮಾಲೀಕ ಅರ್ಜುನ್ ರಂಗ, ವ್ಯವಸ್ಥಾಪಕ ಎಂ.ಆರ್.ಸುರೇಶ್, ಮುಖ್ಯ ಕೋಚ್ ಕರುಣಾ ಜೈನ್, ಸಹಾಯಕ ಕೋಚ್ ರಜತ್.ಎಸ್, ಭಾರತ ಟೆಸ್ಟ್ ಕ್ರಿಕೆಟ್ ತಂಡದ ಆಟಗಾರ್ತಿ ಶುಭಾ ಸತೀಶ್, ರಾಜ್ಯ ಆಟಗಾರ್ತಿಯರಾದ ನಿರೀಕ್ಷಾ, ದಿಶಾ, ಸಲೋನಿ.ಪಿ, ಲಿಯಾಂಕಾ ಶೆಟ್ಟಿ ಉಪಸ್ಥಿತರಿದ್ದರು.

ಪರಿಣಿತಾಗೆ ಶ್ರೇಷ್ಠ ಬಾಕ್ಸರ್ ಪ್ರಶಸ್ತಿ

ಬೆಂಗಳೂರು: ನಗರದ ಗ್ಲೇಡಿಯೇಟರ್ಸ್ ಬಾಕ್ಸಿಂಗ್ ಅಕಾಡೆಮಿಯ ಬಾಕ್ಸರ್‌ಗಳು, ಬೆಂಗಳೂರಿನಲ್ಲಿ ಶನಿವಾರ ಮುಕ್ತಾಯಗೊಂಡ ಎರಡು ದಿನಗಳ ರಾಜ್ಯ ಸಬ್ ಜೂನಿಯರ್ (15 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನ, ಎರಡು ಬೆಳ್ಳಿ, ಎರಡು ಕಂಚಿನ ಪದಕ ಗೆದ್ದುಕೊಂಡಿದ್ದಾರೆ.



ಕಂಠೀರವ ಕ್ರೀಡಾಂಗಣದ ಬಾಕ್ಸಿಂಗ್ ಹಾಲ್‌ನಲ್ಲಿ ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಸಂಸ್ಥೆ ಆಶ್ರಯದಲ್ಲಿ ಸ್ಪರ್ಧೆಗಳು ನಡೆದವು.

ಬಾಲಕಿಯರ 52 ರಿಂದ 55 ಕೆ.ಜಿ. ವಿಭಾಗದಲ್ಲಿ ಚಿನ್ನ ಗೆದ್ದ ಪರಿಣಿತಾ ಎಂ. ‘ಶ್ರೇಷ್ಠ ಬಾಕ್ಸರ್’ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರು ಫೈನಲ್‌ನಲ್ಲಿ ಬೆಳಗಾವಿಯ ಇವಾಂಜಲಿನ್ ವಿರುದ್ಧ ಜಯಗಳಿಸಿದರು.

ಶ್ರೀನಿವಾಸ ರಾವ್ ಎಸ್ ಅವರು 37 ರಿಂದ 40 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಫೈನಲ್‌ನಲ್ಲಿ 3– 2 ರಿಂದ ಕ್ರೀಡಾ ಪ್ರಾಧಿಕಾರದ ದಿನೇಶ್ ವಿರುದ್ಧ ಜಯಗಳಿಸಿದರು. ವೈಭವ ಸಾಯಿ ಎಸ್. 61 ರಿಂದ 64 ಕೆ.ಜಿ. ವಿಭಾಗದಲ್ಲಿ ವಿಜೇತರಾದರು. 30 ರಿಂದ 33 ಕೆ.ಜಿ. ವಿಭಾಗದಲ್ಲಿ ತರುಣ್ ಎಸ್., 55 ರಿಂದ 58 ಕೆ.ಜಿ. ವಿಭಾಗದಲ್ಲಿ ಫ್ರಾಂಕ್ಲಿನ್ ಸಿ. ಬೆಳ್ಳಿಯ ಪದಕಗಳನ್ನು ಗೆದ್ದುಕೊಂಡರು.

ಎಸ್. ಜಸ್ವಂತ್ ಮತ್ತು ರಿಖಿತ್ ಡೇರಿಯೊ ಎಂ. ಅವರು ಕಂಚಿನ ಪದಕ ಗಳಿಸಿದರು ಎಂದು ಪ್ರಕಟಣೆ ತಿಳಿಸಿದೆ.

ವಿಶ್ವ ಈಜು ಚಾಂಪಿಯನ್‌ಷಿಪ್: ಕೇಟಿ ಲೆಡೆಕಿಗೆ ಮೂರನೇ ಸ್ಥಾನ

ಮೆಕಿಂಟೋಷ್‌ಗೆ ಫ್ರೀಸ್ಟೈಲ್ ಚಿನ್ನ

ಸಿಂಗಪುರ (ಎಎಫ್‌ಪಿ): ಕೆನಡಾದ ಹದಿಹರೆಯದ ಈಜು ತಾರೆ ಸಮ್ಮರ್ ಮೆಕಿಂಟೋಷ್ ಎದುರಾಳಿಗಳನ್ನು ಆರಾಮವಾಗಿ ಹಿಂದೆಹಾಕಿ ವಿಶ್ವ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀಟರ್ ಫ್ರೀಸ್ಟೈಲ್ ಚಿನ್ನ ಗೆದ್ದರು. ಅಮೆರಿಕದ ದಿಗ್ಗಜ ಈಜುಗಾರ್ತಿ ಕೇಟಿ ಲೆಡೆಕಿ ಮೂರನೇ ಸ್ಥಾನಕ್ಕೆ ಸರಿದರು.

ಭಾನುವಾರ ನಡೆದ ಈ ಸ್ಪರ್ಧೆಯಲ್ಲಿ, 18 ವರ್ಷ ವಯಸ್ಸಿನ ಮೆಕಿಂಟೋಷ್ 3ನಿಮಿಷ 56.26 ಸೆಕೆಂಡುಗಳಲ್ಲಿ ಸ್ಪರ್ಧೆಯನ್ನು ಮುಗಿಸಿದರು. ಚೀನಾದ ಲೀ ಬಿಂಗ್ಜೀ ಅವರನ್ನು ಎರಡು ಸೆಕೆಂಡುಗಳ ಅಂತರದಿಂದ ಹಿಂದೆಹಾಕಿದರು. ಲೆಡೆಕಿ (3ನಿ.48.49ಸೆ) ಕಂಚಿನ ಪಕದ ಪಡೆದರು. ವಿಶ್ವ ದಾಖಲೆ ಹೊಂದಿರುವ ಸಮ್ಮರ್ ಅವರಿಗೆ ಇದು ಮೊದಲ ವಿಶ್ವ ಚಾಂಪಿಯನ್‌ಷಿಪ್ ಚಿನ್ನ. ಅವರು ಇಲ್ಲಿ ಐದು ಚಿನ್ನಗಳನ್ನು ಗೆಲ್ಲುವ ಗುರಿಹೊಂದಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಮೆಕಿಂಟೋಷ್ ಮತ್ತು ಲೆಡೆಕಿ ಪೈಪೋಟಿ ಜೋರಾಗಿಯೇ ನಡೆದಿತ್ತು. ಈ ಕೂಟದಲ್ಲಿ ಅದು ಮುಂದುವರಿಯುತ್ತಿದೆ. ಇವರಿಬ್ಬರೂ 800 ಮೀ. ಫ್ರೀಸ್ಟೈಲ್‌ನಲ್ಲೂ ಕಣಕ್ಕಿಳಿಯುತ್ತಿದ್ದು, ಈ ಸ್ಪರ್ಧೆ ‘ರೇಸ್ ಆಫ್ ದಿ ಚಾಂಪಿಯನ್‌ಷಿಪ್’ ಎಂದು ಕರೆಯಲಾಗಿದೆ.

ಆರಂಭದಲ್ಲೇ ಮುನ್ನಡೆ ಪಡೆದ ಮೆಕಿಂಟೋಷ್ ನಂತರ ಹಿಂತಿರುಗಿ ನೋಡಲಿಲ್ಲ. ಎದುರಾಳಿಗಳನ್ನು ನಿರಾಯಾಸವಾಗಿ ಹಿಂದೆಹಾಕಿ ತಮ್ಮ ಅಂತರ ಹೆಚ್ಚಿಸುತ್ತ ಹೋದರು. ಉತ್ತಮ ಲಯದೊಡನೆ ಅವರು ಈ ಕೂಟಕ್ಕೆ ಆಗಮಿಸಿದ್ದಾರೆ. ಜೂನ್‌ನಲ್ಲಿ ಅವರು ಕೆನಡಿಯನ್ ಟ್ರಯಲ್ಸ್‌ನಲ್ಲಿ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ವಿಶ್ವದಾಖಲೆ (3:54.18) ಸ್ಥಾಪಿಸಿದ್ದರು.



ಚಿನ್ನದ ಪದಕ ಗೆದ್ದ ಸಮ್ಮರ್ ಮೆಕಿಂಟೋಷ್ —ಎಎಫ್‌ಪಿ ಚಿತ್ರ

ಒಲಿಂಪಿಕ್ ಚಾಂಪಿಯನ್, ಆಸ್ಟ್ರೇಲಿಯಾದ ಅರಿಯರ್ನ್ ಟಿಟ್ಮಸ್ ಅವರು 2028ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುವ ಉದ್ದೇಶದಿಂದ ಸಿಂಗಪುರಕ್ಕೆ ಬಂದಿಲ್ಲ.

ಮೆಕಿಂಟೋಷ್ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 200 ಮೀ. ಬಟರ್‌ಫ್ಲೈ, 200 ಮೀ. ಮೆಡ್ಲೆ ಮತ್ತು 400 ಮೀ. ಮೆಡ್ಲೆಯಲ್ಲಿ ಚಿನ್ನ ಗೆದ್ದಿದ್ದರು. 400 ಮೀ. ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಪದಕವನ್ನೂ ಗಳಿಸಿದ್ದರು.

ನಿರಾಸೆಗೊಳಿಸದ ಯು ಝಿದಿ: ವಿಶ್ವ ಈಜು ರಂಗದಲ್ಲಿ ಪದಾರ್ಪಣೆ ಮಾಡಿದ ಚೀನಾದ 12 ವರ್ಷ ವಯಸ್ಸಿನ ಈಜು ಪ್ರತಿಭೆ ಯು ಝಿದಿ ನಿರಾಸೆ ಮೂಡಿಸಲಿಲ್ಲ. ಅವರು ಮೊದಲ ದಿನ 200 ಮೀ. ವೈಯಕ್ತಿಕ ಮೆಡ್ಲೆಯಲ್ಲಿ 2ನಿ.11.90 ಸೆ.ಗಳ ಅವಧಿಯೊಡನೆ ಗುರಿಮುಟ್ಟಿ ಸೆಮಿಫೈನಲ್ ತಲುಪಿದರು. ಅರ್ಹತೆ ಪಡೆದ 16 ಮಂದಿಯಲ್ಲಿ ಅವರ ತೆಗೆದುಕೊಂಡ ಸಮಯ 15ನೇ ಉತ್ತಮ ಎನಿಸಿತು.

ಆದರೆ ಅವರ ವರ್ಷದ ಅತ್ಯುತ್ತಮ ಅವಧಿ (2:10.63) ಇದಕ್ಕಿಂತ ಉತ್ತಮವಾಗಿದೆ.

ಯು ಈ ಕೂಟದಲ್ಲಿ 400 ಮೀ. ವೈಯಕ್ತಿಕ ಮೆಡ್ಲೆ ಮತ್ತು 200 ಮೀ. ಬಟರ್‌ಫ್ಲೈನಲ್ಲೂ ಕಣಕ್ಕಿಳಿಯುತ್ತಿದ್ದಾರೆ. 200 ಮೀ. ಮೆಡ್ಲೆ ಸ್ಪರ್ಧೆ ಅವರಿಗೆ ಈ ಮೂರರಲ್ಲಿ ಕಡಿಮೆ ಮೆಚ್ಚಿನದ್ದು.

ವಿಶ್ವ ಅಕ್ವೆಟಿಕ್ಸ್, ವಿಶ್ವ ಚಾಂಪಿಯನ್‌ಷಿಪ್‌ಗೆ ವಯೋಮಿತಿಯನ್ನು 14ಕ್ಕೆ ನಿಗದಿಪಡಿಸಿದೆ. ಆದರೆ ಅರ್ಹತಾ ಮಟ್ಟ ದಾಟಿದಲ್ಲಿ ಅದಕ್ಕಿಂತ ಕೆಳ ವಯಸ್ಸಿನ ಈಜುಪಟುಗಳಿಗೂ ಪಾಲ್ಗೊಳ್ಳಲು ಅವಕಾಶವಿದೆ.

ನಿರಾಸೆ ಮೂಡಿಸಿದ ಆರ್ಯನ್, ಲಿಖಿತ್

ಸಿಂಗಪುರ (ಪಿಟಿಐ): ಭಾರತದ ಆರ್ಯನ್ ನೆಹ್ರಾ ಮತ್ತು ಎಸ್. ಪಿ. ಲಿಖಿತ್ ಅವರು ಭಾನುವಾರ ಆರಂಭವಾದ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ತಮ್ಮ ಸ್ಪರ್ಧೆಗಳಲ್ಲಿ ಹೆಚ್ಚಿನ ಸಾಧನೆ ತೋರಲಿಲ್ಲ. ಆರ್ಯನ್ ಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾದರೆ, ಲಿಖಿತ್ ತಮ್ಮ ಸ್ಪರ್ಧೆಯ ಸೆಮಿಫೈನಲ್ ಸಹ ತಲುಪಲಾಗಲಿಲ್ಲ.



ಲಿಖಿತ್

ಪುರುಷರ 400 ಮೀ. ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ಕಣಕ್ಕಿಳಿದಿದ್ದ ನೆಹ್ರಾ 4ನಿ.00.39 ಸೆ.ಗಳಲ್ಲಿ ದೂರವನ್ನು ಕ್ರಮಿಸಿ ಹೀಟ್‌ನಲ್ಲಿ ಏಳನೇ ಸ್ಥಾನ ಮತ್ತು ಒಟ್ಟಾರೆ 37ನೇ ಸ್ಥಾನ ಗಳಿಸಿದರು.

ಪುರುಷರ 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಕಣಕ್ಕೆ ಇಳಿದ ಕರ್ನಾಟಕದ ಲಿಖಿತ್ 1ನಿ.01.99 ಸೆ.ಗಳಲ್ಲಿ ಗುರಿ ತಲುಪಿ ಒಟ್ಟಾರೆ 40ನೇ ಸ್ಥಾನ ಪಡೆದರು. ಈ ಸ್ಪರ್ಧೆಯಲ್ಲಿ ಅತಿ ವೇಗವಾಗಿ ಈಜಿದ 16 ಮಂದಿ ಸೆಮಿಫೈನಲ್‌ಗೆ ಅರ್ಹತೆ ಪಡೆದರು.